ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 19 ಮಂಗಳವಾರ 2024

ಸಂಪುಟ: 45 | ಸಂಚಿಕೆ: 212 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸೈಟ್ ಆವಾಗ್ಲೇ ವಾಪಸ್ ಕೊಟ್ಟಿದ್ರೆ ಇಷ್ಟೆಲ್ಲಾ ಆಗ್ತಿರಲಿಲ್ಲ...!

● ಮುಡಾ ಹಗರಣದ ಬಗ್ಗೆ ಸಿದ್ದರಾಮಯ್ಯರಿಗೆ ಕೇಂದ್ರ ಸಚಿವ ಸೋಮಣ್ಣ ಹಿತನುಡಿ! ನಿಜ ಅಲ್ವಾ! ● ಪಕ್ಷ ಬೇರೆಯಾದರೂ ಒಂದೇ ಕೊಳದಲ್ಲಿ ಈಜುವ ಮೀನುಗಳಿದ್ದಂತೆ ನಮ್ಮ ರಾಜಕಾರಣಿಗಳು!

ಬೆಂಗಳೂರು, ನ.18– ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವ ವಿ. ಸೋಮಣ್ಣ ಇಂದು ಆಕಸ್ಮಿಕವಾಗಿ ಮುಖಾ ಮುಖಿಯಾದರು. ಈ ವೇಳೆ ಮುಡಾ ಸೈಟ್ ವಿವಾದದ ಬಗ್ಗೆ ಸಂಭಾಷಿಸಿದರು. ನೀವು 'ಆ ಸೈಟ್ ಆವಾಗ್ಲೇ ವಾಪಸ್ ಕೊಟ್ಟಿದ್ರೆ ಇಷ್ಟೆಲ್ಲಾ ಆಗ್ತಿರಲಿಲ್ಲ' ಎಂದು ಸೋಮಣ್ಣ, ಸಿದ್ದರಾಮಯ್ಯರಿಗೆ ಹೇಳಿದರು.

ಮುಂದುವರೆದು ವಿ.ಸೋಮಣ್ಣ, 'ನೀವು (ಸಿದ್ದರಾಮಯ್ಯ) ಸೈಟನ್ನು ಅಂದೇ ವಾಪಸ್ ಮಾಡಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಸಿದ್ದರಾಮಯ್ಯ ಬಗ್ಗೆ ನಾನು ಎದುರುಗಡೆ ಏನಿದ್ದರೂ ಹೇಳುವವನು. ಬೇರೆಯವರ ಹಾಗೆ ಹಿಂದುಗಡೆ ಕುತಂತ್ರ ಮಾಡುವುದು ಗೊತ್ತಿಲ್ಲ. ನನ್ನ ಮಾತು ಕೇಳಿದ್ದರೆ ಹೀಗೆ ಆಗುತ್ತಿರಲಿಲ್ಲ' ಎಂದು ಅತೀವ ಕಳಕಳಿ ವ್ಯಕ್ತಪಡಿಸಿದರು.

'ಅದು ಯಾವುದೋ ಒಂದು ಸಣ್ಣದು. ಅದನ್ನು ಅವತ್ತೇ ಮಾಡಿದ್ದರೆ ಚನ್ನಾಗಿತ್ತು. ಅದೊಂದು ಆಗಲೇ ಸರಿ ಮಾಡಿದ್ದರೆ ಇನ್ನೂ ಹೈಕ್ಲಾಸ್ ಇತ್ತು. ಸದನದಲ್ಲಿ ಏಕೆ ಇಷ್ಟು ಕೋಟಿ ಅಲ್ಲ, ಅಷ್ಟು ಕೋಟಿ ಅಂತಾ ಹೇಳಿದ್ರಿ, ನಾವು ಹೇಳಿದ್ವಾ ನಿಮಗೆ ಹೇಳೋಕೆ? ನಾನೇನು ಸದನದಲ್ಲಿ ಇದ್ನಾ?' ಎಂದೂ ಕೈ ಹಿಡಿದುಕೊಂಡು ಕುಚುಕು ಸಲಹೆ ಬೇರೆ. ಇದಕ್ಕೆ ಆತ್ಮೀಯವಾಗೇ ಗದರಿದ ಸಿದ್ದ ರಾಮಯ್ಯ, 'ಏಯ್ ಗೊತ್ತಿಲ್ಲದೆ ಏನೇನೋ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ಸಚಿವ ವಿ.ಸೋಮಣ್ಣ ಮುಖಾಮುಖಿ

ಮಾತಾಡ್ತೀಯಾ. ಹಾಗಲ್ಲಾ, ನನ್ನ ಮಾತು ಕೇಳು. ಲ್ಯಾಂಡ್ ಗ್ರಾಬಿಂಗ್ ಆಕ್ಟ್ ಪ್ರಕಾರ ಮುಡಾದಿಂದ ಪ್ರಕ್ರಿಯೆಯಲ್ಲಿ ಸಮಸ್ಯೆ ಆಗಿದೆ ಎಂದು ವಿವರಣೆ ನೀಡಿದರು. ಅಷ್ಟರಲ್ಲಿ ಮಾಧ್ಯಮದವರು ಸುತ್ತುವರಿದಾಗ ಸಂಭಾಷಣೆ ಬಂದ್ ಆಯ್ತು.

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲದೆ, ಇಡಿ ಕೂಡಾ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದೆ.

ಈಗಾಗಲೇ ಲೋಕಾಯುಕ್ತ ವಿಚಾರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಜರಾಗಿದ್ದಾರೆ. ಪ್ರಕರಣ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರು 14 ಸೈಟ್‌ಗಳನ್ನು ಮುಡಾಗೆ ವಾಪಸ್ ಕೊಟ್ಟಿದ್ದಾರೆ.

ಅದಿರಲಿ, ಹಗರಣ, ಆರೋಪ, ಭ್ರಷ್ಟಾಚಾರ, ಆಪಾದನೆ... ವಗೈರೆ ಬಗ್ಗೆ ತಲೆ ಕೆಡಿಸಿಕೊಳ್ಳುವವರು ಜನ ಅಷ್ಟೇ! ಆದರೆ ಆರೋಪಿತ ರಾಜಕಾರಣಿಗಳಿಗೆ ಯಾವ ಚಿಂತೆಯೂ ಇರಲ್ಲ. ಕಾರಣ, ಪಕ್ಷಾತೀತವಾಗಿ ಅವರಿಗೆ ಸಲಹೆ–ಸಾಂತ್ವನ ಹರಿದು ಬರುತ್ತಿರುತ್ತವೆ. ಬಚಾವಾಗುವ ಅವಕಾಶಗಳ ಬಾಗಿಲೇ ತೆರೆದಿರುತ್ತದೆ. ಎಷ್ಟೇ ಆಗಲೀ, ಪಕ್ಷ ಯಾವುದಾದರು ರಾಜಕಾರಣಿಗಳು ಒಂದೇ ಕೊಳದ ಮೀನುಗಳಲ್ಲವೇ!?

ವಿಪಕ್ಷಗಳಿಗೆ ಕೋವಿಡ್ ಅಕ್ರಮ ಪ್ರತ್ಯಾಸ್ತ್ರ...!

ಹಿರಿಯ 10 ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ಸಭೆ; ಮುಡಾ, ವಾಲ್ಮೀಕಿ ನಿಗಮ, ವಕ್ಫ್ ಭೂಮಿ, ಬಿಪಿಎಲ್ ಕಾರ್ಡ್ ಗೊಂದಲ ಹೀಗೆ ನಾನಾ ಹಗರಣಗಳಿಗೆ ಸಂಬಂಧಿಸಿ ವಿಪಕ್ಷಗಳ ದಾಳಿ; ಪ್ರತಿಪಕ್ಷಗಳ ಮೇಲೆ 'ಕೋವಿಡ್' ಅಕ್ರಮ ಪ್ರತ್ಯಾಸ್ತ್ರ ಬಳಕೆಗೆ ಸೂಚನೆ; ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ವಿರೋಧಿಗಳು ಮುಗಿಬೀಳದಂತೆ ಎಚ್ಚರ ವಹಿಸಲು ಸಲಹೆ



ಬೆಂಗಳೂರು, ನ.18 (ಕೆಎಂಶಿ)–ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಒಂದರ ಮೇಲೊಂದು ಗಂಭೀರ ಆರೋಪಗಳು ಕೇಳಿ ಬರುತ್ತಲೇ ಇವೆ. ಇವೆಲ್ಲವೂ ವಿಪಕ್ಷಗಳಿಗೆ ಆಹಾರವಾಗಿದ್ದು, ಸರ್ಕಾರ ತೀವ್ರ ಮುಜುಗರಕ್ಕೀಡಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಸಂಜೆ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ 10 ಆಪ್ತ ಸಚಿವರ ಮಹತ್ತರ ಸಭೆ ನಡೆಸಿ, ವಿಪಕ್ಷಗಳನ್ನು ಹಣಿಯುವ ಸಂಬಂಧ ಕಾರ್ಯತಂತ್ರ ರೂಪಿಸಿದ್ದಾರೆ.

ಮುಡಾ ಹಗರಣದ ಜಾಡಿನಲ್ಲಿ ಮುಂದುವರಿದಿರುವ ಇಡಿ ನಡಿಗೆ, ವಾಲ್ಮೀಕಿ ನಿಗಮದ ಹಗರಣ, ವಕ್ಫ್ ಮಂಡಳಿ ಭೂಮಿ ವಿವಾದ, ಬಿಪಿಎಲ್ ಪಡಿತರ ಚೀಟಿ ಗೊಂದಲದ ವಿಚಾರಗಳನ್ನು ಪ್ರತಿಪಕ್ಷಗಳು ಸಮರ್ಥವಾಗಿ ಬಳಸಿಕೊಂಡು ಸರ್ಕಾರದ ವಿರುದ್ಧ ಮುಗಿಬೀಳುತ್ತಿವೆ. ಈ ಮಧ್ಯೆ ಡಿ. 9ರಿಂದ ಬೆಳಗಾವಿ ಅಧಿವೇಶನ ನಡೆಯಲಿದ್ದು, ಅಧಿವೇಶನದಲ್ಲಿ ಪ್ರತಿಪಕ್ಷಗಳ ಕೈ ಮೇಲಾಗುವ ಸಾಧ್ಯತೆಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳ ವೇಗಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ. ವಕ್ಫ್ ಆಸ್ತಿ ವಿವಾದ ಮುಂದಿಟ್ಟುಕೊಂಡು ಬಿಜೆಪಿ ರಾಜ್ಯವ್ಯಾಪಿ ಹೋರಾಟ ಕೈಗೆತ್ತಿ ಕೊಳ್ಳುತ್ತಿರುವುದು ಒಳಗೊಂಡು ಸರಕಾರದ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುತ್ತಿರುವ ವಿದ್ಯಮಾನಗಳ ಕುರಿತು ಸಭೆಯಲ್ಲಿ ಗಹನವಾದ ಚರ್ಚೆ ನಡೆದಿದೆ.

ಕೋವಿಡ್ ಅಕ್ರಮ ಪ್ರತ್ಯಸ್ತ್ರ: ವಾಲ್ಮೀಕಿ ನಿಗಮ, ಮುಡಾ ಹಾಗೂ ವಕ್ಫ್ ವಿವಾದದಿಂದ ಸರಕಾರದ ವರ್ಚಸ್ಸಿಗೆ ಪೆಟ್ಟು ಬಿದ್ದಿರುವುದನ್ನು ಅರಿತ ಸಭೆ, ಪ್ರತಿಯಾಗಿ ಪ್ರತಿಪಕ್ಷವನ್ನು ಹಣಿಯುವ ಮಾರ್ಗೋಪಾಯ ಹಾಗೂ ಅದಕ್ಕಾಗಿ ಕೈಗೆತ್ತಿಕೊಳ್ಳಬೇಕಾದ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ಪೈಕಿ ಪ್ರಮುಖವಾಗಿ ಕೋವಿಡ್ ಕಾಲದ ಅಕ್ರಮಗಳ ಅಮಾನವೀಯ ಮುಖವು ನ್ಯಾ. ಕುನ್ಹಾ ತನಿಖಾ ವರದಿಯಲ್ಲೇ ಬಹಿರಂಗವಾಗಿದ್ದು, ಬಿಜೆಪಿಯನ್ನು ಕಟ್ಟಿಹಾಕಲು ಇದಕ್ಕಿಂತ ದೊಡ್ಡ ಅಸ್ತ್ರ ಬೇಕಿಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ಮೂಡಿದೆ. ನ್ಯಾ. ಮೈಕೇಲ್ ಕುನ್ಹಾ ಮಧ್ಯಂತರ ವರದಿ ಆಧರಿಸಿ ಪ್ರತಿಪಕ್ಷ ಬಿಜೆಪಿ ವಿರುದ್ಧ ತೀವ್ರ ರೀತಿ ಆಕ್ರಮಣಕಾರಿಯಾಗಿ ● 9ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರ ಕೆಡವಲು 100 ಕೋಟಿ ಆಫರ್!

● ಮಂಡ್ಯ ಕಾಂಗ್ರೆಸ್ ಶಾಸಕ ರವಿ ಗಣಿಗ ಆರೋಪ ● ಕಾಂಗ್ರೆಸ್‌ನ ಇಬ್ಬರು ಶಾಸಕರಿಗೆ ಬಿಜೆಪಿಯಿಂದ ಆಮಿಷ; ಶೀಘ್ರ ದಾಖಲೆ ಬಿಡುಗಡೆ ● ಗಣಿಗ ಅವರು ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕರಿಂದ ಬೇಡಿಕೆ ನಿರಾಕರಣೆ



ಶಾಸಕ ರವಿಕುಮಾರ್ ಗಣಿಗ

ಮಂಡ್ಯ,ನ.18–ಬಿಜೆಪಿಯಿಂದ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ನೀಡಿದ್ದಾರೆಂಬ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ಬೆನ್ನಲ್ಲೇ ಮಂಡ್ಯದ ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ ಸ್ಫೋಟಕ ಹೇಳಿಕೆ ನೀಡಿದ್ದು, ಸರ್ಕಾರ ಕೆಡವಲು 50 ಅಲ್ಲ 100 ಕೋಟಿ ಆಫರ್ ನೀಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಮುಖಂಡರು ನಮ್ಮ ಪಕ್ಷದ ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ್ ಹಾಗೂ ಚಿಕ್ಕಮಗಳೂರು ಶಾಸಕ ತಿಮ್ಮಯ್ಯ ಅವರನ್ನು ಸಂಪರ್ಕಿಸಿದ್ದಾರೆ. ಈ ಬಗ್ಗೆ ಶೀಘ್ರದಲ್ಲೇ ಸಾಕ್ಷಿ ದಾಖಲೆ ಬಿಡುಗಡೆ ಮಾಡುತ್ತೇನೆ ಎಂದರು. ಬಿಜೆಪಿ–ಜೆಡಿಎಸ್ ನಾಯಕರು ನಮ್ಮ ಸರ್ಕಾರ ಕೆಡವುವ ತವಕದಲ್ಲಿದ್ದಾರೆ. 50 ಕಾಂಗ್ರೆಸ್ ಶಾಸಕರಿಗೆ ಆಮಿಷ ಒಡ್ಡಿದ್ದರು. 50 ಕೋಟಿಗೆ ಒಪ್ಪಿ ಎಂದು 100 ಕೋಟಿ ಆಫರ್ ನೀಡಿದ್ದಾರೆ. ಕಳೆದ ಸರ್ಕಾರದಲ್ಲಿ ಲೂಟಿ ಮಾಡಿರುವ ಹಣದಿಂದ ಕಾಂಗ್ರೆಸ್ ● 9ನೇ ಪುಟಕ್ಕೆ

ಬಿಜೆಪಿಗೆ ಕಾಂಗ್ರೆಸ್ ಶಾಸಕರನ್ನು ಆಗ ಕಳುಹಿಸಿದ್ದೇ ಸಿದ್ದರಾಮಯ್ಯ!

ಪ್ರಹ್ಲಾದ್ ಜೋಶಿ ಬಾಂಬ್



ಧಾರವಾಡ, ನ.18–ಬಿಜೆಪಿ ಸರ್ಕಾರ ರಚನೆಗೆ ಕೆಲ ಶಾಸಕರ ಸಿದ್ದರಾಮಯ್ಯನವರೇ ಕಳುಹಿಸಿದ್ದರು ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆಯ ಸಚಿವ ಪ್ರಹ್ಲಾದ್ ಜೋಶಿ ಬಾಂಬ್ ಸಿಡಿಸಿದ್ದಾರೆ. ಬಿಜೆಪಿ ಆಪರೇಷನ್ ಕಮಲ ಮಾಡಲು ಮುಂದಾಗುತ್ತಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದ ಅವರು, ಕಳೆದ ಬಾರಿ ಬಿಜೆಪಿ ಸರ್ಕಾರ ರಚನೆ ಮಾಡೋವಾಗ ಶಾಸಕರನ್ನು ಕಳುಹಿಸಿದ್ದೇ ಸಿದ್ದರಾಮಯ್ಯ ಎಂದು ಸ್ಫೋಟಕ ವಿಚಾರ ತಿಳಿಸಿದರು. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಮುಂದುವರೆಯಬಾರದು ಎಂಬ ಕಾರಣಕ್ಕೆ ಸಿದ್ದರಾಮಯ್ಯನವರೇ ಕೆಲ ಶಾಸಕರನ್ನು ಕಳುಹಿಸಿದ್ದರು. ಹೀಗಾಗಿ ನಾವು ಸರ್ಕಾರ ರಚನೆ ಮಾಡಿದ್ದೆವು. ಈ ಬಾರಿ ಅವರಿಗೆ ಬಹುಮತ ಇದೆ. ನಾವು ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು. ಬಿಜೆಪಿ 100 ಕೋಟಿ ನೀಡಿದ ● 11ನೇ ಪುಟಕ್ಕೆ

ಅನರ್ಹ ಬಿಪಿಎಲ್ ಪಡಿತರ ಚೀಟಿ ಎಪಿಎಲ್‌ಗೆ ಪರಿವರ್ತನೆ

ಯಾವುದೇ ಬಿಪಿಎಲ್ ಕಾರ್ಡ್ ರದ್ದು ಮಾಡಲ್ಲ; ವರ್ಗಾವಣೆ ಅಷ್ಟೇ ಮಾಡಿದ್ದೇವೆ



ಬೆಂಗಳೂರು, ನ.18(ಕೆಎಂಶಿ)– ಅನರ್ಹರು ಪಡೆದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್‌ಗೆ ವರ್ಗಾಯಿಸಲಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಬಡತನರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನೀಡಿರುವ ಈ ಸವಲತ್ತನ್ನು ದೊಡ್ಡ ಪ್ರಮಾಣದಲ್ಲಿ ಅನರ್ಹರು ಪಡೆದುಕೊಂಡು ಸರ್ಕಾರದ ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ. ಇಂತಹವರನ್ನು ನಮ್ಮ ಇಲಾಖೆ ಪತ್ತೆ ಹಚ್ಚಿ ಅವರ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್ ಕಾರ್ಡ್



ಗಳಾಗಿ ಪರಿವರ್ತಿಸುತ್ತಿದ್ದೇವೆ. ಆದರೆ, ಅವುಗಳನ್ನು ರದ್ದುಪಡಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಪಿಎಲ್ ಪಡಿತರ ಚೀಟಿ ದೊರೆತಿಲ್ಲದ ಬಡತನರೇಖೆಗಿಂತ ಕೆಳಗಿನವರಿಗೆ ಹೊಸದಾಗಿ ಪಡಿತರ ಚೀಟಿ ನೀಡುವ ಕಾರ್ಯವೂ ನಡೆದಿದೆ. ನೆರೆ ರಾಜ್ಯಗಳಲ್ಲಿ ಶೇ.40ರಷ್ಟು ಮಂದಿಗೆ ● 11ನೇ ಪುಟಕ್ಕೆ

ಮುಡಾ ಹಗರಣ; ಲೋಕಾಯುಕ್ತ ತನಿಖೆ

ಹಿಂದಿನ ಆಯುಕ್ತ ಡಾ.ನಟೇಶ್ ಇಂದು ವಿಚಾರಣೆಗೆ ಹಾಜರು



ನಟೇಶ್


ಮೈಸೂರು, ನ.18(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ಹಗರಣ ಸಂಬಂಧ ನಡೆಯುತ್ತಿರುವ ಲೋಕಾಯುಕ್ತ ತನಿಖೆಗೆ ಮುಡಾ ಹಿಂದಿನ ಆಯುಕ್ತ ಡಾ.ಡಿ.ಬಿ. ನಟೇಶ್ ನಾಳೆ (ನ.19) ಹಾಜರಾಗಲಿದ್ದಾರೆ.

ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಈಗಾಗಲೇ ಡಾ.ನಟೇಶ್‌ಗೆ ನೋಟಿಸ್ ಜಾರಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಿನ ದಿವಾನ್ಸ್ ರಸ್ತೆಯ ಮೈಸೂರು ಲೋಕಾಯುಕ್ತರ ಕಚೇರಿಯಲ್ಲಿ ನಾಳೆ ಡಾ. ನಟೇಶ್ ವಿಚಾರಣೆ ಎದುರಿಸುತ್ತಿದ್ದಾರೆ.

ಡಾ.ನಟೇಶ್ ಅವರ ವಿಚಾರಣೆಗೆ ರಾಜ್ಯ ಸರ್ಕಾರ ಇತ್ತೀಚೆಗೆ ಲೋಕಾಯುಕ್ತಗೆ ಅನುಮತಿ ನೀಡಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಶೇ.50:50ರ ಅನುಪಾತದಲ್ಲಿ ಮೈಸೂರಿನ ವಿಜಯನಗರದಲ್ಲಿ 14 ನಿವೇಶನ ಮಂಜೂರು ಮಾಡಿರುವ ಸಂಬಂಧ ಲೋಕಾಯುಕ್ತರು ನಾಳೆ ಡಾ.ನಟೇಶ್ ಅವರನ್ನು ವಿಚಾರಣೆಗೊಳಪಡಿಸಲಿದ್ದಾರೆ.

ಆದರೆ ಮತ್ತೋರ್ವ ಮುಡಾ ಆಯುಕ್ತ ದಿನೇಶ್‌ಕುಮಾರ್‌ಗೆ ಇನ್ನು ಸಮನ್ಸ್ ಜಾರಿ ಮಾಡಿಲ್ಲ. ಡಾ.ನಟೇಶ್ ವಿಚಾರಣೆ ತರುವಾಯ ಅವರಿಗೂ ಸಮನ್ಸ್ ನೀಡಬಹುದು ಎನ್ನಲಾಗಿದೆ. ಪಾರ್ವತಿ ಅವರಿಗೆ ನಿವೇಶನ ಮಂಜೂರು ಮಾಡಲು ದಾಖಲಾತಿಗಳಲ್ಲಿ ಸಹಿ ಮಾಡಿರುವ ಮುಡಾ ಕಾರ್ಯದರ್ಶಿಗಳು, ಇಂಜಿನಿಯರ್‌ಗಳು ● 9ನೇ ಪುಟಕ್ಕೆ

ಇಡಿ ವಿಚಾರಣೆಗೆ ಹಾಜರಾದ ಸಿಎಂ ಭಾಮೈದ ಮಲ್ಲಿಕಾರ್ಜುನಸ್ವಾಮಿ



ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಹಗರಣ ಸಂಬಂಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಮೈದ ಮಲ್ಲಿಕಾರ್ಜುನಸ್ವಾಮಿ ಇಂದು ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾದರು.

ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನೀಡಿದ ದೂರನ್ನ ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಇಡಿ ಅಧಿಕಾರಿಗಳು ಇತ್ತೀಚೆಗೆ ● 9ನೇ ಪುಟಕ್ಕೆ

ಜಾನಪದ ಕಲಾತಂಡಗಳೊಂದಿಗೆ ಕನಕದಾಸರ ಪ್ರತಿಮೆ ಅದ್ದೂರಿ ಮೆರವಣಿಗೆ





ಕನಕದಾಸರ ಜಯಂತಿ ಅಂಗವಾಗಿ ಸೋಮವಾರ ಮೈಸೂರಲ್ಲಿ ಭಕ್ತ ಕನಕದಾಸರ ಪ್ರತಿಮೆಯ ವರ್ಣರಂಜಿತ ಮೆರವಣಿಗೆ ನಡೆಯಿತು. ಮತ್ತೊಂದು ಚಿತ್ರದಲ್ಲಿ ಮೆರವಣಿಗೆಯಲ್ಲಿ ಸಾಗಿದ ಸ್ತಬ್ಧಚಿತ್ರ ಹಾಗೂ ಜಾನಪದ ಕಲಾತಂಡಗಳು.

ಮೈಸೂರು,ನ.18(ಎಂಟಿವೈ)–ದಾಸಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಅಂಗವಾಗಿ ಮೈಸೂರಲ್ಲಿ ಸೋಮವಾರ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಂತಕವಿ ಭಕ್ತ ಕನಕದಾಸರ ಪ್ರತಿಮೆಯನ್ನು ವಿಜೃಂಭಣೆಯಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಮೈಸೂರು ಜಿಲ್ಲಾಡಳಿತ ಹಾಗೂ ಸಂತಕವಿ ಶ್ರೀ ಕನಕದಾಸರ ಜಯಂತ್ಯುತ್ಸವ ಸಮಿತಿ ಹಾಗೂ ಕುರುಬ ಸಮುದಾಯದ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಬೆಳಗ್ಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಆಯೋಜಿಸಿದ್ದ ಕನಕದಾಸರ ಪ್ರತಿಮೆಯ ವರ್ಣರಂಜಿತ ಮೆರವಣಿಗೆಗೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಚಾಲನೆ ನೀಡಿದರು.

ನಂದಿ ಧ್ವಜ ಹಾಗೂ ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ ಬಳಿಕ ಮಾತನಾಡಿದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಯುವಜನರಿಗೆ ಕನಕದಾಸರ ತತ್ವ ಸಿದ್ಧಾಂತಗಳು ಹಾಗೂ ಅವರು ಸಮಾಜ ಸುಧಾರಣೆ ಮಾಡಲು ಹೋರಾಟ ಮಾಡಿದ್ದನ್ನು ತಿಳಿಸಬೇಕಾಗಿದೆ. ಎಲ್ಲರೂ ಭಕ್ತ ಕನಕದಾಸರ ಸಂದೇಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮವಾಗಿ ಬಾಳ್ವೆ ನಡೆಸಬಹುದಾಗಿದೆ ಎಂದರು. ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿಯ ಕಟ್ಟಡದ ಮುಂದೆ ಕನಕದಾಸರ ಕಂಚಿನ ಪ್ರತಿಮೆ ಪ್ರತಿಷ್ಠಾಪನೆಗಾಗಿ ಕುರುಬ ಸಮುದಾಯದ ವಿವಿಧ ಸಂಘಟನೆಗಳು ಒತ್ತಾಯಿಸುತ್ತಿರುವುದಕ್ಕೆ ನನ್ನ ಸಹಮತವಿದೆ. ದಾಸಶ್ರೇಷ್ಠರಾಗಿರುವ ಕನಕದಾಸರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಅವರ ತತ್ವ ಸಿದ್ಧಾಂತಗಳು ಸರ್ವಕಾಲಕ್ಕೂ ಅನ್ವಯವಾಗುತ್ತದೆ. ಎಲ್ಲಾ ಜನರಿಗೂ ಒಳಿತನ್ನೇ ಬಯಸುವ ಸಾರಾಂಶ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಕಂಚಿನ ಪ್ರತಿಮೆ ಪ್ರತಿಷ್ಠಾಪನೆ ಅಗತ್ಯವೂ ಆಗಿದ್ದು, ಈ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ● 9ನೇ ಪುಟಕ್ಕೆ

ಪೊಲೀಸರಿಂದ ನನಗೆ ನ್ಯಾಯ ಸಿಗಲ್ಲ; ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುತ್ತೇನೆ

ಪೊಲೀಸರ ವಿಚಾರಣೆ ನಂತರ ಸ್ನೇಹಮಯಿ ಕೃಷ್ಣ ಹೇಳಿಕೆ



ಮೈಸೂರು,ನ.18(ಬಿಎಲ್‌ಯು)– ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ದೂರು ನೀಡಿದ್ದ ಹಿನ್ನೆಲೆಯಲ್ಲಿ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಂದು ನಗರದ ದೇವರಾಜ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಹಾಜರಾದರು.

ಪೊಲೀಸರು ನೀಡಿದ್ದ ನೋಟಿಸ್ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ವಿಚಾರಣೆಗೆ ಹಾಜರಾಗಿದ್ದರು. ತಮ್ಮ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಈ ವೇಳೆ ಪೊಲೀಸರಿಗೆ ಸ್ಪಷ್ಟನೆ ನೀಡಿದರು. ತರುವಾಯ ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಸ್ನೇಹಮಯಿ ಕೃಷ್ಣ, ನನ್ನ ಹೋರಾಟ ಹತ್ತಿಕ್ಕಲು ಕಾನೂನುಬಾಹಿರವಾಗಿ ಪೊಲೀಸ್ ಠಾಣೆಗೆ ದೂರು ನೀಡುತ್ತಿದ್ದಾರೆ. ಆದರೆ ಇದಕ್ಕೆ ಹೆದರಿ ನನ್ನ ಹೋರಾಟ ನಿಲ್ಲಿಸುವುದಿಲ್ಲ ಎಂದು ಹೇಳಿದರು.

ನಾನು ಕೂಡ ಲಕ್ಷ್ಮಣ್ ಸೇರಿದಂತೆ ಇತರರ ವಿರುದ್ಧ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಪೊಲೀಸ್ ಇಲಾಖೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಾರಣ ಅವರಿಗೆ ಹೆದರಿ ಕ್ರಮಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು.

ಪೊಲೀಸರಿಂದ ನನಗೆ ನ್ಯಾಯ ದೊರೆಯಲಿದೆ ಎಂಬ ನಿರೀಕ್ಷೆ ಇಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದಲ್ಲೇ ಇವರ ವಿರುದ್ಧ ಪ್ರಕರಣ ದಾಖಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ ಎಂದರು. ಕಾಂಗ್ರೆಸ್ ನಾಯಕರು ನಡೆಸುತ್ತಿರುವ ಈ ಪಿತೂರಿ ವಿರುದ್ಧ ನನ್ನ ಅಭಿಮಾನಿಗಳು ನನ್ನ ಪರ ಪ್ರತಿಭಟನೆ ನಡೆಸಲು ಸಿದ್ಧರಿದ್ದಾರೆ. ನಾನು ಒಂದು ಕರೆ ನೀಡಿದರೆ ಸಾಕು ಹೋರಾಟ ರೂಪಿಸುತ್ತಾರೆ. ಆದರೆ ಇದರಿಂದ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ ಎಂಬ ಕಾರಣದಿಂದ ಯಾವುದೇ ಪ್ರತಿಭಟನೆ ಬೇಡವೆಂದು ತಿಳಿಸಿದ್ದೇನೆ. ಕಾನೂನು ರೀತ್ಯಾ ನ್ಯಾಯಾಲಯದ ಮೂಲಕ ಹೋರಾಟ ನಡೆಸಲು ನಿರ್ಧರಿಸಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸರಿಗೆ ಶುಭ ಹಾರೈಕೆ



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಶಾಸಕರ ಕಚೇರಿ ಉದ್ಘಾಟನೆ ಸಮಾರಂಭದಲ್ಲಿ ಅವರಿಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರ ನೀಡಿ ಶುಭ ಕೋರಲಾಯಿತು. ಈ ವೇಳೆ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣ ನಾಯಕ, ನಗರಪಾಲಿಕೆ ಮಾಜಿ ಸದಸ್ಯ ಕೆ.ಜೆ.ರಮೇಶ್, ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಭಾನುಪ್ರಕಾಶ್, ಮೈಸೂರು ನಗರ ವಕ್ತಾರ ಮೋಹನ್ ಇನ್ನಿತರ ಬಿಜೆಪಿ ಮುಖಂಡರು ಇದ್ದಾರೆ.

ಇಂದು ಮೈಸೂರಲ್ಲಿ ರಾಷ್ಟ್ರೀಯ ಶಿಕ್ಷಣ ದಿನಾಚರಣೆ, ಶೈಕ್ಷಣಿಕ ಕಾರ್ಯಾಗಾರ

ಮೈಸೂರು, ನ.18(ಜಿಎ)–ರಾಜ್ಯ ಸರ್ಕಾರಿ ಮುಸ್ಲಿಮ್ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ನವೆಂಬರ್ 19ರಂದು ಬೆಳಗ್ಗೆ 9.30ಕ್ಕೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಾಗೂ ಶೈಕ್ಷಣಿಕ ಕಾರ್ಯಾಗಾರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ಸೈಯದ್ ಮುದಾಸ್ಸಿರ್ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಶಾಸಕ ತನ್ವೀರ್‌ಸೇಠ್ ಉದ್ಘಾಟಿಸುವರು. ರಾಜ್ಯಾಧ್ಯಕ್ಷ ಮಹಮ್ಮದ್ ಸಲೀಮ್ ಹಂಚಿನಮನಿ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. 2013ರಲ್ಲಿ ರಾಜ್ಯ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಮುಸ್ಲಿಂ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಬಲೀಕರಣಕ್ಕಾಗಿ ಕೆಲಸ ಮಾಡುತ್ತಿದೆ. ಈ ಕಾರ್ಯಾಗಾರದಲ್ಲಿ ಸುಮಾರು 1200 ಮಂದಿ ಪಾಲ್ಗೊಳ್ಳಲಿದ್ದಾರೆ. ಶೈಕ್ಷಣಿಕವಾಗಿ ಕೇಂದ್ರ, ರಾಜ್ಯ ಸರ್ಕಾರಗಳಿಂದ ದೊರೆಯುವ ಸವಲತ್ತು, ಸೌಲಭ್ಯ ಪಡೆಯುವ ಬಗ್ಗೆ ಕಾರ್ಯಾಗಾರದಲ್ಲಿ ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಫ್ಸರ್ ಪಾಷಾ, ಸೈಯದ್ ದಸ್ತಗೀರ್, ಅಜೀಜ್ ಖಾನ್, ನವೀದ್ ಪಾಷಾ, ಸಾದಿಕ್, ಪ್ರೊ.ನಬಿ ಜಾನ್ ಇನ್ನಿತರರು ಉಪಸ್ಥಿತರಿದ್ದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಜ್ಞಾನ ಹಬ್ಬ



ಮೈಸೂರಿನ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ವಿಜ್ಞಾನ ಹಬ್ಬ ಆಯೋಜಿಸಲಾಗಿತ್ತು. ಸಂಸ್ಥೆಯ ಅಧ್ಯಕ್ಷ ಟಿ.ರಂಗಪ್ಪ, ಅಪೋಲೋ ಆಸ್ಪತ್ರೆಯ ನ್ಯೂರೋ ಸರ್ಜನ್ ಡಾ.ಕೆ.ಎಸ್.ಬೋಪಯ್ಯ, ಹೇಮಂತಕುಮಾರ್, ಕುಮಾರಿ ಮರ್ಸಿ ಪಾಲ್, ಎಲ್.ಪೂಜಾ, ಆಡಳಿತಾಧಿಕಾರಿ ಕಾಂತಿನಾಯಕ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಶಿಕ್ಷಕ ವೃಂದ, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಪ್ರಶಸ್ತಿ ಪ್ರದಾನ

ಕನ್ನಡಾಂಬೆ ರಕ್ಷಣಾ ವೇದಿಕೆ ಮೈಸೂರು ವತಿಯಿಂದ ರಂಗಭೂಮಿ ಮತ್ತು ಜಾನಪದ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಯುವ ನಟ, ನಿರ್ದೇಶಕ, ಅಂತರರಾಷ್ಟ್ರೀಯ ಜಾನಪದ ಕಲಾವಿದ ಅಂಕರಾಜು ಅವರಿಗೆ ರಾಜ್ಯಮಟ್ಟದ ಕನ್ನಡಾಂಬೆ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಕೀಲ ಆನೇಕಲ್ ಕೃಷ್ಣಪ್ಪ, ಅಧ್ಯಕ್ಷ ಮಂಜುನಾಥ, ಕೀರ್ತನ ಮಂಜು, ರೇಖಾಗೌಡ, ಪದ್ಮನಾಭ ಮತ್ತಿತರರಿದ್ದರು.

ನ.24ರಂದು ನಿರಂತರ ಕಲೆಮನೆ ಉತ್ಸವ

ಮೈಸೂರು,ನ.18–ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು ನ.24ರಂದು ಮಧ್ಯಾಹ್ನ 2.30ಕ್ಕೆ ಕಲೆಮನೆ ಸಭಾಂಗಣದಲ್ಲಿ 48ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವವನ್ನು ಹಮ್ಮಿಕೊಂಡಿದೆ. ಮುಖ್ಯ ಅತಿಥಿಗಳಾಗಿ ಮಹಾರಾಜ ಕಾಲೇಜು ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜ ಅರಸ್ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಗುರು ಲಲಿತಾ ಕೋರೆ ಎಂ.ರಾವ್.; ಪ್ರೊ.ಪದ್ಮಾ ಶೇಖರ್; ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತರಾದ ಟಿ.ರವೀಂದ್ರ ಶರ್ಮಾ ಆಗಮಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು: ಡಾ.ಕೃಷ್ಣಮೂರ್ತಿ ಗಣಪತಿ ಭಟ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಡುಗಾರಿಕೆ; ಗುರು ಕ್ಷಮಾ ಕಟ್ವಾರ ಮತ್ತು ಅವರ ಶಿಷ್ಯರಿಂದ ಸಮೂಹ ಲಘು ಶಾಸ್ತ್ರೀಯ ಸಂಗೀತ; ವಿದುಷಿ ಶ್ವೇತಾ ಪ್ರಸನ್ನ ಮತ್ತು ಶಿಷ್ಯ ವೃಂದದಿಂದ ಕೂಚುಪುಡಿ ನೃತ್ಯ; ವಿದ್ವಾನ್ ದರ್ಶನ್ ಶಂಕರ್ ಮತ್ತು ಅವರ ಶಿಷ್ಯರಿಂದ ಭರತನಾಟ್ಯ; ವಿದುಷಿ ಲಕ್ಷ್ಮೀ ವಿಶ್ವನಾಥನ್ ಮತ್ತು ಅವರ ಪುತ್ರಿ ಕುಮಾರಿ ತನ್ವಿ ವಿನೋದ್, (ತಾಯಿ ಮತ್ತು ಮಗಳು) ಅವರಿಂದ ಭರತನಾಟ್ಯ ಪ್ರದರ್ಶನವಿರುತ್ತದೆ.

ನಿಧನ

ಆರ್.ಸುಬ್ರಹ್ಮಣ್ಯ



ಮೈಸೂರು: ಮೈಸೂರು ಬಿಎಂಶ್ರೀ ನಗರದ ನಿವಾಸಿ, ಸಿವಿಲ್ ಗುತ್ತಿಗೆದಾರರಾದ ಆರ್.ಸುಬ್ರಹ್ಮಣ್ಯ (62) ಅವರು ಇಂದು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಮಂಜುಳಾ, ಮೂವರು ಮಕ್ಕಳು, ಸಹೋದರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12.30ಕ್ಕೆ ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೇತುವೆಯಲ್ಲಿ ಸೋರಿಕೆ: ಕೆಆರ್‌ಎಸ್ ಬೃಂದಾವನದ ದೋಣಿ ವಿಹಾರ ಸ್ಥಗಿತ

ಮೈಸೂರು, ನ.18 (ಆರ್‌ಕೆ)– ಸೇತುವೆಯಲ್ಲಿ ತೀವ್ರ ನೀರು ಸೋರಿಕೆಯಿಂದಾಗಿ ಕೃಷ್ಣರಾಜಸಾಗರ ಜಲಾಶಯ (ಕೆಆರ್‌ಎಸ್)ದಲ್ಲಿನ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗಿದೆ.

ಕಳೆದ 25 ದಿನಗಳಿಂದ ಕೆಆರ್‌ಎಸ್‌ನಲ್ಲಿ ದೋಣಿ ವಿಹಾರವಿಲ್ಲದೆ ಪ್ರವಾಸಿಗರು ತೀವ್ರ ನಿರಾಸೆ ವ್ಯಕ್ತಪಡಿಸಿದ್ದಾರೆ. ಅತೀ ಮಳೆಯಿಂದಾಗಿ ಜಲಾಶಯಕ್ಕೆ ಒಳಹರಿವು ಪ್ರಮಾಣ ಜಾಸ್ತಿಯಾಗಿದ್ದರಿಂದಾಗಿ ಹೆಚ್ಚುವರಿ ನೀರನ್ನು ಹೊರಗೆ ಬಿಡಲಾಗುತ್ತಿದ್ದರಿಂದ ಕಳೆದ ದಸರಾವರೆಗೂ ಬೃಂದಾವನದ ಕೊಳದಲ್ಲಿ ದೋಣಿ ವಿಹಾರ ಯಾವ ಅಡ್ಡಿ ಇಲ್ಲದೆ ನಡೆಯುತ್ತಿತ್ತು. ಆದರೆ ತದನಂತರ ಒಳಹರಿವಿನ ಪ್ರಮಾಣ ಕಡಿಮೆಯಾದ ಹಿನ್ನೆಲೆಯಲ್ಲಿ ಹೊರಕ್ಕೆ ಬಿಡುತ್ತಿದ್ದ ನೀರಿನ ಪ್ರಮಾಣ ಕಡಿಮೆ ಆಗಿ, ಕೊಳದಲ್ಲಿನ ನೀರು ಸೇತುವೆಯ ಸೋರಿಕೆಯಿಂದಾಗಿ ನೀರಿಲ್ಲದೆ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗಿತ್ತು.

ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ವು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಈ ವಿಷಯ ಮನವರಿಕೆ ಮಾಡಿಕೊಟ್ಟಿತ್ತು. ಹಾಗಾಗಿ ಸೋರಿಕೆ ತಡೆಗಟ್ಟಲು ಕ್ರಮ ವಹಿಸಲು ನಿರ್ದೇಶನ ಬಂದಿತ್ತು. ಈ ಹಿನ್ನೆಲೆಯಲ್ಲಿ ಕೆಎಸ್‌ಟಿಡಿಸಿ ಅಧಿಕಾರಿಗಳು ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್)ದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಪರಿಣಾಮ ದಕ್ಷಿಣದಿಂದ ಉತ್ತರಕ್ಕೆ 350 ಮೀ. ಉದ್ದ 12ರಿಂದ 15 ಅಡಿ ಎತ್ತರ ಹಾಗೂ 12ರಿಂದ 15 ಅಡಿ ಅಗಲದ ಸೇತುವೆಯ ಸೋರಿಕೆಯನ್ನು ತಡೆಗಟ್ಟಲು ಎಸ್ಟಿಮೇಟ್ ತಯಾರಿಸಿ ಕೊಡಬೇಕೆಂದು ಕೆಎಸ್‌ಟಿಡಿಸಿ ಅಧಿಕಾರಿಗಳು ನೀರಾವರಿ ನಿಗಮದ ಅಧಿಕಾರಿಗಳಿಗೆ ಕೋರಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ನ ಬೃಂದಾವನದಲ್ಲಿರುವ ಸೇತುವೆ.

ಅದರನ್ವಯ ಎರಡರಿಂದ ಎರಡೂವರೆ ಕೋಟಿ ರೂ. ವೆಚ್ಚದಲ್ಲಿ ನೀರಿನ ಸೋರಿಕೆಯನ್ನು ತಡೆಗಟ್ಟಲು ಸ್ಕಿನ್ ವಾಲ್ ನಿರ್ಮಿಸಬೇಕೆಂದು ನೀರಾವರಿ ನಿಗಮದ ಅಧಿಕಾರಿಗಳು ಎಸ್ಟಿಮೇಟ್ ತಯಾರಿಸಿ ಕೊಟ್ಟ ಹಿನ್ನೆಲೆಯಲ್ಲಿ ಕೆಎಸ್‌ಟಿಡಿಸಿ ಅಧಿಕಾರಿಗಳು ಪ್ರಸ್ತಾವನೆಯೊಂದಿಗೆ ಎಸ್ಟಿಮೇಟ್ ಅನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅನುಮತಿಯೊಂದಿಗೆ ಅನುದಾನ ಮಂಜೂರಾತಿ ಮಾಡಿಕೊಟ್ಟಲ್ಲಿ ನೀರಾವರಿ ನಿಗಮವೇ ಟೆಂಡರ್ ಕರೆದು ಎರಡೂವರೆ ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ. ಈ ಕಾಮಗಾರಿ ಪೂರ್ಣಗೊಂಡಲ್ಲಿ ಶಾಶ್ವತವಾಗಿ ಬೃಂದಾವನದಲ್ಲಿ ಐದು ದೋಣಿಗಳಲ್ಲಿ ವಿಹಾರ ಆರಂಭಿಸಿ, ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ.

ಶಾಲಾ ಮಕ್ಕಳಿಗೆ ಚೆಸ್ ಸ್ಪರ್ಧೆ



ಮೈಸೂರು, ನ.18(ಬಿಎಲ್‌ಯು)– ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಮೈಸೂರು ಮಕ್ಕಳ ಗ್ರಂಥಾಲಯ ಮತ್ತು ವಾಚನಾಲಯ ಸಮಿತಿ ಡಿಸೆಂಬರ್ 1ರಂದು ಶಾಲಾ ಮಕ್ಕಳಿಗೆ ಚೆಸ್ ಸ್ಪರ್ಧೆ ಆಯೋಜಿಸಿದೆ ಎಂದು ಸಮಿತಿ ಅಧ್ಯಕ್ಷ ಮುಬೀನ್ ಸೇಟ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಫಿಯೋನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿಯಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.

ಅಂದು ಬೆಳಿಗ್ಗೆ 8.30ರಿಂದ ಸಂಜೆ 5.30 ಗಂಟೆವರೆಗೆ ನಡೆಯುವ ಸ್ಪರ್ಧೆಯಲ್ಲಿ ಎಲ್‌ಕೆಜಿ, 4ನೇ ತರಗತಿ, 5ನೇ ತರಗತಿ, 7ನೇ ತರಗತಿ, 8 ಮತ್ತು 10ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದೆ ಎಂದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಂಸಾ ಪತ್ರ ಪಾರಿತೋಷಕ ಮತ್ತು ಪರ್ಯಾಯ ಪಾರಿತೋಷಕಗಳನ್ನು ನೀಡಿ ಅಭಿನಂದಿಸಲಾಗುವುದು ಎಂದು ಮಾಹಿತಿ ನೀಡಿದರು. ಸಮಿತಿ ಪದಾಧಿಕಾರಿಗಳಾದ ನವೀನ್ ಕಾಮತ್, ನಾಗೇಂದ್ರ, ಕೆ.ವಿ.ಕೃಷ್ಣಾನಂದ್ ಗೋಷ್ಠಿಯಲ್ಲಿದ್ದರು.

ವಿದ್ಯಾರ್ಥಿಗಳು ಸಿಗುವ ಅವಕಾಶಗಳಿಂದ ನೆಲೆ ಕಂಡುಕೊಳ್ಳಿ

ಉದ್ಯೋಗ ಮೇಳದಲ್ಲಿ ಪ್ರೊ. ಬಿ.ವಿ.ಶಾಂಭಶಿವಯ್ಯ ಕಿವಿಮಾತು



ಸಮರ್ಥನಂ ಅಂಗವಿಕಲರ ಸಂಸ್ಥೆ, ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಬಾರ್ಕ್ಲೇನ್ ಸಹಯೋಗದೊಂದಿಗೆ ನಡೆದ ಉದ್ಯೋಗ ಮೇಳವನ್ನು ಜೆಎಸ್‌ಎಸ್ ಕಲಾ, ವಾಣಿಜ್ಯ–ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಬಿ.ವಿ.ಶಾಂಭಶಿವಯ್ಯ ಉದ್ಘಾಟಿಸಿದರು.

ಮೈಸೂರು, ನ.18– ವಿದ್ಯಾರ್ಥಿಗಳು ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ನೆಲೆ ಕಂಡುಕೊಳ್ಳಬೇಕು ಎಂದು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಬಿ.ವಿ. ಶಾಂಭಶಿವಯ್ಯ ತಿಳಿಸಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಬಾರ್ಕ್ಲೇನ್ ಸಹಯೋಗದೊಂದಿಗೆ ನಡೆದ ಉದ್ಯೋಗ ಮೇಳವನ್ನು ಉದ್ಘಾಟಿಸಿ, ಮಾತನಾಡಿದರು. ಉದ್ಯೋಗಾಕಾಂಕ್ಷಿಗಳು ಮತ್ತು ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳ ಉತ್ತಮ ಅವಕಾಶವಾಗಿದೆ. ವೃತ್ತಿಪರ ಜಗತ್ತಿಗೆ ಹೆಜ್ಜೆ ಹಾಕುವ ಅವಕಾಶ ಕಲ್ಪಿಸುತ್ತದೆ ಎಂದು ಹೇಳಿದರು.

ಸಮರ್ಥನಂ ಸಂಸ್ಥೆಯ ಕೇಂದ್ರೀಯ ಮುಖ್ಯಸ್ಥ ಸುಭಾಸ್ ಮಾತನಾಡಿ, ಸಮರ್ಥನಂ ಸಂಸ್ಥೆ ಅವಕಾಶ ವಂಚಿತರ ಸಬಲೀಕರಣಕ್ಕಾಗಿ ದುಡಿಯುತ್ತಿದೆ. ದೇಶಾದ್ಯಂತ 150ಕ್ಕೂ ಹೆಚ್ಚು ಉದ್ಯೋಗ ಮೇಳಗಳನ್ನು ಸಂಘಟಿಸಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಪ್ರಭು ಮಾತನಾಡಿ, ವಿದ್ಯಾಭ್ಯಾಸದ ಸಮಯದಲ್ಲೇ ಉದ್ಯೋಗ ಹೇಗೆ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಆಲೋಚಿಸಬೇಕು, ಒಬ್ಬ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಯೆಂದರೆ ವಿದ್ಯಾರ್ಥಿ ಉದ್ಯೋಗ ಪಡೆದು ತಮ್ಮ ಜೀವನ, ಕುಟುಂಬ ಹಾಗೂ ಸಮಾಜದ ಏಳಿಗೆಗೆ ಶ್ರಮಿಸುವುದು ಎಂದರು. ಸದರಿ ಉದ್ಯೋಗ ಮೇಳದಲ್ಲಿ 32 ಕಂಪನಿಗಳು, 820 ಅಭ್ಯರ್ಥಿಗಳು ಭಾಗವಹಿಸಿ, 215ಕ್ಕೂ ಹೆಚ್ಚು ಅಭ್ಯರ್ಥಿಗಳು ನೇರ ನೇಮಕ ಮತ್ತು ಮುಂದಿನ ಸಂದರ್ಶನಕ್ಕೆ ಆಯ್ಕೆ ಆಗಿರುತ್ತಾರೆ. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾಲೇಜಿನ ಉದ್ಯೋಗ ಅಧಿಕಾರಿ ಜಿ.ಕಾರ್ತಿಕ, ಸಮರ್ಥನಂ ಸಂಸ್ಥೆಯ ಶಿವರಾಜು, ಡಾ. ಸೌಮ್ಯಾ, ಡಾ. ಕಿರಣ್, ಡಾ. ಎಲ್. ವಿನಯ್ ಕುಮಾರ್, ವೀರಭದ್ರ ಪಟೇಲ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಕನ್ನಡಾಂಬೆ ಸೇವಾ ಪ್ರಶಸ್ತಿ ಪ್ರದಾನ



ಮೈಸೂರಿನಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಅವರಿಗೆ ಕನ್ನಡಾಂಬೆ ಸೇವಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.


'ರಂಗ ಸಂಗೀತ' ತರಗತಿಗೆ ಚಾಲನೆ



ಲಲಿತಕಲಾ ಆವರಣದಲ್ಲಿ 'ರಂಗ ಸಂಗೀತ' ತರಗತಿ ಏರ್ಪಡಿಸಲಾಗಿತ್ತು.

ಮೈಸೂರು,ನ.18–ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿಯ ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು ಆವರಣದಲ್ಲಿ ಡಾ.ಗುಬ್ಬಿ ವೀರಣ್ಣ ಪೀಠದ ವತಿಯಿಂದ 'ರಂಗಸಂಗೀತ' ತರಗತಿಯನ್ನು ಏರ್ಪಡಿಸಲಾಗಿತ್ತು. ಗಾಯಕರು, ನಿವೃತ್ತ ಇಂಜಿನಿಯರ್ ರಾಜಶೇಖರ ಎಂ.ಜವಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನೀನಾಸಂ ಪದವೀಧರರು, ಸಂಗೀತ ಸಂಯೋಜಕರು, ಯಕ್ಷಗಾನ ಕಲಾವಿದ ಶ್ರೀ ದಿಗ್ವಿಜಯ ಹೆಗ್ಗೋಡು ರಂಗಸಂಗೀತ ಬೆಳೆದು ಬಂದ ದಾರಿಯ ಬಗ್ಗೆ ಉಪನ್ಯಾಸ ನೀಡಿದರು. ಕಂಪನಿ ನಾಟಕಗಳಲ್ಲಿ ಪ್ರಚಲಿತದಲ್ಲಿದ್ದ ಹಾಡುಗಳನ್ನು ಪರಿಚಯಿಸಿದರು. ಬಿ.ವಿ ಕಾರಂತರ ರಾಗಸಂಯೋಜನೆಯ 'ಸತ್ತವರ ನೆರಳು' ಹಾಗೂ 'ಗೋಕುಲ ನಿರ್ಗಮನ'ದ ಹಾಡುಗಳನ್ನು ಹೇಳಿಕೊಟ್ಟರು. ಕುವೆಂಪು, ಬೇಂದ್ರೆ, ಪು.ತಿ.ನ ಮುಂತಾದ ಹಿರಿಯ ಕವಿಗಳ ಪದ್ಯಗಳನ್ನು ರಂಗಕ್ಕೆ ಅಳವಡಿಸಿರುವ ಹಾಡುಗಳನ್ನು ಕಲಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅನಿಟ ವಿಮ್ಲ ಬ್ರಾಗ್ಸ್ ಅಧ್ಯಕ್ಷತೆ ವಹಿಸಿದ್ದರು. ಡಾ.ಗುಬ್ಬಿ ವೀರಣ್ಣ ಪೀಠದ ರಂಗತಜ್ಞ ಅರಸೀಕೆರೆ ಯೋಗಾನಂದ ಸ್ವಾಗತಿಸಿ, ವಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.11.2024 ಮಂಗಳವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ರಾಜ್ಯ ಸರ್ಕಾರಿ ಮುಸ್ಲಿಮ್ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ :** ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಾಗೂ ಶೈಕ್ಷಣಿಕ ಕಾರ್ಯಾಗಾರ, ಉದ್ಘಾಟನೆ : ಶಾಸಕ ತನ್ವೀರ್‌ಸೇಠ್, ಅಧ್ಯಕ್ಷತೆ : ರಾಜ್ಯಾಧ್ಯಕ್ಷ ಮಹಮ್ಮದ್ ಸಲೀಮ್ ಹಂಚಿನಮನಿ, ಮುಖ್ಯ ಅತಿಥಿಗಳು : ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಮಧು ಬಂಗಾರಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕರ್ನಾಟಕ ರಾಜ್ಯ ಉರ್ದು ಅಕಾಡೆಮಿ ಅಧ್ಯಕ್ಷ ಮೌಲಾನಾ ಮಹಮದ್ ಅಲಿ ಖಾಜಿ, ಶಾಸಕ ಎ.ಬಿ. ಬಂಡಿಸಿದ್ದೇಗೌಡ, ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಅಗ್ನಿ ಕೊಂಡೋತ್ಸವ, ಪುಣ್ಯಾಹಃ, ಶ್ರೀ ವೀರಭದ್ರೇಶ್ವರಸ್ವಾಮಿಗೆ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ವಿಶೇಷ ಆಹ್ವಾನಿತರು : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

* **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.


■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆಯ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಸಂಶೋಧನೆ ಮತ್ತು ಪ್ರಕಟಣೆಯ ನೀತಿಶಾಸ್ತ್ರ ಕುರಿತು ಕಾರ್ಯಾಗಾರ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಮರಿಗೌಡ, ಸಂಪನ್ಮೂಲ ವ್ಯಕ್ತಿ : ಪ್ರಾಧ್ಯಾಪಕ ಡಾ. ಎಂ. ಚಂದ್ರಶೇಖರ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಮಧ್ಯಾಹ್ನ 2ಕ್ಕೆ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಸಂಜೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಕೆ. ಸರಸ್ವತಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ 'ನಾನು ನನ್ನ ಕಂಪನಿ' ಮನೆಯಲ್ಲಿಯೇ ಆರೋಗ್ಯಕರ ಪಾನೀಯ ಮಿಶ್ರಣವನ್ನು ತಯಾರಿಸುವ ಪ್ರಿಯಾಂಕ ಪುನೀತ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 12.35 ದೇವರನಾಮ–ಕೆ.ಎಲ್. ಯತಿರಾಜ್, 12.45 ಶಬ್ಧ ಮೀರಿದ ಆಲಿಸುವಿಕೆ ಹೇಗೆ? ಏಕೆ? ಮಾತನಾಡುತ್ತಾರೆ ಹೆಚ್.ಎಸ್. ಮಧುರಾಣಿ, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 1.20 ಕೋಮು ಏಕತಾ ಸಪ್ತಾಹ–ರಾಷ್ಟ್ರೀಯ ಭಾವೈಕ್ಯತೆ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ಎನ್.ಎಸ್. ಕೃಷ್ಣ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ –ಭಕ್ತ ಕನಕದಾಸ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ– ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮಾನವ ಬಳಕೆಗಾಗಿ ರೇಷ್ಮೆ ಹುಳು ಉಪ ಉತ್ಪನ್ನಗಳು ಈ ಕುರಿತು ಸಂವಾದ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ವೈ. ತಿರುಪತಯ್ಯ ಹಾಗೂ ನೂಲು ಬಿಚ್ಚಾಣಿಕೆದಾರರಾದ ಯಳಂದೂರು ತಾಲೂಕು ಕೆಸ್ತೂರಿನ ಆರ್. ವೆಂಕಟೇಶ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಸಮೀರ್ ರಾವ್–ಬಾನ್ಸುರಿ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಪ್ರಪಂಚಂ ಬಾಲಚಂದ್ರನ್. ಎಸ್.–ಕೊಳಲು ವಾದನ, 10.00 ಚೈತ್ರವನ –ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು :** ವಸುಂಧರೋತ್ಸವ–2024, ಸಂಜೆ 5.30 ರಿಂದ 'ಸನ್ಮಾರ್ಗ' ಡಾ. ವಸುಂಧರ ದೊರೆಸ್ವಾಮಿಯವರ 35 ಹಿರಿಯ ಶಿಷ್ಯರಿಂದ ಭರತನಾಟ್ಯ ನೃತ್ಯ ಪ್ರದರ್ಶನ, ಗೌರವ ಅತಿಥಿಗಳು : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಶ್ರೀಧರ್ ರಾಜೇ ಅರಸ್, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ವಾರ್ಷಿಕ ಪೂಜಾ, ಉತ್ಸವ, ಅನ್ನದಾನಂ, ಮಂಡಲ ಪೂಜಾ, ಸ್ಥಳ: ಶ್ರೀಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ತಪ್ಪಲು.

■ **ಜಿಲ್ಲಾ ಇತಿಹಾಸ ವೇದಿಕೆ :** ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗಾಗಿ ಇತಿಹಾಸ ಪ್ರಶ್ನಾವಳಿ (ರಸಪ್ರಶ್ನೆ ಸ್ಪರ್ಧೆ), ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಎಂ. ಮರಿಸ್ವಾಮಿ, ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಬಿ.ಸಿ. ಶಿವಮಲ್ಲು, ವೇದಿಕೆ ಕಾರ್ಯಾಧ್ಯಕ್ಷರಾದ ಎ.ಎಲ್. ಉಮೇಶ್, ಎನ್.ಎಂ. ಶಿವಪ್ರಕಾಶ್, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಹೆಚ್.ಬಿ. ವಾಸು, ಸ್ಥಳ:ಕಾಲೇಜು ಸಭಾಂಗಣ, ಸರ್ಕಾರಿ ಪದವಿಪೂರ್ವ ಕಾಲೇಜು, ಮಂಚೇಗೌಡನಕೊಪ್ಪಲು, ಬೆಳಗ್ಗೆ 10ಕ್ಕೆ.

ಮೈಸೂರು ಮಿತ್ರ

ತಾನೇ ಕೊಂದಿದ್ದ ಮಹಿಳೆಯ ದೇಹವನ್ನು ಅಂತ್ಯಸಂಸ್ಕಾರ ವೇಳೆ ಹೊತ್ತೊಯ್ಯಲು ಯತ್ನಿಸಿದ ಚಿರತೆ!





ನೆಲಮಂಗಲ: ಒಂಟಿಯಾಗಿ ಸಿಗುವವರ ಮೇಲೆ ದಾಳಿ ಮಾಡಿ ಕೊಂದು ತಿನ್ನುವ ಚಿರತೆ ಜನ ಸಮೂಹವನ್ನು ಕಂಡಾಗ ಅಡಗಿ ಕುಳಿತುಕೊಳ್ಳುತ್ತದೆ. ಆದರೆ ನೆಲಮಂಗಲದಲ್ಲಿ ಮಾತ್ರ ಭಯಾನಕ ಘಟನೆ ನಡೆದಿದೆ. ಚಿರತೆಯೊಂದು ತಾನೇ ಕೊಂದ ಮಹಿಳೆಯ ಶವವನ್ನು ಜನ ಕಾಯುತ್ತಿದ್ದಾಗಲೇ ದಾಳಿ ನಡೆಸಿ, ಹೊತ್ತೊಯ್ಯಲು ಯತ್ನಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ದಾಬಸ್‌ಪೇಟೆ ಬಳಿಯ ಕಂಬಾಳು ಗೊಲ್ಲರಹಟ್ಟಿ ಗ್ರಾಮದ ಬಳಿ 45 ವರ್ಷದ ಕರಿಯಮ್ಮ ಮೇಲೆ ಚಿರತೆ ದಾಳಿ ಮಾಡಿ ಕೊಂದಿತ್ತು. ರುಂಡವನ್ನು ಚಿರತೆ ತಿಂದಿದ್ದರಿಂದ ಮುಂಡ ಮಾತ್ರ ಪತ್ತೆ ಆಗಿತ್ತು. ಅರಣ್ಯಾಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಲ್ಲದೆ ಚಿರತೆ ದಾಳಿ ಆತಂಕದ ಹಿನ್ನೆಲೆಯಲ್ಲಿ ACF,DCF ಸೇರಿದಂತೆ ಲೆಪರ್ಡ್ ಟಾಸ್ಕ್ ಫೋರ್ಸ್ ತಂಡ ಚಿರತೆ ಸೆರೆಗೆ ಸಿದ್ಧತೆ ನಡೆಸಿತ್ತು.

ನಿನ್ನೆ ರಾತ್ರಿ ಬೆಂಕಿ ಹಾಕಿ ಮಹಿಳೆಯ ಶವ ಕಾಯುತ್ತಿದ್ದವರಿಗೆ ಚಿರತೆ ಮತ್ತೆ ಪ್ರತ್ಯಕ್ಷವಾಗಿ ಶಾಕ್ ನೀಡಿತ್ತು. ಪೊಲೀಸ್ ಹಾಗೂ ಸಾರ್ವಜನಿಕರ ಮಧ್ಯೆಯೇ ದಾಳಿ ನಡೆಸಿ, ಮಹಿಳೆಯ ಮೃತದೇಹವನ್ನು ಹೊತ್ತೊಯ್ಯಲು ಯತ್ನಿಸಿದೆ. ಕೂಡಲೇ ದೊಣ್ಣೆ, ಮಚ್ಚು ಮತ್ತು ಟಾರ್ಚ್ ಬಳಸಿ ಗ್ರಾಮಸ್ಥರು ಚಿರತೆಯನ್ನು ಓಡಿಸಿದ್ದಾರೆ. ಈ ಘಟನೆಯಿಂದ ಗ್ರಾಮಸ್ಥರು ಭಯಗೊಂಡಿರುವುದರ ಜೊತೆಗೆ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಹವಾಮಾನ ಜಾಗೃತಿ ಸಂದೇಶ



ಆಸ್ಟ್ರೇಲಿಯಾದ ಮೆಲ್ಬೋರ್ನ್ ಸಿಟಿಯಲ್ಲಿ ಹೋಲ್ಡ್ ಪಾರ್ಲಿಮೆಂಟ್ ಮುಂಭಾಗ ಮುಂದಿನ ಪೀಳಿಗೆಗಾಗಿ ಯೋಚಿಸಿ ಹವಾಮಾನ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಸುರಕ್ಷಿತ ಹವಾಮಾನ ಮತ್ತು ಉತ್ತಮ ಪ್ರಪಂಚಕ್ಕಾಗಿ ಕಾರ್ಯ ನಿರ್ವಹಿಸಿ ಎಂದು ಸಂದೇಶ ನೀಡಲಾಯಿತು. ಈ ಸಂದರ್ಭದಲ್ಲಿ ಮರ್ಲೆನೆ ಆಶ್ಲೇಯ್, ಕ್ಲಾರ ಮಾರಿಯಾ, ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್, ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಪತ್ರಕರ್ತ ತ್ಯಾಗರಾಜ್ ಉಪಸ್ಥಿತರಿದ್ದರು.

ವಕ್ಫ್ ಸಚಿವ ಜಮೀರ್ ವಿರುದ್ಧ ಶಿಸ್ತು ಕ್ರಮದ ಸುಳಿವು ನೀಡಿದ ಗೃಹ ಸಚಿವ ಡಾ.ಪರಮೇಶ್ವರ್

ಮೈಸೂರು, ನ.18 (ಆರ್‌ಕೆ)– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯನ್ನು ಕರಿಯಾ ಎಂದು ಹೇಳಿಕೆ ನೀಡಿ ವಿವಾದ ಸೃಷ್ಟಿಸಿರುವ ರಾಜ್ಯ ವಕ್ಫ್ ಸಚಿವ ಜಮೀರ್ ಅಹಮ್ಮದ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸುಳಿವನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ್ ನೀಡಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಗೃಹ ಸಚಿವರು, ಸುದ್ದಿಗಾರರೊಂದಿಗೆ ಮಾತನಾಡಿ, ಚನ್ನಪಟ್ಟಣ ಉಪಚುನಾವಣೆಯ ವೇಳೆ ಜಮೀರ್ ಅಹಮ್ಮದ್, ಹೇಳಿಕೆ ಕಾಂಗ್ರೆಸ್ ಪಕ್ಷಕ್ಕೆ ಇರಿಸು ಮುರಿಸು ಉಂಟು ಮಾಡಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಹೇಳಿದ್ದಾರೆ. ಅಧ್ಯಕ್ಷರು ಬೇಕಾದರೆ ವರದಿ ತರಿಸಿಕೊಂಡು ಶಿಸ್ತು ಪಾಲನಾ ಸಮಿತಿ ಅಧ್ಯಕ್ಷರಾದ ರಹೀಂಖಾನ್ ಅವರ ಮೂಲಕ ಶಿಸ್ತು ಕ್ರಮ ಕೈಗೊಳ್ಳಬಹುದು ಎಂದರು.

ನಾನೂ ಈ ಹಿಂದೆ ಎಐಸಿಸಿ ಶಿಸ್ತುಪಾಲನಾ ಸಮಿತಿ ಸದಸ್ಯನಾಗಿದ್ದೆ. ಪಕ್ಷಕ್ಕೆ ಹಾನಿಕಾರಕ ಹೇಳಿಕೆ ಕೊಡುವವರು ಎಷ್ಟೇ ದೊಡ್ಡವರಾಗಿದ್ದರೂ ಅವರಿಗೆ ನೋಟಿಸ್ ಕೊಟ್ಟು ಕರೆಸುತ್ತಿದ್ದೆವು. ಅಗತ್ಯಬಿದ್ದರೆ ಕಾಂಗ್ರೆಸ್ ಪಕ್ಷದಿಂದ ಸಸ್ಪೆಂಡ್ ಮಾಡುತ್ತಿದ್ದೆವು. ಈಗಲೂ ಕೆಪಿಸಿಸಿ ಅಧ್ಯಕ್ಷರು ಶಿಸ್ತು ಪಾಲನಾ ಸಮಿತಿ ಗಮನಕ್ಕೆ ಈ ವಿಚಾರವನ್ನು ತರಬಹುದು. ಜಮೀರ್ ಹೇಳಿಕೆಯಿಂದ ಚನ್ನಪಟ್ಟಣ ಉಪಚುನಾವಣೆಯಲ್ಲಿ ಸ್ವಲ್ಪಮಟ್ಟಿನ ಪರಿಣಾಮ ಬೀರುತ್ತದೆ ಎಂದು ಪಕ್ಷದ ನಾಯಕರೇ ಹೇಳುತ್ತಿದ್ದಾರೆ. ಜಮೀರ್ ವಿರುದ್ಧ ಕ್ರಮ ಕೈಗೊಳ್ಳಲು ಡಿ.ಕೆ. ಶಿವಕುಮಾರ್ ಅವರಿಗೆ ಪರಮಾಧಿಕಾರವಿದೆ ಎಂದರು.

40% ಕಮಿಷನ್: ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ 40% ಕಮಿಷನ್ ಆರೋಪಕ್ಕೆ ಲೋಕಾಯುಕ್ತ ಪೊಲೀಸರು ದಾಖಲೆಯಿಲ್ಲ ಎಂದಿರಬಹುದು. ಆದರೆ ಆರೋಪ ಮರುತನಿಖೆಗೆ ಒಳಪಡಿಸಲು ನಾವು ಸಿದ್ಧ. ರಾಜ್ಯದ ನೋಂದಾಯಿತ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿದ್ದ ಕೆಂಪಣ್ಣ ಅವರು ನೀಡಿದ ಪತ್ರದ ಆಧಾರದ ಮೇಲೆ ನಾವು ಹೋರಾಟ ಮಾಡುತ್ತಿದ್ದೆವು. ನಮಗೆ ಅದೇ ಅಧಿಕೃತ ದಾಖಲೆ. ಈಗ ಲೋಕಾಯುಕ್ತದವರು ಯಾವ ಆಧಾರದ ಮೇಲೆ ಸಾಕ್ಷಿಯಿಲ್ಲ ಎಂದು ಹೇಳುತ್ತಿದ್ದಾರೆಯೋ ಗೊತ್ತಿಲ್ಲ. ನಾನು ಲೋಕಾಯುಕ್ತ ವರದಿಯನ್ನು ಓದಿ ನಂತರ ಅದರ ಬಗ್ಗೆ ತೀರ್ಮಾನ ಮಾಡುತ್ತೇನೆ ಎಂದು ಗೃಹ ಸಚಿವರು ಪ್ರತಿಕ್ರಿಯೆ ನೀಡಿದರು.



ಡಾ. ಪರಮೇಶ್ವರ್



ಜಮೀರ್‌ಅಹ್ಮದ್

ಕೋವಿಡ್ ಹಗರಣ: ಕೊರೊನಾ ವೇಳೆ ಮಾತ್ರೆ, ಪಿಪಿಇ ಕಿಟ್, ಮಾಸ್ಕ್‌ಗಳ ಖರೀದಿಯಲ್ಲಿ ಕೋಟ್ಯಾಂತರ ರೂ. ಭ್ರಷ್ಟಾಚಾರವಾಗಿದೆ ಎಂಬ ನ್ಯಾಯಮೂರ್ತಿ ಮೈಕಲ್ ಡಿ. ಕುನ್ನ ಅವರ ವರದಿ ನಮ್ಮ ಕೈ ಸೇರಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. 500 ರೂ. ಬೆಲೆಯ ಪಿಪಿಇ ಕಿಟ್‌ಅನ್ನು 5000 ಸಾವಿರ ರೂ.ಗೆ ಖರೀದಿಸಲಾಗಿದೆ. ಚೀನಾ ಮೂಲದ ಉತ್ಪನ್ನಗಳಿಗೆ ಭಾರೀ ಮೌಲ್ಯ ನೀಡಿ ಅವ್ಯವಹಾರ ಮಾಡಲಾಗಿದೆ ಎಂದು ಎಸ್‌ಐಟಿ ತನಿಖೆಗೆ ತೀರ್ಮಾನಿಸಲಾಗಿದೆ ಎಂದರು.

ಅಶೋಕ್ ಹೇಳಿಕೆಗೆ ತಿರುಗೇಟು: ಇದು 100% ಕಮಿಷನ್ ಸರ್ಕಾರ ಎಂಬ ವಿಪಕ್ಷ ನಾಯಕ ಆರ್. ಅಶೋಕ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಡಾ. ಪರಮೇಶ್ವರ್, ಬಾಯಿಗೆ ಬಂದಂತೆ 100% ಎಂದರೆ ಹೇಗೆ. ಅದಕ್ಕೆ ದಾಖಲೆ ಇದ್ದರೆ ಬಿಡುಗಡೆ ಮಾಡಲಿ. ನಾವು ಅವರ ಸರ್ಕಾರವನ್ನು 40% ಕಮೀಷನ್ ಎಂದಿದ್ದು ಸತ್ಯ. ಕೆಂಪಣ್ಣ ನಿಯೋಗ ಪ್ರಧಾನ ಮಂತ್ರಿಗೆ ಇಂತಹ ಪತ್ರ ಬರೆದಿತ್ತು. ಆದರೆ, ಬಿಜೆಪಿಯವರಿಗೆ ನಮ್ಮದು 100% ಎಂಬುದಕ್ಕೆ ಸಾಕ್ಷಿ ಎಲ್ಲಿದೆ ಎಂದು ಪ್ರಶ್ನಿಸಿದರು.

ಶಾಸಕರ ಖರೀದಿ: ಶಾಸಕರ ಖರೀದಿಗೆ ಬಿಜೆಪಿ ಈಗಲೂ ಪ್ರಯತ್ನ ಮಾಡುತ್ತಿದೆ. 50 ಕೋಟಿ ಎನ್ನುತ್ತಿದ್ದರು. ಈಗ ಅದು 100 ಕೋಟಿ ಆಫರ್ ಮಾಡುತ್ತಿದ್ದಾರೆ ಎಂಬ ವಿಷಯ ತಿಳಿಯುತ್ತಿದೆ. ಅದು ಎಷ್ಟು ಕೋಟಿ ಎಂಬುದು ನನಗೆ ತಿಳಿದಿಲ್ಲ. ಈ ಬಗೆಯ ಪ್ರಯತ್ನ ಅವರು ಮಾಡುತ್ತಲೇ ಇದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ 100 ಕೋಟಿ ಎಂದ ಮೇಲೆ ಅದು ಸತ್ಯವಿರಬೇಕು. ಈ ವಿಚಾರವಾಗಿ ಸರಿಯಾದ ದಾಖಲೆ ಸಿಕ್ಕರೆ ಅದನ್ನೂ ತನಿಖೆ ಗೊಳಪಡಿಸುತ್ತೇವೆ. ಏಕೆಂದರೆ, ಬಿಜೆಪಿಯವರು ಆಪರೇಷನ್ ಕಮಲ ಮಾಡುವುದರಲ್ಲಿ ಎತ್ತಿದ ಕೈ. ಅವರು ಎಕ್ಸ್‌ಪರ್ಟ್‌ಗಳಿದ್ದಾರೆ ಎಂದೂ ಡಾ.ಜಿ. ಪರಮೇಶ್ವರ್ ಇದೇ ವೇಳೆ ನುಡಿದರು.

ಡ್ರಗ್ಸ್ ಮಾರಾಟ ದಂಧೆ: ಬೆಂಗಳೂರಿನಲ್ಲಿ ಡ್ರಗ್ಸ್ ಮಾರಾಟ ದಂಧೆ ಇದೆ ಎಂಬ ವಿಷಯ ತಿಳಿಯುತ್ತಿದ್ದಂತೆ ಬೆಂಗಳೂರು ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ. ಬೇರೆ ರಾಜ್ಯದಿಂದ ಕರ್ನಾಟಕಕ್ಕೆ ಡ್ರಗ್ಸ್ ತರುತ್ತಿದ್ದವರನ್ನು ಪೊಲೀಸರು ಹಿಡಿದಿದ್ದಾರೆ. ಮೆಡಿಕಲ್ ಸ್ಟೋರ್‌ಗಳಲ್ಲೂ ತಪಾಸಣೆ ಮಾಡಲಾಗುತ್ತಿದೆ. ನಮ್ಮ ಸರ್ಕಾರ ಡ್ರಗ್ಸ್ ವಿರುದ್ಧ ವಾರ್ ಡಿಕ್ಲೇರ್ ಮಾಡಿದೆ ಎಂದರು.

ಸಿಎಂ ಬದಲಾವಣೆ ವಿಚಾರವೇ ಇಲ್ಲ: ಸಿಎಂ ಕಂಡರೆ ಬಿಜೆಪಿಯವರಿಗೆ ಹೊಟ್ಟೆಯುರಿ. ಹಾಗಾಗಿ ಅವರು ಮುಖ್ಯಮಂತ್ರಿಗಳನ್ನು ಇಳಿಸುವ ದಿನಾಂಕ ನಿಗದಿಮಾಡಿದ್ದಾರೆ. ನಮ್ಮ ಕಾಂಗ್ರೆಸ್‌ನಲ್ಲಿ ಯಾವತ್ತೂ ಈ ಚರ್ಚೆ ಆಗಿಲ್ಲ. ಬಿಜೆಪಿಯವರು ಈ ಚರ್ಚೆ ಬಿಟ್ಟು ಬೇರೇನೂ ಮಾತನಾಡುತ್ತಿಲ್ಲ. ಸಿದ್ದರಾಮಯ್ಯ ಅವರ ಮೇಲೆ ತನಿಖೆ ಆಗಬೇಕಾದರೆ ಮಾಡಲಿ. ಇಡಿ, ಸಿಬಿಐನವರು ನಮ್ಮನ್ನು ಕೇಳಿ ತನಿಖೆ ಮಾಡುತ್ತಾರೆ ಎಂದರು. ನನ್ನನ್ನು ಮುಟ್ಟಿದರೆ ಈ ರಾಜ್ಯದ ಜನ ಹೋರಾಡುತ್ತಾರೆ ಎಂಬ ಸಿಎಂ ಹೇಳಿಕೆ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ ಡಾ.ಜಿ.ಪರಮೇಶ್ವರ್ ಅವರು ಸಿಎಂ ವಿರುದ್ಧ ಸುಖಾಸುಮ್ಮನೆ ಆರೋಪ ಮಾಡುತ್ತಾರೆ ಎಂದರೆ ಜನರು ತಾನೆ ಏನು ಮಾಡುತ್ತಾರೆ ಹೇಳಿ. ಅದರಲ್ಲೂ ಮೈಸೂರಿನ ಜನ ಏನು ಮಾಡಬಹುದು ಎಂದರು.

ಬಿಪಿಎಲ್ ಕಾರ್ಡ್ ರದ್ದು: ಬಿಪಿಎಲ್ ಕಾರ್ಡ್ ರದ್ದುಪಡಿಸುತ್ತಿರುವುದನ್ನು ಸಮರ್ಥಿಸಿಕೊಂಡ ಗೃಹ ಸಚಿವರು, ನಮ್ಮ ಗ್ಯಾರಂಟಿ ಯೋಜನೆಗಳಿಗೂ ಬಿಪಿಎಲ್ ಕಾರ್ಡ್ ರದ್ದು ಮಾಡುವುದಕ್ಕೂ ಯಾವುದೇ ಸಂಬಂಧವಿಲ್ಲ. ಸರ್ಕಾರಿ ನೌಕರರು, ಎರಡು–ಮೂರು ಕಾರು ಹೊಂದಿರುವವರು, ಮೂರು–ನಾಲ್ಕು ಮನೆ ಹೊಂದಿರುವವರು, ತೆರಿಗೆ ಕಟ್ಟುತ್ತಿರುವವರು, ಮೂರು ಹೆಕ್ಟೇರ್ ಜಮೀನು ಹೊಂದಿರುವವರು ಬಿಪಿಎಲ್ ಕಾರ್ಡ್ ಬಳಸುತ್ತಿದ್ದಾರೆ. ಅಂತಹವರು ತಾವಾಗಿಯೇ ಬಿಪಿಎಲ್ ಕಾರ್ಡ್ ಅನ್ನು ವಾಪಸ್ ಕೊಡಬೇಕಿತ್ತು. ಈಗ ನಾವು ಅದನ್ನು ಪರಿಷ್ಕರಣೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಈ ಕೆಲಸವನ್ನೂ ಹಿಂದೆಯೇ ಮಾಡಬೇಕಿತ್ತು. ತಡವಾಗಿಯಾದರೂ ಮಾಡುತ್ತಿದ್ದೇವೆ. ಇದರಿಂದ ಅರ್ಹರಿಗೆ ಮಾತ್ರ ಸೌಲಭ್ಯ ಸಿಗಬೇಕು ಎಂಬುದು ಡಾ.ಜಿ.ಪರಮೇಶ್ವರ್ ನುಡಿದರು.

ಇಂದಿನಿಂದ ಕೆಜಿ ಕೊಪ್ಪಲು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಕುಂಭಾಭಿಷೇಕ ಮಹೋತ್ಸವ

ಮೈಸೂರು,ನ.18(ಪಿಎಂ)– ಕನ್ನೇಗೌಡನಕೊಪ್ಪಲಿನ (ಕೆಜಿ ಕೊಪ್ಪಲು) ಪೈಲ್ವಾನ್ ಬಸವಯ್ಯನವರ ವೃತ್ತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 14ನೇ ವರ್ಷದ ಕುಂಭಾಭಿಷೇಕ ಮಹೋತ್ಸವವನ್ನು ನ.19 ಮತ್ತು 20ರಂದು ಆಯೋಜಿಸಲಾಗಿದೆ.

ನ.19ರಂದು ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರತೀರ್ಥಸಂಗ್ರಹ, ಯಾಗ ಶಾಲಾಪ್ರವೇಶ, ಗಣಪತಿ ಪೂಜಾ ಪೂರ್ವಕ, ಪುಣ್ಯಾಹ, ಪಂಚಗವ್ಯ ಸಾಧನ, ಸಂಪ್ರೋಕ್ಷಣೇ, ಗಣಹೋಮ, ನವಗ್ರಹಪೂಜೆ, ಮೃತ್ಯುಂಜಯ ಪೂಜೆಹೋಮ, ಪ್ರಧಾನ ಕಳಸ ಸ್ಥಾಪನೆ ವಿಧಿವಿಧಾನಗಳು ನಡೆಯಲಿವೆ. ನ.20 ರಂದು ಬೆಳಗ್ಗೆ ಪ್ರಧಾನ ಹೋಮ ನಡೆಯಲಿದ್ದು, ಬೆಳಗ್ಗೆ 9.30 ಗಂಟೆಯಿಂದ ಪೂರ್ಣಾಹುತಿ, 10ಕ್ಕೆ ಧನಸ್ಸು ಲಗ್ನದಲ್ಲಿ ಕುಂಭಾಭಿಷೇಕ ಅಲಂಕಾರ



ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ತೀರ್ಥ ಪ್ರಸಾದ ವಿನಿಯೋಗ ಮತ್ತು ಅನ್ನ ಸಂತರ್ಪಣೆ ನಡೆಯಲಿವೆ.

ಕುಂಭಾಭಿಷೇಕ ಮಹೋತ್ಸವದಲ್ಲಿ ಅತಿಥಿಗಳಾಗಿ ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಮಹಾರಾಜ ಸಂಸ್ಕೃತ ಪಾಠಶಾಲೆಯ ನಿವೃತ್ತ ಪ್ರಾಧ್ಯಾಪಕ ವಿದ್ವಾನ್ ಎಂ. ಮಲ್ಲಣ್ಣ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಆರ್.ಲಿಂಗಪ್ಪ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಕುಮಾರ್, ನಿಂಗಣ್ಣ, ಕೆ.ಎಂ.ಶಂಕರ್, ಎಸ್. ಬಾಲು, ಚನ್ನಪ್ಪ, ಕೆಂಪಣ್ಣ, ಗೋಪಿ, ಲಕ್ಷ್ಮೀ ಮಾದೇಗೌಡ ಅವರು ಪಾಲ್ಗೊಳ್ಳಲಿದ್ದಾರೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ರೇವಣ್ಣ ಶ್ರೀಕಂಠೇಶ್ವರ ದರ್ಶನ



ಮಾಜಿ ಸಚಿವ ಹಾಗೂ ಹಾಲಿ ಹೊಳೆನರಸೀಪುರ ಶಾಸಕ ಹೆಚ್.ಡಿ. ರೇವಣ್ಣ ಕಾರ್ತಿಕ ಸೋಮವಾರದ ಅಂಗವಾಗಿ ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದರು. ಈ ವೇಳೆ ವಿಧಾನಪರಿಷತ್ ಸದಸ್ಯ ಕೆ. ವಿವೇಕಾನಂದ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ನಿವೃತ್ತ ಎಸ್ಪಿ ಶಂಕರೇಗೌಡ ಇತರರು ಉಪಸ್ಥಿತರಿದ್ದರು.

ಪ್ರಧಾನಮಂತ್ರಿ ಕಚೇರಿ ನಕಲಿ ಅಧಿಕಾರಿ ವಿರುದ್ಧ ಸಿಬಿಐ ಪ್ರಕರಣ ದಾಖಲು

ನವದೆಹಲಿ: ಕೇಂದ್ರೀಯ ತನಿಖಾ ದಳ ಪ್ರಧಾನಮಂತ್ರಿ ಕಚೇರಿಯ ಅಧಿಕಾರಿ ಎಂದು ಹೇಳಿ ಜನರನ್ನು ವಂಚಿಸಿದ ಆರೋಪದ ಮೇಲೆ ವ್ಯಕ್ತಿಯೊಬ್ಬನ ವಿರುದ್ಧ ಪ್ರಕರಣ ದಾಖಲಿಸಿದೆ.

ನೋಯ್ಡಾದ ಸೆಕ್ಟರ್ 99 ರಲ್ಲಿರುವ ಗ್ರೀನ್ ವ್ಯೂ ಅಪಾರ್ಟ್‌ಮೆಂಟ್‌ನ ನಿವಾಸಿ ಜೆಕೆ ಪರಿದಾ ವಿರುದ್ಧ ಪಿಎಂಒ ದೂರಿನ ಮೇರೆಗೆ ಕೇಂದ್ರ ತನಿಖಾ ಸಂಸ್ಥೆ ಕ್ರಮ ಕೈಗೊಂಡಿದೆ.

ಅವರ ವಿವಿಧ ಉದ್ದೇಶಿತ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳು ಅವರನ್ನು ಪ್ರೆಸ್ ಆಫ್ ಇಂಡಿಯಾ ಬ್ಯೂರೋ ಅಟ್ ಪಾರ್ಲಿಮೆಂಟ್ ಹೌಸ್, DG(ಗೌಪ್ಯ ಪತ್ರಿಕಾ ಮಾಹಿತಿ) ಪ್ರೆಸ್ ಆಫ್ ಇಂಡಿಯಾ ಬ್ಯೂರೋ ನವದೆಹಲಿ ಇತ್ಯಾದಿಯಾಗಿ ಬಿಂಬಿಸಿವೆ.

ಪಿಎಂಒ ಅಧಿಕಾರಿಯಂತೆ ಸೋಗು ಹಾಕುವುದು ಮತ್ತು ಪಿಎಂಒ ಹೆಸರನ್ನು ದುರುಪಯೋಗಪಡಿಸಿಕೊಂಡಂತೆ ಪ್ರಾಥಮಿಕ ತನಿಖೆಯಿಂದ ತೋರುತ್ತಿದೆ. ಅಂತಹ ಯಾವುದೇ ಅಧಿಕಾರಿ ಈ ಕಚೇರಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಪರಿದಾ ಅವರು ಪ್ರಧಾನಮಂತ್ರಿ ಕಚೇರಿಯ ಅಧಿಕಾರಿಯಂತೆ ಪೋಸ್ ನೀಡಿದ್ದರು ಮತ್ತು ಹಣ ಕಾಸಿನ ಪರಿಗಣನೆಗೆ ಬದಲಾಗಿ ಹಲವು ಅನುಕೂಲಗಳನ್ನು ಕೊಡಿಸುವುದಾಗಿ ಆಫರ್ ನೀಡುತ್ತಿದ್ದರು ಎಂದು PMO ಆರೋಪಿಸಿದೆ. ದೂರಿನ ಆಧಾರದ ಮೇಲೆ ಸಿಬಿಐ ಜೀತೇಂದ್ರ ಕುಮಾರ್ ಪರಿದಾ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 204 (ಸಾರ್ವಜನಿಕ ಸೇವಕನಂತೆ ನಟಿಸಿದ ಅಪರಾಧ) ಮತ್ತು 319 (ವ್ಯಕ್ತಿಯಿಂದ ವಂಚನೆಗೆ ಸಂಬಂಧಿಸಿದ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಏರ್‌ಪೋರ್ಟ್ ಮಾದರಿಯಲ್ಲಿ ಮೆಜೆಸ್ಟಿಕ್ ರೈಲ್ವೆ ನಿಲ್ದಾಣ ಅಭಿವೃದ್ಧಿ: ಸೋಮಣ್ಣ



ಬೆಂಗಳೂರು: ಮೆಜೆಸ್ಟಿಕ್ ರೈಲ್ವೆ ನಿಲ್ದಾಣವನ್ನು ವಿಮಾನ ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿ ಮಾಡುವುದಾಗಿ ಕೇಂದ್ರ ರೈಲ್ವೆ ರಾಜ್ಯ ಖಾತೆಯ ಸಚಿವ ಸೋಮಣ್ಣ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮೆಜೆಸ್ಟಿಕ್ ರೈಲ್ವೆ ನಿಲ್ದಾಣವನ್ನ ಅಭಿವೃದ್ಧಿಪಡಿಸಲು ನಿರ್ಧಾರ ಮಾಡಲಾಗಿದೆ. ವಿಮಾನ ನಿಲ್ದಾಣ ಮಾದರಿಯಲ್ಲಿ ಮೆಜೆಸ್ಟಿಕ್ ರೈಲ್ವೆ ನಿಲ್ದಾಣ ಅಭಿವೃದ್ಧಿ ಮಾಡುತ್ತೇವೆ. ಇದಕ್ಕಾಗಿ 1500 ಕೋಟಿ ರೂ. ವೆಚ್ಚವಾಗಲಿದ್ದು ಈಗಾಗಲೇ ಸಮಗ್ರ ಯೋಜನಾ ವರದಿ (ಡಿಪಿಆರ್) ರಚಿಸಲಾಗಿದೆ ಎಂದರು. ಯೋಜನೆಯ ಬಗ್ಗೆ ಬೋರ್ಡ್ ಮುಂದೆ ಇಟ್ಟಾಗ ಕೆಲವೊಂದು ಸ್ಪಷ್ಟನೆ ಕೇಳಿದ್ದರು. ಹೀಗಾಗಿ ಮುಂದಿನ ರೈಲ್ವೆ ಬೋರ್ಡ್ ಸಂಬಂಧ ಚರ್ಚೆ ಮಾಡುತ್ತೇವೆ. ಪ್ರಧಾನಿ ಮೋದಿ ಅವರು ಗ್ರೀನ್ ಸಿಗ್ನಲ್ ನೀಡಿದ್ದಕ್ಕೆ ಕೆಲಸ ಆಗುತ್ತಿದೆ. 3–4 ದಿನಗಳಲ್ಲಿ ಸಚಿವ ಅಶ್ವಿನಿ ವೈಷ್ಣವ್ ಅವರೊಂದಿಗೆ ಮಾತನಾಡಿ ಆದಷ್ಟು ಬೇಗ ಕೆಲಸ ಆರಂಭ ಮಾಡುತ್ತೇವೆ. ನಾನೇ ಬೆಂಗಳೂರಿಗೆ ಬಂದು ಘೋಷಣೆ ಮಾಡುತ್ತೇನೆ ಎಂದು ಹೇಳಿದರು.

40% ಕಮಿಷನ್ ಆರೋಪದಂತೆ ಕೋವಿಡ್‌ನಲ್ಲೂ ಕ್ಲೀನ್ ಚಿಟ್

ಕೇಂದ್ರ ಸಚಿವ ಸೋಮಣ್ಣ ವಿಶ್ವಾಸ

ಬೆಂಗಳೂರು: 40% ಕಮಿಷನ್ ಆರೋಪದಂತೆಯೇ ಕೋವಿಡ್ ಹಗರಣದ ಆರೋಪದಲ್ಲೂ ಬಿಜೆಪಿಗೆ ಕ್ಲೀನ್ ಚಿಟ್ ಸಿಗಲಿದೆ ಎಂದು ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೋವಿಡ್ ಹಗರಣದ ತನಿಖೆಗೆ ಎಸ್‌ಐಟಿ ರಚನೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, 40% ಕಮಿಷನ್ ಆರೋಪ ಏನ್ ಆಯ್ತು ಹೇಳಿ? ಕೋವಿಡ್ ಕೂಡಾ ಹಾಗೇ ಆಗುತ್ತದೆ. ಪದೇ ಪದೇ ಇಂತಹ ದ್ವೇಷ ರಾಜಕೀಯ ಮಾಡಬಾರದು. ಸಿದ್ದರಾಮಯ್ಯ ಅಂತಹವರ ಕಾಲದಲ್ಲಿ ಹೀಗೆಲ್ಲಾ ಆಗಬಾರದು. ತಪ್ಪಾಗಿದ್ದರೆ ತಪ್ಪು ಮಾಡಿದವರು ನೀರು ಕುಡಿಯುತ್ತಾರೆ

3 ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶದ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಶಿಗ್ಗಾವಿಯಲ್ಲಿ ಬಿಜೆಪಿ ಗೆಲ್ಲಲಿದೆ. ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲ್ಲುತ್ತಾರೆ. ಸಂಡೂರು 50:50 ಇದೆ ಎಂದರು. ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾನು ಕೂಡ ಮಾಧ್ಯಮಗಳಲ್ಲಿ ಈ ವಿಷಯ ನೋಡಿದ್ದೇನೆ. ಅದರೆ ಹೀಗೆ ಆಗಬಾರದು. ಕಾರ್ಡ್ ರದ್ದು ಆಗುತ್ತಿರುವುದು ಸರಿಯಲ್ಲ ಎಂದರು.

ಆಪರೇಷನ್ ಕಮಲಕ್ಕೆ ಬಿಜೆಪಿಯಿಂದ 100 ಕೋಟಿ ಆಫರ್ ಮಾಡಿದ್ದಾರೆ ಎಂಬ ಕಾಂಗ್ರೆಸ್ ಶಾಸಕ ರವಿ ಗಣಿಗ ಆರೋಪ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಸೋಮಣ್ಣ, ಮೊದಲು ಅವರು ಶಾಸಕರಾಗಿ ಕೆಲಸ ಮಾಡಲಿ. ಇಲ್ಲಸಲ್ಲದ ಮಾತುಗಳನ್ನು ಶಾಸಕರು ಆಡುವುದು ಬೇಡ. ಶಾಸಕರಿಗೆ ಇದು ಗೌರವ ತರುವುದಿಲ್ಲ ಎಂದು ಸೋಮಣ್ಣ ಕಿಡಿಕಾರಿದರು.

ಸಿರಿಧಾನ್ಯ ಕೃಷಿ ಕೈಗೊಳ್ಳಲು ರೈತರಿಗೆ ಸಲಹೆ

ಮೈಸೂರು, ನ. 18– ಐಸಿಐಸಿಐ ಬ್ಯಾಂಕಿನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ವಿಭಾಗವಾದ ಐಸಿಐಸಿಐ ಪ್ರತಿಷ್ಠಾನವು, ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ 2,100 ರೈತರಿಗೆ ಸಿರಿಧಾನ್ಯ ಕೃಷಿ ಕೈಗೊಳ್ಳುವ ಕಾರ್ಯಸಾಧ್ಯತೆಗಳಿಗೆ ಬೆಂಬಲ ಮತ್ತು ನೆರವು ಒದಗಿಸುವ ಮೂಲಕ ಸಾವಯವ ಕೃಷಿಗೆ ಪ್ರೋತ್ಸಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆ ಸಂದರ್ಭದಲ್ಲಿ ಐಸಿಐಸಿಐ ಪ್ರತಿಷ್ಠಾನವು ಸ್ಥಳೀಯ ರೈತರಿಗೆ ಸಿರಿಧಾನ್ಯ ಕೃಷಿಯನ್ನು ಪುನರಾರಂಭಿಸಲು ಮತ್ತು ಅವರ ಜೀವನೋಪಾಯ ಸುಧಾರಿಸಲು ಸಹಾಯ ಮಾಡಿತು. ಸಮಗ್ರ ತರಬೇತಿ ಕಾರ್ಯಕ್ರಮಗಳ ಮೂಲಕ 26 ಗ್ರಾಮಗಳ ಸುಮಾರು 1,800 ರೈತರಿಗೆ ಸಾವಯವ ಕೃಷಿ ಪದ್ಧತಿಗಳ ಬಗ್ಗೆ ಶಿಕ್ಷಣ ನೀಡಿತು. ಈ ಅವಧಿಯಲ್ಲಿ ಮಣ್ಣಿನ ಫಲವತ್ತತೆ ಮತ್ತು ಸುಧಾರಿತ ಕೃಷಿ ಪರಿಸ್ಥಿತಿಗಳಿಗೆ ಕಾರಣವಾಗುವ ಹಾನಿಕಾರಕ ರಾಸಾಯನಿಕಗಳ ಬಳಕೆಯನ್ನು ತೊಡೆದುಹಾಕುವ ಸಮರ್ಥನೀಯ ಅಭ್ಯಾಸಗಳ ಪ್ರಾಮುಖ್ಯತೆಗೆ ಪ್ರತಿಷ್ಠಾನವು ಒತ್ತು ನೀಡಿತು.

ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಮೂಲಕ ಮತ್ತು ನೀರು ಮತ್ತು ಸ್ವಚ್ಛ ಇಂಧನದಂತಹ ಅಗತ್ಯ ಸಂಪನ್ಮೂಲಗಳ ಲಭ್ಯತೆ ಸುಧಾರಿಸುವ ಮೂಲಕ ಪ್ರತಿಷ್ಠಾನವು, ರೈತರಿಗೆ ತಮ್ಮ ನೈಸರ್ಗಿಕ ಕೃಷಿ ಕಾರ್ಯವಿಧಾನವನ್ನು ಮರಳಿ ಪಡೆಯಲು ಮತ್ತು ಹೆಚ್ಚು ಚೇತರಿಸಿಕೊಳ್ಳುವ ಕೃಷಿ ಭವಿಷ್ಯ ನಿರ್ಮಿಸಿಕೊಳ್ಳಲು ಸಹಾಯ ಮಾಡುತ್ತಿದೆ.

ಬೆಳಗಾವಿಯಲ್ಲಿ ಮೀನು ಹಿಡಿಯುತ್ತಿದ್ದ ವೇಳೆ ತಂದೆ, ಮಕ್ಕಳು ನೀರಿನಲ್ಲಿ ಮುಳುಗಿ ಸಾವು

ಬೆಳಗಾವಿ: ಮೀನು ಹಿಡಿಯುತ್ತಿದ್ದ ವೇಳೆ ನೀರಿನಲ್ಲಿ ಮುಳುಗಿ ತಂದೆ ಮತ್ತು ಮಕ್ಕಳು ಮುಳುಗಿ ಸಾವನ್ನಪ್ಪಿರುವ ಘಟನೆ ಬೆಳಗಾವಿಯಲ್ಲಿ ವರದಿಯಾಗಿದೆ. ಬೆಳಗಾವಿಯ ಯಮಕನಮರಡಿ ಸಮೀಪದ ಬೆನಕನಹೊಳಿ ಬಳಿ ಘಟಪ್ರಭಾ ನದಿ ಹಿನ್ನೀರಿನ ಪ್ರದೇಶದಲ್ಲಿ ಮೀನು ಹಿಡಿಯಲು ಹೋಗಿದ್ದ ತಂದೆ ಮತ್ತು ಇಬ್ಬರು ಮಕ್ಕಳು ನೀರುಪಾಲಾಗಿದ್ದು, ಸೋಮವಾರ ಬೆಳಿಗ್ಗೆಯಿಂದ ಅವರ ಮೃತದೇಹದ ಹುಡುಕಾಟ ನಡೆದಿದೆ. ಮೃತರನ್ನು ಬೆನಕನಹೊಳಿಯ ಲಕ್ಷ್ಮಣ ರಾಮ ಅಂಬಲಿ(45), ಅವರ ಮಕ್ಕಳಾದ ರಮೇಶ(15), ಯಲ್ಲಪ್ಪ (13) ಎಂದು ಗುರುತಿಸಲಾಗಿದೆ. ಮೂಲಗಳ ಪ್ರಕಾರ ತಂದೆ ಲಕ್ಷ್ಮಣ್ ಹಾಗೂ ಅವರ ಮಕ್ಕಳು ಘಟಪ್ರಭಾ ನದಿ ಸೇತುವೆ ಮೇಲೆ ಭಾನುವಾರ ಸಂಜೆ ಬೈಕ್ ನಿಲ್ಲಿಸಿ, ಮೀನು ಹಿಡಿಯಲು ನದಿ ನೀರಿಗೆ ಇಳಿದಿದ್ದರು. ಆದರೆ, ಸೋಮವಾರ ಬೆಳಿಗ್ಗೆಯವರೆಗೂ ಮನೆಗೆ ಬಾರದಿದ್ದಾಗ ಆತಂಕಗೊಂಡ ಕುಟುಂಬಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಮೂವರು ನೀರಿನಲ್ಲಿ ಮುಳುಗಿರುವ ಕುರಿತು ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ಈಗ ಎನ್.ಡಿ.ಆರ್.ಎಫ್ ತಂಡದವರು ಹಾಗೂ ಯಮಕನಮರಡಿ ಠಾಣೆ ಪೊಲೀಸರು ನೀರುಪಾಲಾಗಿರುವ ಮೂವರ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ.

7ನೇ ಅಂತಸ್ತಿನಿಂದ ಹಾರಿ ಪ್ರಾಣಬಿಟ್ಟ ಯುವಕ

ಬೆಂಗಳೂರು: 16 ವರ್ಷದ ಯುವಕ ನೋರ್ವ ತನ್ನ ಅಪಾರ್ಟ್‌ಮೆಂಟ್‌ನ 7ನೇ ಮಹಡಿಯಿಂದ ಕೆಳಗೆ ಹಾರಿ ಪ್ರಾಣಬಿಟ್ಟಿರುವ ಘಟನೆ ಬೆಂಗಳೂರಿನಲ್ಲಿ ವರದಿಯಾಗಿದೆ. ಬೆಂಗಳೂರಿನ ಗೆದ್ದಲಹಳ್ಳಿಯಲ್ಲಿ ಈ ಘಟನೆ ನಡೆದಿದ್ದು, ಖಾಸಗಿ ಪದವಿ ಪೂರ್ವ ಕಾಲೇಜಿನಲ್ಲಿ ಮೊದಲ ವರ್ಷದ ಪದವಿ ಪೂರ್ವ ವ್ಯಾಸಂಗ ಮಾಡುತ್ತಿದ್ದ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಆತ ಕೆಳಗೆ ಬಿದ್ದ ರಭಸಕ್ಕೆ ರಕ್ತದ ಮಡುವಿನಲ್ಲಿ ಬಿದ್ದು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ ಎಂದು ಹೇಳಲಾಗಿದೆ.

ಯುವಕನ ಈ ರೀತಿಯ ನಡೆಗೆ ಕಾರಣವೇನು ಎಂಬುದನ್ನು ತನಿಖೆ ಮಾಡುತ್ತಿರುವುದಾಗಿ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಮಾನ ಪ್ರಯಾಣದಲ್ಲಿ ದಾಖಲೆ: ನ.17ರಂದು ಒಂದೇ ದಿನ 5 ಲಕ್ಷಕ್ಕೂ ಹೆಚ್ಚು ಜನ ಪ್ರಯಾಣ

3,173 ದೇಶಿಯ ವಿಮಾನಗಳಲ್ಲಿ 5,05,412 ಮಂದಿ ಯಾನ



ನವದೆಹಲಿ: ದೇಶಿಯ ವಿಮಾನಯಾನದಲ್ಲಿ ಭಾನುವಾರ ಅತೀ ಹೆಚ್ಚು ಜನರು ಪ್ರಯಾಣಿಸುವ ಮೂಲಕ ಸಾರ್ವಕಾಲಿಕ ದಾಖಲೆ ಸೃಷ್ಟಿಯಾಗಿದೆ. ಈ ಬಗ್ಗೆ ನಾಗರಿಕ ವಿಮಾನಯಾನ ಸಚಿವಾಲಯ ಮಾಹಿತಿ ಹಂಚಿಕೊಂಡಿದೆ. ನ.17 ರಂದು ಒಂದೇ ದಿನದಲ್ಲಿ ಮೊದಲ ಬಾರಿಗೆ 5 ಲಕ್ಷ ಜನರು ಪ್ರಯಾಣಿಸಿದ್ದು, ಹಬ್ಬ ಹಾಗೂ ಮದುವೆ ಕಾರಣದಿಂದ ಪ್ರಯಾಣಿಕರ ಸಂಖ್ಯೆಯಲ್ಲಿ ದಿಢೀರ್ ಏರಿಕೆಯಾಗಿದೆ ಎಂದು ವರದಿಗಳು ತಿಳಿಸಿವೆ.

ಅಂಕಿಅಂಶಗಳ ಪ್ರಕಾರ, ಭಾನುವಾರ 5,05,412 ಜನರು ಪ್ರಯಾಣಿಸಿದ್ದು, ಒಟ್ಟು 3,173 ವಿಮಾನ ಹಾರಾಟಗೊಂಡಿವೆ.

ಇದೇ ಮೊದಲ ಬಾರಿಗೆ ಒಂದೇ ದಿನದಲ್ಲಿ 5 ಲಕ್ಷ ಜನ ಪ್ರಯಾಣಿಸಿದ್ದು, ಭಾರತೀಯ ವಿಮಾನಯಾನ ಐತಿಹಾಸಿಕ ಮೈಲುಗಲ್ಲು ತಲುಪಿದೆ. ನ.8, 9, 14, 15, ಮತ್ತು 16 ರಂದು ಕ್ರಮವಾಗಿ 4.90, 4.96, 4.97, 4.99 ಮತ್ತು 4.98 ಲಕ್ಷ ಜನರು ಪ್ರಯಾಣಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಗಲಿದ ಯೋಗಗುರು ಶರತ್ ಜೋಯಿಸ್ ಅವರಿಗೆ ಮೈಸೂರಲ್ಲಿ ಶಿಷ್ಯರಿಂದ ಅಶ್ರುತರ್ಪಣ


ಮೈಸೂರು, ನ.18 (ಆರ್‌ಕೆ)– ಅಗಲಿದ ಅಷ್ಟಾಂಗ ಯೋಗಗುರು ಶರತ್ ಜೋಯಿಸ್ ಅವರಿಗೆ ಮೈಸೂರಲ್ಲಿ ಶಿಷ್ಯವೃಂದ, ಅಭಿಮಾನಿಗಳು, ಹಿತೈಷಿಗಳು, ಸಂಬಂಧಿಕರು ಅಶ್ರುತರ್ಪಣ ಸಲ್ಲಿಸಿದ ನಂತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮೈಸೂರಿಗೆ ಕಳೆದ ತಡರಾತ್ರಿ ಅಮೆರಿಕಾದಿಂದ ಬಂದ ವಿಶ್ವಪ್ರಸಿದ್ಧಿಯ ಯೋಗಗುರು ಶರತ್ ಜೋಯಿಸ್ ಅವರ ಪಾರ್ಥಿವ ಶರೀರವನ್ನು ವಿವಿ ಮೊಹಲ್ಲಾದ ಅವರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕಾಗಿ ಇರಿಸಲಾಗಿತ್ತು. ಇಂದು ಮಧ್ಯಾಹ್ನ ಮೈಸೂರಿನ ಗೋಕುಲಂನ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮೆರಿಕಾದ ವರ್ಜಿನಿಯಾದಲ್ಲಿ ನ.11 ರಂದು ಹೃದಯಾಘಾತದಿಂದ ನಿಧನರಾದ ಶರತ್ ಅವರ ಪಾರ್ಥಿವ ಶರೀರವನ್ನು ಪತ್ನಿ ಶ್ರುತಿ ಹಾಗೂ ಪುತ್ರ ಶಾಂಭವ್ ಜೋಯಿಸ್ ಅವರು ತಡರಾತ್ರಿ ಅಮೆರಿಕಾದಿಂದ ವಿಮಾನದಲ್ಲಿ ಬೆಂಗಳೂರಿಗೆ ತಂದರು. ಭಾನುವಾರ ತಡರಾತ್ರಿ ಮೈಸೂರು ತಲುಪಿತು. ವಿವಿ ಮೊಹಲ್ಲಾ 5ನೇ ಮೇನ್‌ನಲ್ಲಿರುವ ನಿವಾಸದಲ್ಲಿ ಇಂದು ಬೆಳಗ್ಗೆ 7 ಗಂಟೆಯಿಂದ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೈಸೂರು ಶಾಖಾ ಮುಖ್ಯಸ್ಥರಾದ ಶ್ರೀ ಸೋಮನಾಥ ಸ್ವಾಮೀಜಿ, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಗಣ್ಯರು, ಜನಪ್ರತಿನಿಧಿಗಳು, ವಿದೇಶಿ ಯೋಗ ವಿದ್ಯಾರ್ಥಿಗಳು, ವಿವಿಧ ಯೋಗ ತರಬೇತಿ ಸಂಸ್ಥೆಯ ಶಿಕ್ಷಕರು ಹಾಗೂ ಹಿತೈಷಿಗಳು ಶರತ್ ಜೋಯಿಸ್ ಅವರ ಪಾರ್ಥಿವ ಶರೀರದ ದರ್ಶನ ಪಡೆದು, ತೀವ್ರ ಸಂತಾಪ ಸೂಚಿಸಿದರು. ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಕಾರ್ಪೊರೇಟರ್‌ಗಳು ಹಾಗೂ ಅಭಿಮಾನಿ ವೃಂದವೇ ಅವರ ನಿವಾಸಕ್ಕೆ ತೆರಳಿ ಅಂತಿಮ ದರ್ಶನ ಪಡೆಯಿತು.



ಮೈಸೂರಿನ ವಿವಿ ಮೊಹಲ್ಲಾ ನಿವಾಸದಲ್ಲಿ ಸೋಮವಾರ ಯೋಗಗುರು ಶರತ್ ಜೋಯಿಸ್ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಯೋಗ ವಿದ್ಯಾರ್ಥಿಗಳು, ಹಿತೈಷಿಗಳು ಅಂತಿಮ ದರ್ಶನ ಪಡೆದು, ಕಂಬನಿ ಮಿಡಿದರು.



ನಕ್ಕರೆ ಅದೇ ಸ್ವರ್ಗ

ದಂತ ವೈದ್ಯ : ಪ್ರಾಣಿಗಳಿಗೆ ಹಲ್ಲು ನೋವಿನ ಸಮಸ್ಯೆ ಇರೋದಿಲ್ಲ. ಅದೇನಿದ್ದರೂ ಮನುಷ್ಯರಿಗೆ ಮಾತ್ರ.

ರೋಗಿ : ನಿಜನಾ ಸಾರ್? ನಿಮಗೆ ಹೆಂಗೆ ಗೊತ್ತಾಯ್ತು?

ದಂತ ವೈದ್ಯ : ಹೆಂಗೆ ಗೊತ್ತಾಯ್ತು ಅಂದ್ರೆ, ಯಾವ ಪ್ರಾಣಿಯೂ ನನ್ನ ಬಳಿಗೆ ಚಿಕಿತ್ಸೆಗಾಗಿ ಬಂದಿಲ್ಲ...

ಮೈಸೂರು ಮಿತ್ರ

ಮಂಗಳವಾರ, 19 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮರಳಿನ ಮೇಲೆ ಮರಳು ಅಂತ ಬರಿಬಹುದು. ಆದರೆ ನೀರಿನ ಮೇಲೆ ನೀರು ಅಂತ ಬರಿಯೋಕ್ಕಾಗುತ್ತಾ?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದುಣ್ಣುವ ಕೆಚ್ಚಲನ್ನು ಕೊರೆದುಂಡ ಹಾಗೆ

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟದಲ್ಲಿ ಕುಸಿದ ರಸ್ತೆಯ ಕಾಮಗಾರಿ ಪೂರ್ಣಗೊಳಿಸಲು ಮತ್ತೆಷ್ಟು ಕಾಲ ಬೇಕು!?



ಮಾನ್ಯರೆ,

ಚಾಮುಂಡಿಬೆಟ್ಟದ ಮಹಾನಂದಿ ಕಡೆಗೆ ಹೋಗುವ ರಸ್ತೆ ಹಿಲ್ ವ್ಯೂವ್ ಪಾಯಿಂಟ್ ಬಳಿ 2019 ಹಾಗೂ 2021ರ ನಡುವೆ ಮೂರು ಬಾರಿ ಸುಮಾರು 400 ಮೀಟರ್‌ಗಳಷ್ಟು ರಸ್ತೆ ಬದಿ ಕುಸಿದು ಬಿದ್ದಿತ್ತು. ಆದರೆ ಕಾಮಗಾರಿ ಇನ್ನೂ ಪ್ರಗತಿಯಲ್ಲಿರುವುದನ್ನು ಭಾನುವಾರ 17ರ ನಂದಿ ಅಭಿಷೇಕದ ದಿನ ಸ್ವತಃ ಕಂಡೆ. ನಾಲ್ಕೈದು ವರ್ಷಗಳು ಕಳೆದರೂ ಇನ್ನೂ ಕೆಲಸ ಪೂರ್ಣಗೊಳ್ಳದೇ ಇರುವುದಕ್ಕೆ ತಾಂತ್ರಿಕ ಅಥವಾ ರಾಜಕೀಯ ಕಾರಣಗಳೇನು? ತಿಳಿಯದು. ಇವತ್ತಿನ ಪ್ರಗತಿಯನ್ನು ಅವಲೋಕಿಸಿದರೆ ಇನ್ನೂ ಹತ್ತು ವರ್ಷವಾದರೂ ಈ ಕಾಮಗಾರಿ ಪೂರ್ಣಗೊಳ್ಳುವ ಲಕ್ಷಣಗಳಿಲ್ಲ!. ಈ ಕಾಮಗಾರಿಗೆ ಅಂದೇ ಹತ್ತು ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಪತ್ರಿಕೆಗಳಲ್ಲಿ ಓದಿದ ನೆನಪಿದೆ. ಇವತ್ತಿನ ತಾಂತ್ರಿಕ ಯುಗದಲ್ಲಿ ಕುಸಿದ ರಸ್ತೆಯನ್ನು ಪುನಶ್ಚೇತನಗೊಳಿಸುವುದು ಇಷ್ಟೊಂದು ಕಷ್ಟವೇ?. ಆಧುನಿಕ ಕೌಶಲ್ಯಗಳಳ್ಳ ನುರಿತ ಇಂಜಿನಿಯರ್‌ಗಳು ಹಾಗೂ ಅರ್ಥ್ ಮೂವಿಂಗ್ ಮೆಷಿನ್‌ಗಳು ಇರುವಾಗ ಯಾಕಿಷ್ಟು ತಡ?, ಎಂಬುದನ್ನು ಸಂಬಂಧಿಸಿದವರೇ ಸಾರ್ವಜನಿಕರಿಗೆ ತಿಳಿಸಬೇಕು.

ಹಿಲ್ ವ್ಯೂವ್ ಪಾಯಿಂಟ್ ಸಹ ಬೀಳುವ ಸ್ಥಿತಿಯಲ್ಲಿದ್ದು, ಅದರ ಸಮೀಪದ ಇನ್ನಷ್ಟು ಭಾಗದ ರಸ್ತೆಯಲ್ಲಿ ಉದ್ದಕ್ಕೂ ಅಲ್ಲಲ್ಲಿ ಬಿರುಕು ಬಿಟ್ಟು ಕುಸಿಯುವ ಲಕ್ಷಣಗಳು ಕಂಡುಬರುತ್ತಿದೆ. ಕುಸಿತಕ್ಕೆ ಮೂಲ ಕಾರಣವನ್ನು ಅರಿತು ಕಾಮಗಾರಿಯನ್ನು ನಿರ್ವಹಿಸುವುದು ಸೂಕ್ತ. ಮೊದಲು ಸರ್ಕಾರದಿಂದ ಅನುದಾನ ಬಂತೆಂದು ಚಾಮುಂಡಿಬೆಟ್ಟದ ಮೇಲೆ ಅಭಿವೃದ್ಧಿ ಕೆಲಸ ಮಾಡುವುದನ್ನು ನಿಲ್ಲಿಸಿ, ಬೆಟ್ಟದ ಮಣ್ಣಿಗೆ ಇರುವ ಗುಣಕ್ಕೆ ನೈಸರ್ಗಿಕವಾಗಿ ಇರುವ ತನ್ನ ಬಾರವನ್ನು ಹೊರತುಪಡಿಸಿ ದೊಡ್ಡದೊಡ್ಡ ಕಟ್ಟಡಗಳ ಬಾರವನ್ನು ಹೊರುವ ಶಕ್ತಿ ಇಲ್ಲ. ಮುಂದಿನ ದಿನಗಳಲ್ಲಿ ಬೆಟ್ಟವು ಮತ್ತಷ್ಟು ಕುಸಿಯದಿರಲು ಹಾಗೂ ಮೈಸೂರಿಗರ ಹಿತದೃಷ್ಟಿಯಿಂದ ಅಭಿವೃದ್ಧಿ ಕೆಲಸಗಳಿಗೆ ನಿಷೇಧವಿರಲಿ.

ನೀರಿನಾಳದಲ್ಲಿ ತಳಪಾಯ ಹಾಕಿ ದೊಡ್ಡ ಸೇತುವೆಗಳನ್ನು ನಿರ್ಮಿಸುತ್ತೇವೆ, ಆಕಾಶವನ್ನು ಚುಂಬಿಸುವ ಎತ್ತರಕ್ಕೆ ಕಟ್ಟಡಗಳನ್ನು ಕಟ್ಟುತ್ತೇವೆ, ಕೆಲವೇ ತಿಂಗಳುಗಳಲ್ಲಿ ನೂರಾರು ಕಿಮೀ ಉದ್ದದ ಹೆದ್ದಾರಿಗಳನ್ನು ನಿರ್ಮಿಸುತ್ತೇವೆ. ಚಾಮುಂಡಿಬೆಟ್ಟದ ಕುಸಿದ ರಸ್ತೆಯನ್ನು ಪುನರ್ ನಿರ್ಮಿಸಲು ಯಾಕಿಷ್ಟು ವಿಳಂಬ? ಮೈಸೂರು ನಗರದಲ್ಲಿ ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಆಗಿರುವ ಕೆಲಸಗಳನ್ನು ಬಿಟ್ಟರೆ ಪ್ರಜಾಪ್ರಭುತ್ವ ಸರ್ಕಾರಗಳಲ್ಲಿ ಹೇಳಿಕೊಳ್ಳುವ ಕೆಲಸಗಳು ಎಲ್ಲಿ ಆಗಿವೆ?, ಕುಸಿಯುತ್ತಿರುವ ಹಾಗೂ ಕುಸಿದಿರುವ ಪಾರಂಪರಿಕ ಕಟ್ಟಡಗಳ ಸ್ಥಿತಿ ಏನಾಯಿತು?

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಒಳಚರಂಡಿಯಲ್ಲಿ ಕಸ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಕುವೆಂಪುನಗರದ (ವಾರ್ಡ್ ಸಂಖ್ಯೆ 57), ಕೆಹೆಚ್‌ಬಿ 3ನೇ ಹಂತ, ನಂದಿ ಪ್ಲೈವುಡ್ ಅಂಗಡಿ ಹಿಂಭಾಗದಲ್ಲಿರುವ ಖಾಲಿ ಮೂಲೆ ನಿವೇಶನ ಸಂಖ್ಯೆ 52ರಲ್ಲಿರುವ ಚರಂಡಿಯಲ್ಲಿ ಕಸ ಹಾಗೂ ಮಣ್ಣು ತುಂಬಿಕೊಂಡಿದ್ದು, ಮಳೆ ಬಂದಾಗ ಕೆರೆಯಂತಾಗಿ ನೀರು ಹರಿಯದೆ ಮನೆ ಫೌಂಡೇಶನ್‌ಗೆ ನುಗ್ಗುತ್ತಿದೆ. ಅಲ್ಲದೆ ಹೆಗ್ಗಣ, ಹಾವು, ಮುಂಗೂಸಿಗಳ ವಾಸ ಸ್ಥಾನವಾಗಿದ್ದು ಗಬ್ಬು ವಾಸನೆ ಬೀರುತ್ತಿದೆ. ಈ ಬಗ್ಗೆ ವಾರ್ಡ್ ಸಂಖ್ಯೆ 57ರ ಕಾರ್ಪೋರೇಶನ್ ಸೂಪರ್ ವೈಸರ್‌ಗೆ ಕ್ಲೀನಿಂಗ್ ಮಾಡಿಸಲು ಹಲವಾರು ಬಾರಿ ಮನವಿ ಮಾಡಿದ್ದರೂ ಇದುವರೆವಿಗೂ ಗಮನಹರಿಸಿಲ್ಲ. ಈ ಸಂಬಂಧ ಅ. 27ರಂದು ಕಂಪ್ಲೇಂಟ್ ಮಾಡಿದ್ದರೂ, ಗಮನಹರಿಸದೇ ಇರುವುದು ಖೇದದ ಸಂಗತಿ. ಈಗಲಾದರೂ ಸಂಬಂಧ ಪಟ್ಟವರು ಚರಂಡಿಯಲ್ಲಿ ತುಂಬಿಕೊಂಡಿರುವ ಕಸ, ಮಣ್ಣನ್ನು ತೆರವುಗೊಳಿಸಬೇಕಾಗಿ ಮನವಿ.

–ಬಿ.ಎಸ್.ಕಲ್ಲೇಶ್, ಕೆಹೆಚ್‌ಬಿ 3ನೇ ಹಂತ, ಕುವೆಂಪುನಗರ, ಮೈಸೂರು.

ತಂಗುದಾಣದ ಮುಂದೆ ಬಸ್ ನಿಲುಗಡೆ ಮಾಡಲಿ

ಮಾನ್ಯರೆ,

ಮೈಸೂರು ನಗರದ ಪ್ರಮುಖ ವೃತ್ತವಾದ ಜಯಚಾಮರಾಜೇಂದ್ರ ವೃತ್ತ (ಹಾರ್ಡಿಂಜ್ ವೃತ್ತ)ದಲ್ಲಿ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಮತ್ತಿತರ ಕಡೆಗೆ ತೆರಳುವ ಪ್ರಯಾಣಿಕರಿಗಾಗಿ ತಂಗುದಾಣವನ್ನು ನಿರ್ಮಿಸಲಾಗಿದೆ. ಆದರೆ ರಾಜ್ಯ ಸಾರಿಗೆ ಬಸ್‌ಗಳನ್ನು ರಸ್ತೆಯ ಮಧ್ಯದಲ್ಲಿಯೇ ನಿಲ್ಲಿಸುತ್ತಿರುವುದರಿಂದ ಈ ತಂಗುದಾಣವು ನಿರುಪಯುಕ್ತವಾಗಿದೆ. ಅಲ್ಲದೆ ಸದಾ ಜನ ಹಾಗೂ ವಾಹನ ದಟ್ಟಣೆಯಿಂದ ಕೂಡಿರುವ ಈ ವೃತ್ತದಲ್ಲಿ ಸಂಚಾರ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ.

ಆದ ಕಾರಣ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಿ ಕಡ್ಡಾಯವಾಗಿ ತಂಗುದಾಣದ ಮುಂದೆ ಮಾತ್ರವೇ ಬಸ್‌ಗಳನ್ನು ನಿಲುಗಡೆ ಮಾಡುವಂತೆ ತಮ್ಮ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ಈ ಮೂಲಕ ಮನವಿ.

– ಸಾವಿತ್ರಮ್ಮ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಒಂದು ಬರಹ; ನಾಲ್ಕು ಸಾಲು ಅನುಬಂಧದ ದೀಪಸಾಲು

> “ ಜೀವನವೆಂಬ ರೈಲು, ತನ್ನ ನಿಲ್ದಾಣದ ಹತ್ತಿರ ಬರುತ್ತಿದ್ದಂತೆ ವೇಗ ಕಡಿಮೆ ಮಾಡಿಕೊಂಡಂತೆ, ನಮಗೂ ಕೂಡ ಜೀವನದಲ್ಲಿ ಸಂಧ್ಯಾಕಾಲಕ್ಕೆ ಬಂದಾಗ ಮಾತ್ರ ಬುದ್ಧ ನೆನಪಾಗುತ್ತನಲ್ಲ! ಬಸವ ಯುಗದ ಮಾತುಗಳು ನೆನಪಾಗುತ್ತದಲ್ಲ! ಇಂದಿಗೂ ವೇದ ಗೊತ್ತಿಲ್ಲದ, ಉಪನಿಷತ್ತು, ಪ್ರಾಕೃತ, ಸಂಸ್ಕೃತ ಗೊತ್ತಿರದ, ಪಂಡಿತರಲ್ಲದ ಪಾಮರರು ನಮ್ಮ ನಡುವೆಯೇ ಇದ್ದು ಸಮೃದ್ಧ ಜೀವನಾನುಭವಗಳ ತಿಳುವಳಿಕೆಯಿಂದ ಬದುಕಿ, ಬಾಳಿ ಆಳಿ ಹೋಗಿದ್ದಾರೆ. ಆಸೆಗೆ ಸತ್ತುದು ಕೋಟಿ, ಆಮಿಷಕೆ ಸತ್ತುದು ಕೋಟಿ, ಹೆಣ್ಣು ಹೊನ್ನು ಮಣ್ಣಿಂಗೆ ಸತ್ತುದು ಕೋಟಿ, ನಿಮಗಾಗಿ ಸತ್ತವರನಾರನೂ ಕಾಣೆ ಗುಹೇಶ್ವರ! ಎನ್ನುವ ಅಲ್ಲಮನಂಥ ವಚನಕಾರರ ಮಾತುಗಳೇ ಸಾಮಾನ್ಯರ ನಾಡಿಮಿಡಿತ.

ಮನುಷ್ಯನ ಬದುಕು ಎಂಥ ವಿಚಿತ್ರ ಅಲ್ವಾ? ಬೇಕೆನಿಸಿದ ಕಾಲಕ್ಕೆ ಬಹಳ ಮಂದಿಗೆ ಯಾವುದೂ ಕೈಗೆಟುಕುವುದಿಲ್ಲ. ಬದುಕಿನ ಪ್ರಯಾಣ ಮುಗಿಸಿ ವಿಶ್ರಾಂತ ಜೀವನಕ್ಕೆ ಕಾಲಿಟ್ಟಾಗ ಎಲ್ಲವೂ ಇರುತ್ತದೆ. ಆದರೆ ಆಗ ನಮಗೆ ಯಾವುದೂ ಬೇಕು ಎನಿಸುವುದಿಲ್ಲ; ಕಾರಣ ಆಗ ಅದನ್ನು ಅನುಭವಿಸುವ ಮನಸ್ಸಿರುವುದಿಲ್ಲ. ನಾವೆಲ್ಲಾ ಯುವಕರಿದ್ದಾಗ ದುಡ್ಡು ಸಂಪಾದಿಸಿ ಶ್ರೀಮಂತರಾದವರನ್ನು ನಾವು ಆಸೆ ಕಣ್ಣುಗಳಿಂದ ನೋಡುತ್ತಿದ್ದೆವು.

ರುದ್ರಪ್ಪನೆಂಬ ನಮ್ಮ ಕಾಲದ ಶ್ರೀಮಂತನೊಬ್ಬ ನಮ್ಮೂರಿನ ಟೀ ಅಂಗಡಿಯ ಮುಂದೆ ಕುಳಿತು ಹೇಳುತ್ತಿದ್ದ ಮಾತುಗಳು ನಮಗೆ ಆಗ ಅರ್ಥವಾಗಿರಲಿಲ್ಲ. ರುದ್ರಪ್ಪನ ವಯಸ್ಸು ಸುಮಾರು ಎಪ್ಪತ್ತರ ಆಸುಪಾಸು ಎಂದಿಟ್ಟುಕೊಳ್ಳಿ. ಆತ ಟೀ ಅಂಗಡಿಯಲ್ಲಿ ಟೀ ಹೇಳಿದರೆ, ಅದರಲ್ಲಿ ರುದ್ರಪ್ಪನಿಗೆ ಶುಗರ್ ಲೆಸ್ ಕೊಡಬೇಕಿತ್ತು. ಒಂದೊಂದು ಬಾರಿ ಮರೆತು ಅಂಗಡಿಯವನು ಸಕ್ಕರೆ ಹಾಕಿದ ಟೀಯನ್ನೇ ಕೊಟ್ಟು ಬಿಡುತ್ತಿದ್ದ. ಆಗ ಆ ಮನುಷ್ಯ ಲೋ ಮಂಜ ಬಾಯ್ತುಂಬಾ ಸಕ್ಕರೆ ಫ್ಯಾಕ್ಟರಿನೇ ಇದೆ. ಲೋಟದಲ್ಲೂ ಸಕ್ಕರೆ ಹಾಕ್ತಿಯಲಪ್ಪಾ ಎನ್ನುತ್ತಿದ್ದ. ಮನುಷ್ಯ ಹೆಚ್ಚು ಓದಿರಲಿಲ್ಲ. ಆದರೂ ಆತ ಮಾತಾಡುತ್ತಿದ್ದ ಮಾತುಗಳಲ್ಲಿ ಜೀವನಾನುಭವದ ಅರ್ಥ ವಂತಿಕೆಗಳು ಇರುತ್ತಿದ್ದವು.

ಒಂದು ದಿನ ನಾನು ಸಕ್ಕರೆ ಇರುವ ಟೀ ಕುಡಿದರೆ ಏನಾಗುತ್ತೆ ಕುಡೀರಿ ಎಂದೆ, ಅದಕ್ಕೆ ರುದ್ರಪ್ಪ ಹೇಳಿದ ಜೀವನ ಸತ್ಯ ಏನ್ ಗೊತ್ತಾ ಸಾರ್? ಮೇಷ್ಟೇ ತಿನ್ನೋ ವಯಸ್ಸಲ್ಲಿ ಕುಡಿಯೋ ವಯಸ್ಸಲ್ಲಿ ಎಲ್ಲಾ ಸಿಕ್ಕಿ ಬಿಟ್ರೆ ಮನುಷ್ಯ ಸುಖಿ; ವಯ ಸ್ಸಲ್ಲದ ವಯಸ್ಸಲ್ಲಿ ಏನೆಲ್ಲಾ ಸಿಕ್ಕುದ್ರೂವೆ ಮನುಷ್ಯ ದಕ್ಕಿಸಿಕೊಳ್ಳಲಾರ ಕಣ್ರಿ, ಅಂದ್ರು. ಹಾಗೇ ಮಾತು ಮುಂದುವರಿಸಿ ತನ್ನ ಕಷ್ಟದ ದಿನಗಳ ಪುಟ ತೆರೆದು ನಮ್ಮ ಮುಂದೆ ಮೆಲುಕು ಹಾಕುತ್ತಿದ್ದರು ರುದ್ರಪ್ಪ ಮಾತಾಡುತ್ತಿದ್ದ ಮಾತುಗಳಲ್ಲಿ ದಟ್ಟ ಜೀವನಾನುಭವ ಇರುತ್ತಿತ್ತು. ನೋಡಿ ಒಂದು ಕಾಲದಲ್ಲಿ ನಾನು ಮಂಡೀಲಿ ಮೂಟೆ ಹೊರುತ್ತಿದ್ದೆ. ಆಮೇಲೆ ಅಂಗಡಿ ಮಾಡಿದೆ. ಹೋಲ್‌ಸೇಲರ್ ಆದೆ. ಹಾಗೇ ಬೆಳೀತಾ ಬೆಳೀತಾ ಮದುವೆ ಛತ್ರ ಕಟ್ಟಿದೆ. ಅಂಗಡಿ ಮುಂಗಟ್ಟುಗಳನ್ನು ಕಟ್ಟಿದೆ. ದೇವರು ಸಿರಿ ಕೊಟ್ಟ, ಆದ್ರೆ ಮೇಷ್ಟೇ ಭಗವಂತ ಸಿರಿ ಕೊಟ್ಟ ಕಾಲಕ್ಕೆ ತಿನ್ನೊ ಬಾಯನ್ನೂ ಕಿತ್ಕೊಂಡ; ಏನ್ ಮಾಡ್ತೀರಿ, ಎಂದು ಹೇಳುತ್ತಾ ಮೀಸೆಯಲ್ಲೇ ನಗುತ್ತಿದ್ದ ರುದ್ರಪ್ಪ.

ಆತನ ನಗೆಯಲ್ಲಿ ವಿಷಾದದ ಜೊತೆಗೆ ವಿನೋದವೂ ಇರುತ್ತಿತ್ತು. ಆತ ಹೇಳಿದ ಮಾತುಗಳು ಅತ್ಯಂತ ಸರಳವೇ ಆದರೂ, ಜೀವನ ಸತ್ಯದಂತೆ ಗೋಚರಿಸುತ್ತಿತ್ತು. ಅವರು ಹಾಗೆ ಮುಂದುವರಿಸಿದ ಮಾತಿನಲ್ಲಿ ಇನ್ನೆರಡು ಸಾಲುಗಳಿದ್ದವು. ಮೇಷ್ಟೇ! ನಾನು ನಿಮ್ಮಂಗಿದ್ದಾಗ ಸಿಕ್ಕಾಪಟ್ಟೆ ಹೊಟ್ಟೆಬಾಕ. ದಿನಕ್ಕೆ ನಾಲ್ಕು ಬಾರಿ ಊಟ ಕೊಟ್ರು ಊಟ ಮಾಡಿಬಿಡ್ತಿದೆ, ಹಸಿವು ಹಸಿವೂ ಹಸಿವು. ಮೈ ಮೂಳೆ ಮುರಿದೋಗೊ ಹಂಗೆ ದುಡೀತಿದ್ವಿ, ಯಾರಾದ್ರೂ ಮದುವೆ, ಬೀಗರ ಊಟ ಮಾಡ್ತಿದ್ರೆ ನಮ್ಮನ್ನೂ ಕರೀಬಾರ್ದ ಅನ್ನಿಸ್ತಿತ್ತು.

ಒಂದು ಪ್ಲೇಟ್ ಅನ್ನಕ್ಕೆ ಮೂರು ಪ್ಲೇಟ್‌ಗಾಗೋವಷ್ಟು ಸಾಂಬಾರ್ ಉಯ್ಸಿಸ್ಕೊಂಡು ತಿನ್ತಿದ್ದೆ. ತಿನ್ನೋ ಆಸೆ ಜಾಸ್ತಿ, ಸಂಪಾದ್ನೆ ಕಮ್ಮಿ. ದುಡಿದಿದ್ ಕೂಲೀನೆಲ್ಲಾ ನಾನೇ ತಿನ್ಕೊಂಡ್ರೆ ಮಕ್ಳೇನ್ ತಿನ್ತವೆ. ಹೆಂಡ್ತಿ ಏನುಂಡಾಳು ಅನ್ನೋ ಯೋಚ್ನೆ, ಹಂಗಿದ್ದೋ ಆ ದಿನಗಳು. ಹಂಗೇ ಕಾಲ ಕಳೆದೋಯ್ತು, ನಾನೂ ಹಂಗೆ ಉಳೀಲಿಲ್ಲ! ಕಾಲಾನೂ ಹಂಗೆ ಇರಲಿಲ್ಲ. ಕೊಡೋ ಕಾಲಕ್ಕೆ ಶಿವಕೊಟ್ಟ, ಈಗ ನೋಡಿ ಎಷ್ಟು ತಿಂತೀರಿ? ಏನುಣ್ತೀರಿ? ಅನುಕೂಲ ಅನ್ನೋದು ಬಿದ್ದು ಒದ್ದಾಡ್ತದೆ. ಆದ್ರೆ ಇಷ್ಟೆಲ್ಲಾ ಇದ್ರು ಇಷ್ಟಪಟ್ಟಿದ್ದನ್ನೆಲ್ಲಾ ತಿನ್ನೊಹಂಗಿಲ್ಲ, ಮೈ ತುಂಬಾ ಖಾಯಿಲೆ. ಬಿ.ಪಿ, ಶುಗರ್, ಸಾಲ್ದು ಅಂತ ಥೈರಾಯ್ಡು, ಫೈಲ್ಸು ಎಲ್ಲಾ ಬಂದ್ ಕೂತ್ಕಂಡವೆ. ಗೆಯ್ಯೋದ್ ಬಿಟ್ಟೆ, ಯಥೇಚ್ಛವಾಗಿ ದುಡ್ಡು ಬರೋದಕ್ಕೆ ಶುರು ಆಯ್ತು, ಅದರ ಜೊತೆಗೆ ಖಾಯಿಲೇನು ಬಂತು ಅಷ್ಟೆ, ನಿಮಗಿನ್ನು ವಯಸ್ಸಿದೆ ನೀವ್ ತಿನ್ನಿ, ಕುಡೀರಿ, ಚೆನ್ನಾಗಿರಿ. ಅಂತ ಹೇಳಿ ಮಾತು ಮುಗಿಸಿದ ರುದ್ರಪ್ಪ ಈಗಿಲ್ಲ. ಆದರೆ ಬುದ್ಧ ಬೋಧಿವೃಕ್ಷದ ಕೆಳಗೆ ಕಂಡುಕೊಂಡ ಸತ್ಯ ಇತ್ತಲ್ಲ! ಆಸೆಯೇ ದುಃಖಕ್ಕೆ ಮೂಲ– ಅನ್ನೋ ಮಾತು ಎಷ್ಟೋ ಜನಕ್ಕೆ ಅದೊಂದು ಸ್ಲೋಗನ್ ಥರಾ ಕಾಣಬಹುದು.

ಆದರೆ ನಮ್ಮ ಬದುಕಿನ ಪ್ರತೀ ಕ್ಷಣವೂ ಬೇರೆ ಬೇರೆ ರೂಪದಲ್ಲಿ ಪ್ರತಿಫಲಿಸುತ್ತಿರುತ್ತದೆ. ಆಸೆಯೆಂಬುದು ನಮ್ಮನ್ನು ಹೀಗೆಯೇ ಇಂಚಿಂಚೂ ಕಾಡುತ್ತದೆ. ಕೆಲವೊಮ್ಮೆ ಅನುಕೂಲ ಇದ್ದರೂ ಕಾಡುತ್ತದೆ. ಇಲ್ಲದಿದ್ದರೂ ಕಾಡುತ್ತದೆ. ಇಲ್ಲದಿದ್ದಾಗ ಅಯ್ಯೋ ಅದು ನಮಗಿಲ್ಲವಲ್ಲ– ಎಂಬ ದುಃಖ. ಎಲ್ಲವೂ ಇದ್ದಾಗ ಇದ್ದೂ ಅನುಭವಿಸಲಾರದ ದುಃಖ. ಒಟ್ಟಾರೆ ಆಸೆಯೆಂಬುದು ಅರಸಂಗಲ್ಲದೆ, ಶಿವಭಕ್ತರಿಗೆ ಉಂಟೇ ಅಯ್ಯಾ, ಈಸಕ್ಕಿಯಾಸೆ ನಿಮಗೇಕಯ್ಯ! ಅಂತ ವಚನಯುಗದಲ್ಲಿ ಶಿವಶರಣ ಆಯ್ದಕ್ಕಿ ಮಾರಯ್ಯನ ಪತ್ನಿ ಆಯ್ದಕ್ಕಿ ಲಕ್ಕಮ್ಮ ಪತಿ ಮಾರಯ್ಯನಿಗೆ ಹೇಳಿದ ಮಾತು ನಮ್ಮ ಕಾಲದ ಈ ಪ್ರಸಂಗಕ್ಕೆ ಹೇಗೆ ಅನ್ವಯಿಸುತ್ತದೆ ನೋಡಿ?.

ವಚನಕಾರರು ಬದುಕುತಿದ್ದ ಕಾಲದಲ್ಲಿ ಮಾರಯ್ಯನೆಂಬ ಶಿವಶರಣ ಅಕ್ಕಿಯನ್ನು ಆಯ್ದು ತಂದು, ಜೀವನ ಮಾಡುವ ಕಾಯಕ ಮಾಡುತ್ತಿದ್ದ. ಒಂದು ದಿನ ಬಸವಣ್ಣನ ಮಹಾಮನೆಯ ಸುತ್ತ ಮುತ್ತ, ದಾಸೋಹ ಮಂದಿರದ ಅಕ್ಕ ಪಕ್ಕ, ಚೀಲ ತುಂಬುವಷ್ಟು ಅಕ್ಕಿ ಆತನಿಗೆ ಸಿಕ್ಕಿಬಿಟ್ಟಿದೆ. ಸಿಕ್ಕಿದೆಲ್ಲವನ್ನೂ ಆಸೆಯಿಂದ ತುಂಬಿಕೊಂಡು ಬಂದ ಮಾರಯ್ಯ ತಾನು ತಂದ ಅಕ್ಕಿಯನ್ನು ಕಂಡು ಪತ್ನಿಯ ಮುಖ ಹೂ ಅರಳಿದ ಹಾಗೆ ಅರಳಬಹುದೆಂದು ನಿರೀಕ್ಷಿಸುತ್ತಾನೆ. ಆದರೆ ಆಕೆಯ ಮುಖ ಅರಳುವ ಬದಲು ವಿಷಾದಕ್ಕೆ ಜಾರುತ್ತದೆ. ಅಂದರೆ ಅಲ್ಲಿಯವರೆಗೂ ಸರಿಯಾಗಿಯೇ ಇದ್ದ ತನ್ನ ಪತಿ ಮಾರಯ್ಯನಿಗೆ ಅಂದು ಮಾತ್ರ ಆಸೆಯೆಂಬ ಭೂತ ಮೈಗಂಟಿಕೊಂಡಿತಲ್ಲ ಎಂಬ ಒಳನೋಟದಿಂದ ಕೂಡಲೇ ಮಾರಯ್ಯನ ಮನಸ್ಸು ಆಸೆಯ ಹಿಂದೆ ಬಿದ್ದಿರುವುದನ್ನು ಗ್ರಹಿಸುತ್ತಾಳೆ. ಅಕ್ಕಿಯನ್ನು ಸಂಗ್ರಹಿಸಿ, ಕೂಡಿಡುವ ಬಯಕೆ ಅವನಲ್ಲಿ ಮೊಳೆತಿರುವುದನ್ನು ಗುರುತಿಸಿ, ಎಚ್ಚರಿಸುತ್ತಾಳೆ. ಆಗಲೇ ಆಕೆ ಹೇಳಿದ ವಚನದ ಸಾಲಿದು. ಆಸೆಯೆಂಬುದು ಅರಸನಿಗೆ ಮಾತ್ರ, ಈಸಕ್ಕಿಯಾಸೆ ನಿಮಗೇಕೆ? ರೋಷವೆಂಬುದು ಯಮಧೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ! ಎಂಬುದು. ಅಂದರೆ ಎಂಟು ನೂರು ವರ್ಷಗಳ ಹಿಂದೆ ಯಾವ ಡಿಗ್ರಿ ಸರ್ಟಿಫಿಕೇಟ್‌ಗಳಿಲ್ಲದ ಸಾಮಾನ್ಯ ಜನ ಕೂಡ, ಅದರಲ್ಲೂ ಮಹಿಳೆಯರು ಇಂಥಾ ಬಿಚ್ಚು ನುಡಿಗಳನ್ನು ದಾಖಲಿಸಿ ಹೋದ ಈ ನೆಲದ ಒಡಲಿನಲ್ಲಿ, ಹಿರಿಯರ ಅನುಭವ ಶ್ರೀಮಂತಿಕೆಗಳು ನಮ್ಮನ್ನು ತಾಕಲಿಲ್ಲವಲ್ಲ ಎಂಬುದೇ ಇವತ್ತಿನ ವಿಷಾದ!.

ಜೀವನವೆಂಬ ರೈಲು, ತನ್ನ ನಿಲ್ದಾಣದ ಹತ್ತಿರ ಬರುತ್ತಿದ್ದಂತೆ ವೇಗ ಕಡಿಮೆ ಮಾಡಿಕೊಂಡಂತೆ, ನಮಗೂ ಕೂಡ ಜೀವನದಲ್ಲಿ ಸಂಧ್ಯಾಕಾಲಕ್ಕೆ ಬಂದಾಗ ಮಾತ್ರ ಬುದ್ಧ ನೆನಪಾಗುತ್ತನಲ್ಲ! ಬಸವ ಯುಗದ ಮಾತುಗಳು ನೆನಪಾಗುತ್ತದಲ್ಲ! ಇಂದಿಗೂ ವೇದ ಗೊತ್ತಿಲ್ಲದ, ಉಪನಿಷತ್ತು, ಪ್ರಾಕೃತ, ಸಂಸ್ಕೃತ ಗೊತ್ತಿರದ, ಪಂಡಿತರಲ್ಲದ ಪಾಮರರು ನಮ್ಮ ನಡುವೆಯೇ ಇದ್ದು ಸಮೃದ್ಧ ಜೀವನಾನುಭವಗಳ ತಿಳುವಳಿಕೆಯಿಂದ ಬದುಕಿ, ಬಾಳಿ ಆಳಿ ಹೋಗಿದ್ದಾರೆ. ಆಸೆಗೆ ಸತ್ತುದು ಕೋಟಿ, ಆಮಿಷಕೆ ಸತ್ತುದು ಕೋಟಿ, ಹೆಣ್ಣು ಹೊನ್ನು ಮಣ್ಣಿಂಗೆ ಸತ್ತುದು ಕೋಟಿ, ನಿಮಗಾಗಿ ಸತ್ತವರನಾರನೂ ಕಾಣೆ ಗುಹೇಶ್ವರ! ಎನ್ನುವ ಅಲ್ಲಮನಂಥ ವಚನಕಾರರ ಮಾತುಗಳೇ ಸಾಮಾನ್ಯರ ನಾಡಿಮಿಡಿತ.

ಪ್ರಚ್ಛನ್ನ ಉತ್ಸಾಹದಿಂದ ಏಳಿಗೆಯ ಬೆನ್ನು ಹತ್ತುವ ನಾವು, ಗುರಿ ಮುಟ್ಟುವ ತನಕ ಹೇಗೆಲ್ಲಾ ಹರಸಾಹಸ ಮಾಡುತ್ತೇವೆ! ಅವಕಾಶಗಳು, ಅನುಕೂಲಗಳು, ಸಂಪತ್ತುಗಳನ್ನು ಎಷ್ಟು ಕೂಡಿಟ್ಟರೂ ನಮಗೆ ಸಮಾಧಾನವಾಗುವುದಿಲ್ಲ. ಐದುನೂರನ್ನು ಐವತ್ತು ಸಾವಿರ ಮಾಡುವುದು ಹೇಗೆ? ಐವತ್ತು ಸಾವಿರವನ್ನು ಐದು ಲಕ್ಷ ಮಾಡುವುದು ಹೇಗೆ? ಐದು ಲಕ್ಷ ಐವತ್ತು ಕೋಟಿಯಾಗುವುದು ಹೇಗೆ? ಐವತ್ತು ಐನೂರಾಗುವುದು ಹೇಗೆ?, ಐನೂರು ಐದುಸಾವಿರ ಕೋಟಿಯಾಗುವುದು ಹೇಗೆ? ಎಂಬ ಅಂಕಿ ಸಂಖ್ಯೆಗಳ ಲೆಕ್ಕಾಚಾರದ ಯುಗದಲ್ಲಿ ಬದುಕುತ್ತಿರುವ ನಮಗೆ ಆಸೆಯಿರಬೇಕು, ಕೇವಲ ಬದುಕಿಗಾಗಿ. ಅದು ಅತಿಯಾದರೆ ಬರಿಯ ದುಃಖಕ್ಕಾಗಿ. ಈ ಸರಳ ಸತ್ಯದ ಸತ್ಯಾನ್ವೇಷಣೆಗೆ ನಮ್ಮ ನಡುವೆಯೇ ಬಾಳಿ ಬದುಕಿದ ಹಿರಿಯರನೇಕರ ಬದುಕುಗಳನ್ನು ತೆರೆದ ಕಣ್ಣುಗಳಿಂದ ನೋಡಿದರೆ ಸಾಕು, ನಮಗೆ ವಾಸ್ತವದ ಕಟುಸತ್ಯ ವೇದ್ಯವಾಗುತ್ತದೆ. ಪುಸ್ತಕಗಳು ನಮ್ಮ ಜ್ಞಾನವನ್ನು, ಅರಿವನ್ನು, ತಿಳುವಳಿಕೆಯನ್ನು ಹೇಗೆ ವಿಸ್ತರಿಸುತ್ತವೆಯೋ ಹಾಗೆಯೇ ಈ ಹಿರಿಯ ಜೀವಗಳ ಸ್ನೇಹ ಮತ್ತು ಸಖ್ಯಗಳು ನಮ್ಮ ಅನುಭವ ಶ್ರೀಮಂತಿಕೆಯನ್ನು ಹೆಚ್ಚಿಸುತ್ತವೆ.

ಛತ್ರದ ರುದ್ರಪ್ಪ ಈಗ ನನಗೆ ನೆನಪಾಗಲು ಕಾರಣ **'ಮೈಸೂರು ಮಿತ್ರ'** ಪತ್ರಿಕೆಯ ಖಾಯಂ ಓದುಗ ಮೆಲ್ಲಹಳ್ಳಿಯ ಟೀ ಅಂಗಡಿ ಕೃಷ್ಣಪ್ಪ. ಆ ಕಾಲಕ್ಕೆ ಆತನ ವಯಸ್ಸು ಎಪ್ಪತ್ತು ವರ್ಷ. ಆತ ಓದಿದ್ದು ಎಂಟನೇ ಕ್ಲಾಸು. ಆದರೆ ಆಸಕ್ತಿಗಾಗಿ ಓದಿಕೊಂಡಿದ್ದು ಎಪ್ಪತ್ತನೇ ಕ್ಲಾಸು. ಅಂದರೆ ತನ್ನ ಜೀವಿತಾವಧಿಯ ಕಡೆಯ ಕ್ಷಣದವರೆಗೂ ಆತ ಅಂಕಣ ಪ್ರೇಮಿಯಾಗಿದ್ದ. ಪ್ರತೀ ಬಾರಿ ನನ್ನ ಅಂಕಣ ಓದಿ ಫೋನಾಯಿಸಿ ಮಾತಾಡುತ್ತಿದ್ದ. ಆ ಅಂಕಣಗಳು ಆತನನ್ನು ಎಷ್ಟು ಇಂಪ್ರೆಸ್ ಮಾಡಿದ್ದವು ಎಂದರೆ, ಒಮ್ಮೆ ನಮ್ಮೂರಿಗೆ ಬನ್ನಿ ಎಂದು ಹತ್ತಾರು ಬಾರಿ ಕರೆದದ್ದಿದೆ ಆತನ ಕೈಯಲ್ಲಿ ಡಿಗ್ರಿ–ಸರ್ಟಿಫಿಕೇಟ್‌ಗಳಿರಲಿಲ್ಲ. ಆದರೆ ಫೋನಿನಲ್ಲಿ ಆತ ಇಂಗ್ಲಿಷ್ ಸಾಹಿತ್ಯದ ದಿಗ್ಗಜ ಕವಿಗಳ ಬಗ್ಗೆ ನನ್ನನ್ನು ಪ್ರಶ್ನಿಸುತ್ತಿದ್ದರೆ ಉತ್ತರ ಹೇಳಲು ಸಾಧ್ಯವಾಗದೆ ನಾನು ತಡಬಡಾಯಿಸುತ್ತಿದ್ದೆ. ಷೇಕ್ಸ್‌ಪಿಯರ್‌ನ ಕಿಂಗ್‌ಲಿಯರ್, ಓಥೆಲೋ, ಸೀಸರ್ ನಾಟಕದ ಡೈಲಾಗುಗಳನ್ನು ಕಾರ್ಪೋರೇಟ್ ಶೈಲಿಯ ಇಂಗ್ಲಿಷಿನಲ್ಲಿ ಉಚ್ಚರಿಸುತ್ತಿದ್ದ. ಆತನ ಇಂಗ್ಲಿಷ್ ಶಬ್ದ ಭಂಡಾರವನ್ನು ಮೆಚ್ಚಿಯೇ ನಾನಾತನನ್ನು ಗೌರವಿಸುತ್ತಿದ್ದೆ.

ದುರಾದೃಷ್ಟವೆಂದರೆ, ಈಗ್ಗೆ ಕೆಲವು ವರ್ಷಗಳ ಹಿಂದೆ ಒಂದಷ್ಟು ಹಳ್ಳಿಯ ಯುವಕರು ಫೋನ್ ಮಾಡಿ ಕೃಷ್ಣಪ್ಪ ಇನ್ನಿಲ್ಲ ಅಂತ ತಿಳಿಸಿದರು. ಕೃಷ್ಣಪ್ಪನ ಮಕ್ಕಳು ಫೋನ್ ಮಾಡಿ ಅಪ್ಪ ನಿಮ್ಮ ನಂಬರನ್ನು, ನಿಮ್ಮ ಹೆಸರನ್ನು ಪುಸ್ತಕದಲ್ಲಿ ಬರೆದು, ಅವರ ಸಾವಿನ ಸುದ್ದಿಯನ್ನು ನಿಮಗೆ ತಿಳಿಸಲು ಬರೆದಿದ್ದಾರೆ ಸಾರ್ ಎಂದರು. ಕೂಡಲೇ ಮೆಲ್ಲಹಳ್ಳಿಗೆ ಹೊರಟೆ. ನನಗೆ ಪರಿಚಯವೇ ಇಲ್ಲದ ಆ ಊರಿನ ಅನೇಕ ಯುವಕರು ಓಡಿ ಬಂದರು ಮಾತನಾಡಿಸಿ ದರು. ಪ್ರತೀ ಮಂಗಳವಾರ ನಿಮ್ಮ ಲೇಖನವನ್ನು ನಮಗೆಲ್ಲಾ ತೋರಿಸಿ ಕೃಷ್ಣಪ್ಪ ಚರ್ಚಿಸುತ್ತಿದ್ದರು ಸಾರ್ ಎಂದರು. ಕೃಷ್ಣಪ್ಪ ಮಾತ್ರ ನಿರುಮ್ಮಳವಾಗಿ ಉರಿವ ಬೆಂಕಿಯ ಮೇಲೆ ಮಲಗಿದ್ದ. ಬದುಕಿದ್ದಾಗ ತಾನು ಆಸೆಪಟ್ಟು ಕಟ್ಟಿ ಬಿಟ್ಟು ಹೋಗುತ್ತಿರುವ ತನ್ನ ಊರಿನ ಯುವ ಪಡೆಗೆ ಓದುವ, ಚರ್ಚಿಸುವ, ಸರಳವಾಗಿ ಬದುಕುವ ಜೀವನದ ಸಿಂಪಲ್ ಮ್ಯಾಥಮ್ಯಾಟಿಕ್ಸ್ ಅನ್ನು ಹೇಳಿಹೋಗಿದ್ದ. ಗುಬ್ಬಿಗೂಡು ಬಂದಿದ್ದಾರೆ ನೋಡಪ್ಪಾ ಎಂದು ಮಗಳು ರೋಧಿಸುತ್ತಿದ್ದರೆ, ನನ್ನ ಜೊತೆಯಲ್ಲೇ ಬಂದಿದ್ದ ಸಾಹಿತಿ ಡಾ.ವೈ.ಡಿ.ರಾಜಣ್ಣ ಮೂಕ ಸಾಕ್ಷಿಯಾಗಿ ನಿಂತರು. ಇದನ್ನೇ ಮಾನವ ಸಂಬಂಧ ಅನ್ನೋದು ಅಲ್ವಾ?

ಒಂದು ಬರಹ, ನಾಲ್ಕು ಸಾಲು, ಎಂಥ ಅನುಬಂಧವನ್ನು ಸೃಷ್ಟಿಸುತ್ತೆ ನೋಡಿ? ರಕ್ತ ಸಂಬಂಧಕ್ಕಿಂತ ಮನುಷ್ಯ ಸಂಬಂಧ ದೊಡ್ಡದು ಅನ್ನೋದನ್ನ ಇವು ಸಾಬೀತುಪಡಿಸುತ್ತವೆ! ಬದುಕ್ಕಿದ್ದಾಗ ಇದ್ದುದನ್ನೆಲ್ಲಾ ದಾನ ಮಾಡಿ ದರಿದ್ರರಾಗಿ ಅಂತ ಯಾರು ಹೇಳುವುದಿಲ್ಲ. ಆಸೆಯನ್ನು ಹಿಂಗಿಸಿಕೊಂಡು ಕಂಗಾಲಾಗಿ ಬದುಕಿ ಎಂದು ಕೇಳಿದ್ದಾದರೂ ಯಾರು? ಎಲ್ಲವೂ ಇರಲಿ, ಆದರೆ ಎಲ್ಲವೂ ಹಿತಮಿತವಾಗಿ, ಹದವರಿತು ಸರಿಸಮನಾದ ಪ್ರಮಾಣದಲ್ಲಿ ಮಿಳಿತಗೊಂಡಾಗ ಮಾತ್ರ ಅದು ಎಂದಿಗೂ ಭಾರವಾಗುವುದಿಲ್ಲ. ಬದಲಿಗೆ ಕೊರಳಿನ ಹಾರವಾಗುತ್ತದೆ. ತಿಂದರೆ ಜೀರ್ಣವಾಗುವ ಆಹಾರವಾಗುತ್ತದೆ, ಬದುಕಿಗೆ ಆಧಾರವಾಗುತ್ತದೆ. ಅತಿಯಾಸೆಯಿಂದ ಕೂಡಿಡುವುದು ಪರರ ಪಾಲಾಗುತ್ತದೆ. ಗುಟ್ಟೊಂದ ಹೇಳುವೆ ಪುಟಾಣಿ ಮಕ್ಕಳೆ; ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ, ಎಂದು ಪರೋಪಕಾರಿ ಸಿನೆಮಾದಲ್ಲಿ ವರನಟ ಡಾ. ರಾಜ್‌ಕುಮಾರ್ ಹಾಡು ಹೇಳಿದ ಹಾಗೆ ನಮ್ಮ ಬದುಕಿನ ನಿತ್ಯ ಪ್ರಯಾಣಕ್ಕೆ ನಮ್ಮ ನಮ್ಮ ಸಂಪರ್ಕದಲ್ಲೇ ಇರುವ ಇಂಥ ಹಿರಿಯ ಜೀವಗಳ ಬದುಕು ನಿತ್ಯ ಸಾಕ್ಷಿ. ಅವರಲ್ಲಿ ಕೆಲವರು ಬರೆಯಲಾರರು, ದೀಕ್ಷೆ ಕೊಡಲಾರರು. ಆದರೆ ತಾವೇ ಜೀವಂತ ಬದುಕಿ ಬಸವಳಿದು ಬೆಂಬಲಕ್ಕೆ ನಿಂತಂತೆ, ಬನಿಯಿರುವ ನಾಲ್ಕು ಮಾತುಗಳ ಮೂಲಕ ನಮ್ಮನ್ನು ಕೆಣಕಿ ಹೋಗಿರುತ್ತವೆ. ಸತ್ಯ ಗೊತ್ತಾದ ಮೇಲೆ ಬೋಧಿ ಸತ್ವದ ಕೆಳಗೆ ಬುದ್ಧ ನಕ್ಕ ಹಾಗೆ, ಮಾನವ ಸಂಕುಲದ ನಡುವೆ ಇಂಥ ಹಿರಿಯ ಜೀವಿಗಳ ಅನುಭವ ದ್ರವ್ಯ ಇಂದಿಗೂ ಕೂಡ ಬೊಚ್ಚು ಬಾಯಿಂಯಲ್ಲಿ ನಗುತ್ತವೆ. ಡಿ.ವಿ.ಜಿಯಂಥ ಹಿರಿಯರು ಇಂಥದ್ದನ್ನೆಲ್ಲಾ ಬರೆದು ಬಾಳುತ್ತಾರೆ. ಬರೆಯಲಾಗದವರು ಬದುಕಿ ತೆರಳುತ್ತಾರೆ. ಅಂಥಾ ಎರಡು ಹಿರಿಯ ಜೀವಗಳು ನಮಗಾಗಿ ಬಿಟ್ಟು ಹೋಗುವ ಬ್ಯಾಂಕ್ ಬ್ಯಾಲೆನ್ಸ್ ಎಂದರೆ ಅಕ್ಕರೆ, ವಾತ್ಸಲ್ಯ, ಮಧುರಾನುಭೂತಿ, ಅತಿಯಾಸೆಪಡದ ಜೀವನಪ್ರೀತಿ, ಸಾಂದರ್ಭಿಕ ಸತ್ಯಗಳಲ್ಲಿ ಕೊನೇ ಟಿಪ್ಪಣಿಗಳು, ಏನಂತೀರಿ?.

ಕರ್ನಾಟಕಕ್ಕೆ ನೀಡುವ ನಬಾರ್ಡ್ ಸಾಲವು ಶೇ.58ರಷ್ಟು ಕಟ್: ಸಿದ್ದರಾಮಯ್ಯ ಆಕ್ಷೇಪ

ರೈತರಿಗೆ ಅನ್ಯಾಯ ಮಾಡಬೇಡಿ; ಪ್ರಧಾನಿ, ಹಣಕಾಸು ಸಚಿವರಿಗೆ ಪತ್ರ



ಬೆಂಗಳೂರು, ನ.18(ಕೆಎಂಶಿ)–ನಬಾರ್ಡ್‌ನಿಂದ ಕರ್ನಾಟಕಕ್ಕೆ ನೀಡುವ ಸಾಲ ಪ್ರಮಾಣದಲ್ಲಿ ಶೇಕಡ 58ರಷ್ಟು ಕಡಿಮೆ ಮಾಡುವ ಮೂಲಕ ಕೇಂದ್ರ ಸರ್ಕಾರ ರಾಜ್ಯಕ್ಕೆ ಮತ್ತೆ ದ್ರೋಹ ಎಸಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಗುರುತರ ಆರೋಪ ಮಾಡಿದ್ದಾರೆ.

ಕಳೆದ ವರ್ಷ ರಾಜ್ಯಕ್ಕೆ 5,600 ಕೋಟಿ ರೂ. ಸಾಲ ನೀಡಲಾಗಿತ್ತು, ಈ ವರ್ಷ ಆ ಮೊತ್ತವನ್ನು 2,340 ಕೋಟಿ ರೂ.ಗಳಿಗೆ ಇಳಿಕೆ ಮಾಡಲಾಗಿದೆ, ಇದು ಅನ್ಯಾಯವಲ್ಲವೇ? ರೈತರಿಗೆ ಅನ್ಯಾಯ ಮಾಡಬೇಡಿ, ಇದು ದ್ರೋಹದ ಕೆಲಸ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದೇನೆ. ನಬಾರ್ಡ್ ಕೇಂದ್ರ ಹಣಕಾಸು ಸಚಿವರ ವ್ಯಾಪ್ತಿಗೆ ಬರುತ್ತದೆ, ಅವರು ಏನು ಮಾಡುತ್ತಿದ್ದಾರೆ. ಎಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ ಜೋಷಿ ಅವರುಗಳು ಕೇಂದ್ರದಲ್ಲಿ ಕರ್ನಾಟಕದಿಂದ ಮಂತ್ರಿಗಳಾಗಿ ಏನು ಮಾಡುತ್ತಿದ್ದಾರೆ. ರಾಜ್ಯದಿಂದ ಕೇಂದ್ರಕ್ಕೆ 4.50 ಲಕ್ಷ ಕೋಟಿ ರೂ. ತೆರಿಗೆ ಕಟ್ಟುತ್ತೇವೆ. ನಮಗೆ ವಾಪಸ್ಸು ಬರುವುದು 59 ಸಾವಿರ ಕೋಟಿ ರೂ. ಮಾತ್ರ ಉಳಿದ ದುಡ್ಡು ಕೇಂದ್ರದಲ್ಲಿಯೇ ಇರುತ್ತದೆ, ಅದನ್ನು ರಾಜ್ಯಕ್ಕೆ ಕೊಡಿಸಲಿ, ಬರೀ ಮಾತನಾಡಿದರೆ ಪ್ರಯೋಜನವೇನು. ಕರ್ನಾಟಕಕ್ಕೆ ಅನ್ಯಾಯವಾದಾಗ ಹೆಚ್.ಡಿ.ದೇವೇಗೌಡರಾಗಲೀ, ಕುಮಾರ ಸ್ವಾಮಿಯವರಾಗಲೀ ಮಾತನಾಡಿದ್ದಾರೆಯೇ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023–24ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಅನುದಾನ ನೀಡುವುದಾಗಿ ಹೇಳಿದ್ದರು, 15ನೇ ಹಣಕಾಸು ಯೋಜನೆಯಡಿ 11,595 ಕೋಟಿ ರೂ. ಘೋಷಣೆ ಮಾಡಿದ್ದರು, ಎಲ್ಲಿ ಕೊಟ್ಟರು, 56,000 ಕೋಟಿ ರೂ. ಗ್ಯಾರಂಟಿ ಯೋಜನೆಗಳಿಗೆ ಕೊಡುತ್ತಿದ್ದೇವೆ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಏಕೆ ಕೊಡುತ್ತಿಲ್ಲ ಎಂದರು. ನಾನು ಅಧಿಕಾರಕ್ಕೆ ಬಂದ ನಂತರ 5 ಲಕ್ಷ ರೂ.ವರೆಗೆ ಬಡ್ಡಿರಹಿತ ಸಾಲ, 15 ಲಕ್ಷ ರೂ.ವರೆಗೆ ಶೇಕಡಾ 3ರ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ. ಅನ್ನಭಾಗ್ಯ ಯೋಜನೆ ಜಾರಿ ಮಾಡಿದ್ದು ನಾವೇ ಹೊರತು, ಬಿಜೆಪಿ, ಜೆಡಿಎಸ್ ಅಲ್ಲ. ಕಾರ್ಯಕ್ರಮ ಜಾರಿ ಮಾಡಿದ್ದು ಈ ಸಿದ್ದರಾಮಯ್ಯ.

2017ರಲ್ಲಿ ಒಂದು ರೂಪಾಯಿಗೆ ನೀಡುತ್ತಿದ್ದ ಅಕ್ಕಿಯನ್ನು ಉಚಿತವಾಗಿ ನೀಡಲಾಯಿತು. ಇದನ್ನು ಬಿಜೆಪಿ ಮಾಡಿಲ್ಲ, ಸುಮ್ಮನೆ ಮಾತನಾಡುತ್ತಾರೆ. ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲಿ ಇಂಥ ಯೋಜನೆ ಜಾರಿ ಮಾಡಿದ್ದಾರೆ. ಗುಜರಾತ್, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಹರಿಯಾಣ ಎಲ್ಲಿ ಮಾಡಿದ್ದಾರೆ ಹೇಳಲಿ. ಗ್ಯಾರಂಟಿಗಳ ಬಗ್ಗೆ ಮಾತನಾಡಲು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಯಾವ ನೈತಿಕ ಹಕ್ಕಿದೆ. ಸರ್ಕಾರ ಕೇವಲ ಗ್ಯಾರಂಟಿ ಎನ್ನುತ್ತಿದೆ. ತೆರಿಗೆ ಹಣ ಎಲ್ಲಿ ಹೋಗುತ್ತಿದೆ ಎಂಬ ಕುರಿತು ಜನರಿಗೆ ಉತ್ತರ ನೀಡಬೇಕು ಎಂದಿರುವ ಅವರು, ಅಧಿಕಾರದಲ್ಲಿದ್ದಾಗ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದರಾ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿನ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ರದ್ದು ಮಾಡಲಾಗುವುದು, ಅರ್ಹ ಬಡವರಿಗೆ ಕಾರ್ಡ್ ತಪ್ಪಿಸುವುದಿಲ್ಲ ಸಿದ್ದರಾಮಯ್ಯ ಪುನರುಚ್ಚರಿಸಿದರು.

ಮಹಾರಾಷ್ಟ್ರ ಜನರ ದಾರಿತಪ್ಪಿಸಿ ಮತ ಗಳಿಸಲು ಗ್ಯಾರಂಟಿ ಯೋಜನೆಗಳ ಬಗ್ಗೆ ಸುಳ್ಳು ಜಾಹೀರಾತು ನೀಡಿದ ಆ ರಾಜ್ಯ ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ರೆಸಾರ್ಟ್ ಸ್ವಿಮ್ಮಿಂಗ್ ಪೂಲ್‌ನಲ್ಲಿ ಜಲಸಮಾಧಿಯಾದ ಮೈಸೂರಿನ ವಿದ್ಯಾರ್ಥಿನಿಯರ ಅಂತ್ಯಕ್ರಿಯೆ



ನಿಶ್ಚಿತಾ



ಪಾರ್ವತಿ



ಕೀರ್ತನಾ

ಮೈಸೂರು,ನ.18(ಎಂಟಿವೈ)– ಮಂಗಳೂರಿನ ಉಲ್ಲಾಳ ಸಮೀಪದ ಸಮುದ್ರ ತೀರದ ವಾಸ್ಕೋಸ್ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗಿ ಸಾವಿಗೀಡಾದ ಮೈಸೂರಿನ ಮೂವರು ವಿದ್ಯಾರ್ಥಿನಿಯರ ಅಂತ್ಯಕ್ರಿಯೆ ಸೋಮವಾರ ನೆರವೇರಿತು

ಮಂಗಳೂರಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೂವರ ಮೃತದೇಹಗಳನ್ನು ವಾರಸುದಾರರಿಗೆ ಉಲ್ಲಾಳ ಪೊಲೀಸರು ಒಪ್ಪಿಸಿದ್ದರು. ಬೆಳಗ್ಗೆಯೇ ಮೃತದೇಹಗಳನ್ನು ಹೊತ್ತ ಆಂಬುಲೆನ್ಸ್‌ಗಳು ಮೈಸೂರಿನತ್ತ ಪ್ರಯಾಣ ಬೆಳೆಸಿದವು. ಬೆಳಗ್ಗೆ 11ಕ್ಕೆ ಮೈಸೂರಿಗೆ ಮೃತದೇಹಗಳನ್ನು ತರಲಾಯಿತು. ಮೂವರು ಯುವತಿಯರ ಮನೆಗೆ ಪ್ರತ್ಯೇಕವಾಗಿ ಮೃತದೇಹ ತಂದು ಕೆಲಕಾಲ ಸಂಬಂಧಿಕರು ಹಾಗೂ ಸ್ನೇಹಿತರ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಬಳಿಕ ಸಂಪ್ರದಾಯದಂತೆ ಮಧ್ಯಾಹ್ನ ಮೂವರ ಮೃತದೇಹವನ್ನು ಪ್ರತ್ಯೇಕ ರುದ್ರಭೂಮಿಗಳಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಕುರುಬಾರಹಳ್ಳಿಯ ನಿವಾಸಿ ಮಲ್ಲೇಶ್ ಎಂಬುವರ ಪುತ್ರಿ ಎಂ.ಡಿ.ನಿಶ್ಚಿತಾ(21) ಅವರ ಅಂತ್ಯಕ್ರಿಯೆ ಕುರುಬಾರಹಳ್ಳಿಯ ರುದ್ರಭೂಮಿಯಲ್ಲಿ, ಅಗ್ರಹಾರದ ರಾಮಾನುಜ ರಸ್ತೆಯ ನಿವಾಸಿ ಎಂ.ಎನ್. ಶ್ರೀನಿವಾಸ್ ಪುತ್ರಿ ಎಸ್.ಪಾರ್ವತಿ(20) ಅವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ, ಹೆಬ್ಬಾಳು ಎರಡನೇ ಹಂತದ ನಿವಾಸಿ ನವೀನ್ ಕುಮಾರ್ ಪುತ್ರಿ ಎನ್.ಕೀರ್ತನಾ(21) ಅಂತ್ಯಕ್ರಿಯೆ ಹೆಬ್ಬಾಳು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಈ ವೇಳೆ ಕಾಲೇಜಿನ ಸಹಪಾಠಿಗಳು, ಸ್ನೇಹಿತರು, ಸಂಬಂಧಿಕರು ಕಂಬನಿ ಮಿಡಿದು ಮೃತರ ಪೋಷಕರಿಗೆ ಸಾಂತ್ವನ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಮಂಗಳವಾರ 19 ನವೆಂಬರ್ 2024

ಮೈಸೂರಲ್ಲಿ ಹಲವೆಡೆ ಕನಕದಾಸರ ಜಯಂತಿ



ಮೈಸೂರಿನಲ್ಲಿ ನಡೆದ ಕನಕ ಜಯಂತಿ ಮೆರವಣಿಗೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ, ಜಿಲ್ಲಾ ಆರೋಗ್ಯ ಅಧಿಕಾರಿ ಕುಮಾರಸ್ವಾಮಿ, ಜಿಲ್ಲಾ ಪಶು ಸಂಗೋಪನ ಇಲಾಖೆ ಜಂಟಿ ನಿರ್ದೇಶಕ ನಾಗರಾಜು, ಪಾಲಿಕೆ ಉಪ ಆಯುಕ್ತ ಎಸ್.ಜಿ.ಸೋಮಶೇಖರ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಲೋಕೇಶ್‌ಕುಮಾರ್ ಮಾದಾಪುರ, ಕುರುಬಾರಹಳ್ಳಿ ಪ್ರಕಾಶ್ ಅಪ್ಪು ಗೌಡ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಶ್ರೀ ರಾಮ ಗೆಳೆಯರ ಬಳಗದ ವತಿಯಿಂದ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಆಚರಿಸಲಾಯಿತು. ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಿ.ಸಂದೀಪ್, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಉಪಾಧ್ಯಕ್ಷ ಜೋಗಿ ಮಂಜು, ಮೈಸೂರು ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್, ಕೆ.ಆರ್.ಬ್ಯಾಂಕ್‌ನ ಅಧ್ಯಕ್ಷರಾದ ಬಸವರಾಜ್ ಬಸಪ್ಪ, ಪಾಲಿಕೆ ಮಾಜಿ ಸದಸ್ಯ ಜಗದೀಶ್, ರಮೇಶ್, ಪಿ.ಟಿ.ಕೃಷ್ಣ, ಶಿವಾರ್ಚಕರ ಸಂಘದ ರಾಜ್ಯಾಧ್ಯಕ್ಷ ಅಂಬಳೆ ಶಿವಣ್ಣ, ಮುಖಂಡರಾದ ಯೋಗಾನಂದ, ಪ್ರಭು, ಬಸವರಾಜು, ಮಹೇಶ್, ಶೇಖರ್, ಧರ್ಮೇಂದ್ರ, ಲಕ್ಷ್ಮಣ್, ಸುರೇಶ್, ದೀಪಕ್, ತೀರ್ಥ, ರಾಕೇಶ್, ವಿನಯ್, ಶಶಿ, ಸಂಜು, ಕಿರಣ್, ಗಿರೀಶ್, ತಿಪ್ಪೇಶ್, ವರುಣ್, ಧನುಷ್, ಸುರೇಂದರ್, ಸಂತೋಷ್, ರವಿತೇಜ, ಶಿವರಾಜು, ಲಿಖಿತ್ ಇದ್ದರು.



ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೃಷ್ಣರಾಜ ಯುವ ಬಳಗ ವತಿಯಿಂದ ಕನಕದಾಸರ ಜಯಂತಿ ಅಂಗವಾಗಿ ಚಾಮರಾಜ ಜೋಡಿ ರಸ್ತೆಯಲ್ಲಿ ಸಾರ್ವಜನಿಕರಿಗೆ ಹೋಳಿಗೆ ವಿತರಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ಬಣ್ಣ, ಶಿವಣ್ಣ, ಬಿಜೆಪಿ ಮುಖಂಡರಾದ ಶಿವಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಆರ್.ಕೆ.ರವಿ, ಮಂಜುನಾಥ್, ಮಂಜಪ್ಪ, ಪುರುಷೋತ್ತಮ್, ಮಹಾನ್ ಶ್ರೇಯಸ್ ಹಾಗೂ ಇನ್ನಿತರರು ಹಾಜರಿದ್ದರು.



ಪಡುವಾರಹಳ್ಳಿಯಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು. ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಗಿರೀಶ, ಕಿರಣ್ ಇದ್ದರು.



ಮೈಸೂರಿನ ದೀಪಾ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ ಆಚರಿಸಲಾಯಿತು. ಮೈಸೂರಿನ ಕಾವೇರಿ ಜಲಾನಯನ ಯೋಜನೆ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ಪ್ರೊ.ಕಾಳೇಗೌಡ ನಾಗವಾರ, ಸಂಸ್ಥೆ ಅಧ್ಯಕ್ಷ ರಾಮಪ್ಪ, ಉಪಾಧ್ಯಕ್ಷ ಸದಾಶಿವ ಪೂಜಾರಿ, ನಿರ್ದೇಶಕ ಬಾಲಕೃಷ್ಣ, ಪ್ರಾಂಶುಪಾಲರಾದ ಪ್ರಣೆತಾ ಎರ್ಮಾಳ್, ಶಿಲ್ಪ ಜಗದೀಶ್, ಎ.ಕೆ.ಬಾಬು, ತುಳಸಿ, ರವಿಶಂಕರ್, ವಾರುಣಿ, ಕುಸುಮ, ರವಿಜಾ ಇನ್ನಿತರರಿದ್ದರು.



ಮೈಸೂರಿನ ರಾಜೀವ್‌ಗಾಂಧಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಚಿತ್ರದಲ್ಲಿ ಮುಖ್ಯ ಶಿಕ್ಷಕ ಪ್ರಸನ್ನಕುಮಾರ್, ಸಹ ಶಿಕ್ಷಕಿಯರು, ಸಿಬ್ಬಂದಿ ವರ್ಗ ಹಾಗೂ ಅಡುಗೆ ಸಿಬ್ಬಂದಿ ಉಪಸ್ಥಿತರಿದ್ದರು.



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ವೇದಿಕೆಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಭವಾನಿಶಂಕರ್, ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ, ಪ್ರಾಚಾರ್ಯ ಎ.ಕುಮಾರ್, ಕಾಲೇಜು ವಿಭಾಗದ ಪ್ರಾಚಾರ್ಯ ಮಹದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಈ ವೇಳೆ ಶಿಕ್ಷಕ ಎನ್.ಸತೀಶ್, ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕಿ ದೀಪಾ ಪ್ರಶಾಂತ್, ದೈಹಿಕ ಶಿಕ್ಷಣ ಶಿಕ್ಷಕ ಪ್ರಭುಸ್ವಾಮಿ, ಸಹ ಶಿಕ್ಷಕ ಚೇತನ್, ನರ್ಸರಿ ಶಾಲಾ ಶಿಕ್ಷಕರಾದ ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.

ಕನಕದಾಸರ ಕೀರ್ತನೆಗಳು ಸರ್ವಕಾಲಕ್ಕೂ ಪ್ರಸ್ತುತ

ಮೈಸೂರಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ನಡೆದ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಕನಕದಾಸರ ಪ್ರತಿಮೆಗೆ ಕಾಗಿನೆಲೆ ಕನಕ ಗುರು ಪೀಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು

ಮೈಸೂರು,ನ.18(ಎಂಟಿವೈ)- ದಾಸ ಶ್ರೇಷ್ಠ ಸಂತಕವಿ ಭಕ್ತ ಕನಕದಾಸರು ಕೀರ್ತನೆಗಳ ಮೂಲಕ ಸಮಾಜದಲ್ಲಿನ ಕಂದಾಚಾರ, ಮೌಢ್ಯವನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಅವರ ಕೀರ್ತನೆಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಶ್ರೀ ಕನಕದಾಸರ ಜಯಂತ್ಯುತ್ಸವ ಸಮಿತಿ ವತಿಯಿಂದ ಸೋಮವಾರ ಆಯೋಜಿಸಿದ್ದ ದಾಸಶ್ರೇಷ್ಠ ಸಂತ ಕವಿ ಶ್ರೀ ಕನಕದಾಸರ 537ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತಮ ಕುಟುಂಬದಲ್ಲಿ ಜನಿಸಿದ ಕನಕದಾಸರು ಸಮಾಜದಲ್ಲಿರುವ ತಾರತಮ್ಯ ಹಾಗೂ ಮೌಢ್ಯತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತಮ್ಮ ಕುಟುಂಬದ ಸಿರಿತನವನ್ನು ತ್ಯಜಿಸಿ ಬಡವರಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟರು. ಕೀರ್ತನೆಗಳ ಮೂಲಕ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಿದರು. 'ಕುಲ-ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲವನ್ನೇನಾದರೂ ಬಲ್ಲಿರಾ' ಎಂಬ ಕೀರ್ತನೆ ಮೂಲಕ ಸಮಾಜದಲ್ಲಿ ಜಾತೀಯತೆಯನ್ನು ತೊಡೆದು ಹಾಕಲು ಮುಂದಾದರು. ಜನರಲ್ಲಿದ್ದ ಭೇದ ಮನೋಭಾವ, ಶ್ರೇಷ್ಠತೆಯ ಮನೋಭಾವವನ್ನು ಹೋಗಲಾಡಿಸಿ ಎಲ್ಲರೂ ಒಂದೇ ಎಂದು ಸಂದೇಶ ಸಾರಿದರು ಎಂದು ತಿಳಿಸಿದರು.

ಕನಕದಾಸರ ಕೀರ್ತನೆಯಲ್ಲಿರುವ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರು ಹಾಕಿದ ದಾರಿಯಲ್ಲಿ ಪ್ರತಿಯೊಬ್ಬರೂ ಸಾಗಬೇಕು. ಕನಕದಾಸರ ಹಾದಿಯಲ್ಲಿಯೇ ಇಂದು ಸರ್ಕಾರವು ಯಾವುದೇ ಜಾತಿ-ಧರ್ಮವನ್ನು ನೋಡದೆ, ರಾಜ್ಯದಲ್ಲಿರುವ ಪ್ರತಿಯೊಬ್ಬರಿಗೂ ಸೌಕರ್ಯವನ್ನು ಒದಗಿಸುತ್ತಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಕ್ಷತೆ ಹಾಗೂ ಪ್ರಾಮಾಣಿಕವಾಗಿ ಆಡಳಿತ ಮಾಡುತ್ತಿದ್ದಾರೆ. ಯಾವುದೇ ಸಮಾಜದ ಜನರಿಗೆ ತೊಂದರೆಯಾಗದಂತೆ ಎಲ್ಲರ ಪರ ನಿಂತು, ಕೆಲಸ ಮಾಡುತ್ತಿದ್ದಾರೆ. ಶ್ರದ್ಧೆ ಭಕ್ತಿಯಿಂದ ಕನಕದಾಸರು ಶ್ರೀ ಕೃಷ್ಣನ ದರ್ಶನ ಪಡೆದಂತೆ, ಸಿದ್ದರಾಮಯ್ಯ ಅವರ ದಕ್ಷ ಹಾಗೂ ಪ್ರಾಮಾಣಿಕ ಆಡಳಿತದಿಂದ ರಾಜ್ಯವನ್ನು ದೇಶದಲ್ಲಿಯೇ ಉತ್ತಮ ಸ್ಥಾನಕ್ಕೆ ಕೊಂಡೊಯ್ದು ರಾಷ್ಟ್ರವೇ ಕರ್ನಾಟಕದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಂತ ಶ್ರೀ ಕನಕದಾಸ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಎಂ.ಕೆ.ಸೋಮಶೇಖರ್ ಮಾತನಾಡಿ, ಮೇಲ್ಪಂಕ್ತಿಯ ದಾಸ ಶ್ರೇಷ್ಠರಲ್ಲಿ ಕನಕದಾಸರು ಒಬ್ಬರಾಗಿದ್ದು, ಸಮಾಜದಲ್ಲಿನ ಅಂಕು-ಡೊಂಕು, ತಾರತಮ್ಯವನ್ನು ಹೋಗಲಾಡಿಸುವುದಕ್ಕಾಗಿ ಸಿರಿತನದ ವೈಭವವನ್ನು ತ್ಯಜಿಸಿ, ಜನರ ಸೇವೆಗಾಗಿ ಬಂದರು. ಸಂತ ಶ್ರೇಷ್ಠ ಎನಿಸಿದ ಕನಕದಾಸರು, ಮೇಲು ಕೀಳೆಂಬುದರಲ್ಲಿ ಯಾವುದೇ ಹುರುಳಿಲ್ಲ ಎಂದು ಸಮಾಜಕ್ಕೆ ತೋರಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಕನಕದಾಸರು ಮೌಢ್ಯಗಳ ವಿರುದ್ಧ ಹೋರಾಡಿ, ಸಮ ಸಮಾಜವನ್ನು ನಿರ್ಮಿಸಲು ಮುಂದಾದವರು. ಸಮಾಜಕ್ಕೆ ಕನಕದಾಸರಂತೆ ಮಹನೀಯರು ನೀಡಿರುವ ಕೊಡುಗೆ, ಸಂದೇಶವನ್ನು ಅನುಸರಿಸಿದರೆ ಅದೇ ನಾವು ಅವರಿಗೆ ನೀಡುವ ಗೌರವ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಕನಕದಾಸರು 316 ಕೀರ್ತನೆಗಳನ್ನು ರಚಿಸಿ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಿದ್ದಾರೆ. ತಮ್ಮಲ್ಲಿರುವ ಶ್ರದ್ಧೆ, ಭಕ್ತಿಯಿಂದ ಶ್ರೀ ಕೃಷ್ಣನ ದರ್ಶನವನ್ನು ಪಡೆದ ಮಹಾನುಭಾವರಾಗಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಇಂದು ಉಡುಪಿಯಲ್ಲಿರುವ ಕನಕನ ಕಿಂಡಿಯನ್ನು ಕಾಣಬಹುದಾಗಿದೆ. ಇದರಿಂದ ಕನಕದಾಸರ ಸಾಧನೆ, ಶಕ್ತಿಯು ತಿಳಿಯುತ್ತದೆ. ಯಾವುದೇ ವ್ಯಕ್ತಿಗೆ ಶಕ್ತಿ ಬರಬೇಕೆಂದರೆ ಸಾಧನೆ ಮುಖ್ಯವಾಗುತ್ತದೆ. ಸಾಧನೆ ಮಾಡಲು ಪರಿಶ್ರಮ ಮುಖ್ಯ. ತಮ್ಮನ್ನು ತಾವು ನಂಬಿ ಇತರರಿಗೆ ಕೇಡನ್ನು ಬಯಸದೆ ಉತ್ತಮ ದಾರಿಯಲ್ಲಿ ತನ್ನ ಸಾಧನೆಯ ದಾರಿಯಲ್ಲಿ ನಡೆದರೆ ಅದಕ್ಕೆ ಒಳ್ಳೆಯ ಪ್ರತಿಫಲ ಸಿಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಭಕ್ತ ಕನಕದಾಸರ ಜೀವನ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಸಂತರು ಮೂಲತಃ ಲೋಕೋಪಕಾರಿಗಳು. ಲೋಕದ ಜನರು ಬಾಳಿ ಬದುಕಿ ಜನರಲ್ಲಿ ಶಾಂತಿ ನೆಮ್ಮದಿ ನೆಲೆಸಲೆಂದು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದಂತವರು ಸಂತರು. ಕನಕದಾಸರು ಶ್ರೇಷ್ಠ ಸಂತರ ಸಾಲಿನಲ್ಲಿ ವಿರಾಜಮಾನವಾಗಿ ಉಳಿಯುವಂತವರಾಗಿದ್ದು, ಅವರನ್ನು ನೆನೆಯುವುದರಿಂದ ಸಮಾಜದಲ್ಲಿ ಶಾಂತಿ-ಸಮಾನತೆ ನೆಲೆಸಿ, ಜನಮಾನಸದಲ್ಲಿ ನವ ಚೈತನ್ಯದ ಜಾಗೃತಿಯಾಗಲಿದೆ ಎಂದು ಹೇಳಿದರು.

ಕನಕದಾಸರನ್ನು ಕಲಿ, ಕವಿ ಹಾಗೂ ಸಂತರಾಗಿ ನೋಡುತ್ತೇವೆ. ಅವರು ಬದುಕಿನ ತ್ರಿರಂಗದಲ್ಲಿ ಕಲಿಯಾಗಿ, ಕವಿಯಾಗಿ, ಸಂತರಾಗಿ ಲೋಕಕ್ಕೆ ಶ್ರೇಷ್ಠ ಮಾದರಿಯನ್ನು ಒದಗಿಸಿದ್ದಾರೆ. ವಿವಿಧ ಧರ್ಮಗಳನ್ನು ಹೊಂದಿರುವ ನಮ್ಮ ಹಿಂದುಸ್ಥಾನದಲ್ಲಿ ಹಲವಾರು ಭಕ್ತಿ ಪಂಥಗಳನ್ನು ಕಾಣಬಹುದಾಗಿದೆ. ಸುಮಾರು 800 ವರ್ಷಗಳ ಹಿಂದೆ ಮಹನೀಯರು ಹಾಕಿ ಕೊಟ್ಟಂತಹ ಭಕ್ತಿ ಪಂಥಗಳು ಇಂದಿಗೂ ದೇಶದ ಮೂಲೆ ಮೂಲೆಯಲ್ಲಿ ನೆಲೆಸಿವೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಕಾಗಿನೆಲೆ ಕನಕ ಗುರುಪೀಠದ ಶ್ರೀ. ಶಿವಾನಂದಪುರಿ ಸ್ವಾಮೀಜಿ ವಹಿಸಿದ್ದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಓ ಕೆ.ಎಂ. ಗಾಯತ್ರಿ ಸೇರಿದಂತೆ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ಪದಾಧಿಕಾರಿಗಳು, ಮುಖಂಡರು ಉಪಸ್ಥಿತರಿದ್ದರು.

ಸೂರ್ಯ-ಚಂದ್ರ ಇರುವವರೆಗೂ ಸಿದ್ದರಾಮಯ್ಯ ಕೊಡುಗೆ ಶಾಶ್ವತ

ಶಾಸಕ ಕೆ.ಹರೀಶ್‌ಗೌಡ

ಮೈಸೂರು,ನ.18(ಎಂಟಿವೈ)- ಸೂರ್ಯ-ಚಂದ್ರ ಇರುವವರೆಗೂ ದಾಸ ಶ್ರೇಷ್ಠ ಕನಕದಾಸ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೊಡುಗೆ ಶಾಶ್ವತವಾಗಿ ಉಳಿಯುತ್ತದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಕನಕ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಕದಾಸರು ಭಕ್ತಿ ಮತ್ತು ಶ್ರದ್ಧೆಯಿಂದ ಪರಮಾತ್ಮನನ್ನು ತಮ್ಮ ಕಡೆ ತಿರುಗುವಂತೆ ಮಾಡಿದರು. ಅದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ 45 ವರ್ಷಗಳ ರಾಜಕಾರಣದ ಜೀವನದಲ್ಲಿ ಎಲ್ಲ ಸಮಾಜದವರಿಗೆ ಸೌಕರ್ಯ ಒದಗಿಸಿದರು. ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಜೀವನದಲ್ಲಿ ಭ್ರಷ್ಟಾಚಾರಕ್ಕೆ ಕೈ ಹಾಕಿಲ್ಲ. ಮೈಸೂರಲ್ಲಿ ಸಿದ್ದರಾಮಯ್ಯ ಮತ್ತು ವಿ.ಶ್ರೀನಿವಾಸಪ್ರಸಾದ್ ಅವರು ಮನಸ್ಸು ಮಾಡಿದ್ದರೆ ಒಂದೊಂದು ಭಾಗವನ್ನು ಬರೆಸಿಕೊಳ್ಳಬಹುದಿತ್ತು ಎಂದು ಬಿಜೆಪಿಯ ಮುಖಂಡರೊಬ್ಬರು ಹೇಳಿದ್ದಾರೆ. ಆದರೆ, ಆ ಕೆಲಸವನ್ನು ಸಿದ್ದರಾಮಯ್ಯ ಅವರು ಮಾಡಲಿಲ್ಲ. ಆದರೆ, ಕೆಲವರು ಅವರ ಏಳಿಗೆ ಸಹಿಸದೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮುಡಾದ ಯಾವುದೇ ಕಡತದಲ್ಲಿ ಸಿದ್ದರಾಮಯ್ಯ ಅವರ ಒಂದು ಕಪ್ಪುಚುಕ್ಕಿ ಇಲ್ಲ. ಅವರ ವ್ಯಕ್ತಿತ್ವ ಹಾಳು ಮಾಡಲು ಯತ್ನಿಸುತ್ತಿದ್ದಾರೆ. ಅದು ಸಾಧ್ಯವಿಲ್ಲ. ದೇಶವೇ ಅವರತ್ತ ತಿರುಗಿ ನೋಡುವಂತ ದಿನಗಳು ಬರಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದುಷ್ಟಶಕ್ತಿಗಳಿಂದ ತೊಂದರೆ ಆಗುತ್ತಿದೆ. ನುಡಿದಂತೆ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 5 ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಜಾರಿಗೊಳಿಸಿದ್ದು ವಿಶ್ವದಲ್ಲಿಯೇ ಮಾದರಿಯಾಗಿದೆ. ಸಿದ್ದರಾಮಯ್ಯ ಅವರ ಕೊಡುಗೆಗಳು ಒಂದು ಜಾತಿಗೆ ಸೀಮಿತವಾಗಿಲ್ಲ. ಸಿದ್ದರಾಮಯ್ಯ ಅವರು ಮುಂದಿನ 5 ವರ್ಷ ಕೆಲಸ ಮಾಡಲು ಶಕ್ತಿ ನೀಡುವಂತೆ ಕನಕದಾಸರಲ್ಲಿ ಪ್ರಾರ್ಥಿಸುವುದಾಗಿ ಹೇಳಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮುಡಾ ಹಗರಣದಲ್ಲಿ ತಪ್ಪಿಲ್ಲದಿದ್ದರೂ ಸಿದ್ದರಾಮಯ್ಯ ಅವರ ಮೇಲೆ ಸುಳ್ಳು ಆರೋಪ ಹೊರಿಸಲಾಗುತ್ತಿದೆ. ಸಿದ್ದರಾಮಯ್ಯ ಅವರು ಬಡವರ ಕಲ್ಯಾಣಕ್ಕಾಗಿ 52 ಸಾವಿರ ಕೋಟಿ ರೂ. ಗ್ಯಾರಂಟಿ ಯೋಜನೆಗೆ ನೀಡುತ್ತಿದ್ದಾರೆ. ಬಡತನ ನಿವಾರಣೆ ಮತ್ತು ಸಮಾನತೆ ತರಲು ಕನಕದಾಸ, ಬಸವಣ್ಣ, ಅಂಬೇಡ್ಕರ್ ಬರೆದ ಸಂವಿಧಾನದ ಆಶಯದಂತೆ ಆಡಳಿತ ನಡೆಸುತ್ತಿದ್ದಾರೆ ಎಂದರು.

ಕನಕರ ಕೀರ್ತನೆ ಮನನ ಮಾಡಿಕೊಂಡರೆ ಜಾತಿ ತಾರತಮ್ಯ ತೊಡೆದು ಹಾಕಲು ಸಹಕಾರಿ

ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಡಾ.ಬಿ.ಟಿ.ಬಾಣೇಗೌಡ ಅಭಿಮತ



ಮೈಸೂರಿನ ಎಂಎಸ್‌ವಿಎಸ್ ಗುರುಕುಲ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಜಾನಪದ ಪರಿಷತ್ ಸೋಮವಾರ ಏರ್ಪಡಿಸಿದ್ದ ರಾಜ್ಯೋತ್ಸವ ಹಾಗೂ ಶ್ರೀ ಭಕ್ತ ಕನಕದಾಸರ ಜಯಂತ್ಯುತ್ಸವದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು,ನ.18-ಸಮಾಜದಲ್ಲಿನ ಜಾತಿ ತಾರತಮ್ಯ ತೊಡೆದು ಹಾಕಲು ಕನಕದಾಸರ ಕೀರ್ತನೆಗಳು ಸಹಕಾರಿ ಎಂದು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಡಾ.ಬಿ.ಟಿ.ಬಾಣೇಗೌಡ ಅಭಿಪ್ರಾಯಪಟ್ಟರು.

ಕನ್ನಡ ಜಾನಪದ ಪರಿಷತ್ [ಕಜಾಪ] ಜಿಲ್ಲಾ ಘಟಕವು ಕುವೆಂಪುನಗರದ ಎಂಎಸ್‌ವಿಎಸ್ ಗುರುಕುಲ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಜ್ಯೋತ್ಸವ ಹಾಗೂ ಶ್ರೀ ಭಕ್ತ ಕನಕದಾಸರ ಜಯಂತ್ಯುತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ದಂಡನಾಯಕರಾಗಿದ್ದ ಕನಕರು ಯುದ್ಧದಿಂದ ಹತಾಶರಾಗಿ ಸಂತರಾಗಿ ಬದಲಾದವರು. ದ್ವೇಷ- ಅಸೂಯೆ, ಮೇಲು- ಕೀಳು ಹೋಗಬೇಕು. ಕುಲಕುಲವೆಂದು ಯಾರೂ ಹೊಡೆದಾಡಬಾರದು ಎಂಬುದು ಅವರ ಆಶಯವಾಗಿತ್ತು ಎಂದರು.

ಕಾಲೇಜಿನ ಕನ್ನಡ ಉಪನ್ಯಾಸಕ ಎಸ್.ಬಸವರಾಜು ಪ್ರಾಸ್ತಾವಿಕ ಭಾಷಣ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಪತ್ರಿಕಾ ಛಾಯಾಗ್ರಾಹಕರಾದ ಅನುರಾಗ್ ಬಸವರಾಜ್, ಲಕ್ಷ್ಮೀನಾರಾಯಣ ಯಾದವ್, ಖ್ಯಾತ ಜನಪದ ಗಾಯಕ ಅಮ್ಮ ರಾಮಚಂದ್ರ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪತ್ರಿಕಾ ಛಾಯಾಗ್ರಾಹಕ ಗವಿಮಠ ರವಿ, ಕಜಾಪ ಜಂಟಿ ಕಾರ್ಯದರ್ಶಿ ಜಿ.ರವಿಶಂಕರ್, ಕಂಸಾಳೆ ಮಲ್ಲೇಶ್, ಸಜ್ಜೆಹುಂಡಿಯ ತಿರುಮಲ್ಲೇ ಗೌಡ ಅವರನ್ನು ಕಜಾಪ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಎಚ್.ಪ್ರಕಾಶ್ ಸನ್ಮಾನಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ.ಡಿ.ಕನ್ನಿಕರ್, ಉಪಪ್ರಾಂಶುಪಾಲೆ ಡಾ.ತನುಜಾ, ಕಜಾಪ ವಿಭಾಗೀಯ ಸಂಚಾಲಕಿ ಡಾ.ಕಾವೇರಿ ಪ್ರಕಾಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಇದ್ದರು.

ಕೆ.ಜಿ.ಕೊಪ್ಪಲು ಕನ್ನಡ ಗೆಳೆಯರ ಬಳಗದಿಂದ ಕನಕದಾಸ ಜಯಂತಿ



ಕೆ.ಜಿ.ಕೊಪ್ಪಲಿನ ಕನ್ನಡ ಗೆಳೆಯರ ಬಳಗದಿಂದ ಕನಕದಾಸ ಜಯಂತಿ ಆಚರಿಸಲಾಯಿತು.

ಮೈಸೂರು, ನ.18-ಕನ್ನೇಗೌಡನ ಕೊಪ್ಪಲಿನ ಕನ್ನಡ ಗೆಳೆಯರ ಬಳಗದಿಂದ ಕನಕದಾಸ ಜಯಂತಿ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಮಾಜ ಸೇವಕ, ಕ್ರೀಡಾಪಟು ಧನಗಳ್ಳಿ ಡಿ.ಶಿವಶಂಕರ್, ದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ನಂತರ ಮಾತನಾಡಿದ ದೇವರು, ಮಾನವರ ನಡುವೆ ಕಟ್ಟಿದ್ದ ಕೃತಕ ಗೋಡೆಗಳನ್ನು ಮೀರಿ, ಬೆಳೆದ ಕ್ರಾಂತಿ ಬೆಳಕು ಕನಕದಾಸರು. ಅವರು ಭಕ್ತಿಯ ಶ್ರೇಷ್ಠತೆಗೆ ಹೆಸರಾದವರು. ಅವರ ಕೃತಿ ರಾಮಧಾನ್ಯದಲ್ಲಿ ವೈಚಾರಿಕತೆ ಬೆಳಕನ್ನು ತೋರಿದ ಭಕ್ತ ಶ್ರೇಷ್ಠರು ಎಂದರಲ್ಲದೇ, ಮನುಷ್ಯ ಕುಲದ ಅನಿಷ್ಟವೆಂದು ಜಾತಿಯನ್ನು ವಿರೋಧಿಸಿದವರು. ಜಾತಿ, ಮತ, ಕಾಲ, ಧರ್ಮವನ್ನು ಮೀರಿ ನಿಲ್ಲುವ ಸಾಂಸ್ಕೃತಿಕ ಸಂದೇಶ ನೀಡಿದವರು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಗೆಳೆಯರ ಬಳಗದ ಗೌರವಾಧ್ಯಕ್ಷ ಬಿ.ಭೈರಪ್ಪ ಮಾತನಾಡಿ, ಕನಕದಾಸರ ಕೀರ್ತನೆಗಳು ಸರ್ವಕಾಲಗಳಿಗೂ ಶ್ರೇಷ್ಠತೆಯನ್ನು ಸಾರುತ್ತವೆ. ದಾಸ ಸಾಹಿತ್ಯದಲ್ಲಿ ಮೆರುಗನ್ನು ತೋರಿಸಿದ ಸಂತರು ಕನಕದಾಸರು. ಯುವ ಜನಾಂಗ ಕನಕದಾಸರ ಕೀರ್ತನೆಗಳನ್ನು, ಜೀವನದ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ಗೆಳೆಯರ ಬಳಗದ ಗೌರವ ಕಾರ್ಯದರ್ಶಿ, ಸಮಾಜ ಸೇವಕರಾದ ಲಿಂಗರಾಜು ನಗರ್ತಳ್ಳಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ಮಲ್ಲಣ್ಣ, ಜಯರಾಂ, ಬಸವಣ್ಣ, ಮೋಹನ್‌ಕುಮಾರ್, ತುಷಾರ್ ಇನ್ನಿತರರು ಉಪಸ್ಥಿತರಿದ್ದರು.

ಈ ಜಾತಿ ವ್ಯವಸ್ಥೆ ಎಂಬುದು ಅನಿಷ್ಟ ಎಂದವರು ಕನಕದಾಸರು, ಬಸವಣ್ಣ

ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆಯಿಂದ ಕನಕದಾಸರ ಜಯಂತಿ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಶಿವರಾಜಪ್ಪ ಸ್ಮರಣೆ ನುಡಿ



ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆಯು ಸಂಜೆ ಕಾಲೇಜಿನ ಎದುರು ಸೋಮವಾರ ಏರ್ಪಡಿಸಿದ್ದ ಶ್ರೀ ಕನಕದಾಸರ ಜಯಂತಿಯಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು,ನ.18-ಜಾತಿ ವ್ಯವಸ್ಥೆ ಎಂಬುದು ಅನಿಷ್ಟ, ಅದನ್ನು ಹೋಗಲಾಡಿಸಲು ಶ್ರಮಿಸಿದವರು ಶ್ರೀ ಕನಕದಾಸರು ಹಾಗೂ ಬಸವಣ್ಣನವರು ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ ಹೇಳಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ ವತಿಯಿಂದ ವಿವಿ ಸಂಜೆ ಕಾಲೇಜು ಎದುರು ಸೋಮವಾರ ಏರ್ಪಡಿಸಿದ್ದ ಶ್ರೀ ಕನಕದಾಸರ ಜಯಂತಿಯಲ್ಲಿ ಮಾತನಾಡಿದ ಅವರು, 98 ವರ್ಷಗಳ ಕಾಲ ಬದುಕಿ, ಇಡೀ ಜಗತ್ತನ್ನು ಸುತ್ತಿದ್ದ ಮಹಾನ್ ಜ್ಞಾನಿ, ತ್ರಿಕಾಲ ಜ್ಞಾನಿ ಕನಕದಾಸರು. ಕಂದಾಚಾರ ಹಾಗೂ ಮೌಢ್ಯತೆ ಕೀಲು ಮುರಿದವರು ಎಂದರು. ಆದರೆ ಕನಕದಾಸರು ಸೇರಿದಂತೆ ಎಲ್ಲಾ ಮಹನೀಯರನ್ನು ಜಾತಿ ಸಂಕೋಲೆಗೆ ಸಿಲುಕಿಸುವ ಪ್ರಯತ್ನ ಮಾಡಲಾಗುತ್ತಿದೆ. ಈಗ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ. ಅದೇ ರೀತಿ ಕನಕದಾಸರು ಕೂಡ ಸಮಾಜ ಸುಧಾರಕ ಹಾಗೂ ಸಾಂಸ್ಕೃತಿಕ ನಾಯಕ ಎಂದರು.

ಸಮಾಜಮುಖಿ ಚಿಂತನೆಯನ್ನು ಹರಡುವಲ್ಲಿ ಕೆಲಸ ಮಾಡಿದ ಕನಕದಾಸರು ಭೂಮಿ, ಸೂರ್ಯ, ಚಂದ್ರ ಇರುವ ತನಕ ಶಾಶ್ವತವಾಗಿ ನೆಲೆಯೂರುತ್ತಾರೆ. ಇಂದು ಧರ್ಮ ಧರ್ಮಗಳ ನಡುವೆ ಬೇಳೆ ಬೇಯಿಸಿಕೊಳ್ಳುವ ಕಾರ್ಯಗಳು ನಡೆಯುತ್ತಿವೆ ಎಂದು ವಿಷಾದಿಸಿದರು.

ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಮಾತನಾಡಿ, ಮೈಸೂರು ವಿವಿಯಲ್ಲಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಆರಂಭಿಸಲು ಬಜೆಟ್‌ನಲ್ಲಿ ಕನಿಷ್ಠ 10 ಕೋಟಿ ರು. ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮ ಪಾಲನಾ ವಿಭಾಗದ ನಿರ್ದೇಶಕ ಪ್ರೊ.ಗುರುಸಿದ್ದಯ್ಯ, ಮೈವಿವಿ ಸಿಂಡಿಕೇಟ್ ಸದಸ್ಯ ಡಾ.ಬಸವರಾಜು ಸಿ.ಜಟ್ಟಿಹುಂಡಿ, ಮೈವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಎಚ್.ಪಿ.ಜ್ಯೋತಿ ಮುಖ್ಯ ಅತಿಥಿಯಾಗಿದ್ದರು. ಇದೇ ಸಂದರ್ಭದಲ್ಲಿ ಡಾ.ಅಸ್ನಾ ಉರೂಜ್, ಡಾ. ಶಾರದಾ, ಸತ್ಯರಾಜ್ ಅರಸ್, ಅಂದಾನಿ, ಶೈಲಶ್ರೀ, ಪುರುಷೋತ್ತಮ್, ಅಶ್ವತ್ಥ್, ಬಸಪ್ಪ, ಚಿಕ್ಕೇಗೌಡ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ಆರ್.ವಾಸುದೇವ, ಡಾ.ನವೀನ್‌ಕುಮಾರ್, ಚಲುವೇಶ್, ಮಧುಸೂದನ್, ಚಿದಾನಂದ, ವಿಜಯಕುಮಾರ್, ಅಭಿಷೇಕ್, ರಿಷಿರಾಜ್, ಮಂಜುನಾಥ್ ಇತರರು ಉಪಸ್ಥಿತರಿದ್ದರು. ರವಿ ಸ್ವಾಗತಿಸಿದರೆ, ಭಾಸ್ಕರ್ ವಂದಿಸಿದರು, ನಾಗಶ್ರೀ ನಿರೂಪಿಸಿದರು.

ಮೈಸೂರು ಮಿತ್ರ ಮಂಗಳವಾರ 19 ನವೆಂಬರ್ 2024

ಮಂಡ್ಯದಲ್ಲಿ ಕನಕದಾಸ ಜಯಂತಿ ಆಚರಣೆ



ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ ಗಣ್ಯರು.

ಮಂಡ್ಯ, ನ.18– ಕನಕದಾಸರು ಮೋಹನತರಂಗಿಣಿ, ನಳ ಚರಿತ್ರೆ ರಾಮಧಾನ್ಯ ಚರಿತೆ, ಹರಿಭಕ್ತಸಾರ ಕೃತಿಗಳನ್ನು ರಚಿಸಿದ್ದು, ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಸಂಗೀತಕ್ಕೆ ಅವರ ಕೊಡುಗೆ ಅಪಾರ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸೋಮವಾರ ನಗರದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಮಂಡ್ಯ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 537ನೇ ಕನಕ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಶ್ರೀಕೃಷ್ಣ ಪರಮಾತ್ಮ ದೇವರೇ ಕನಕದಾಸರ ಭಕ್ತಿಗೆ ಮೆಚ್ಚಿ ಅವರಿಗೆ ವಿಶೇಷ ದರ್ಶನ ನೀಡಿದ ಘಟನೆಯಿಂದ ಕನಕದಾಸರ ಅಪಾರ ಭಕ್ತಿಯನ್ನು ತಿಳಿಯಬಹುದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ನಂತರ ಹಾವೇರಿ ಜಿಲ್ಲೆಯಲ್ಲಿ ಕನಕಪೀಠವನ್ನು ಸ್ಥಾಪನೆ ಮಾಡಿದರು. ಶ್ರೀರಂಗಪಟ್ಟಣದ ಮಹದೇವಪುರದ ಬಳಿ ಕಾವೇರಿ ನದಿಯ ಮಧ್ಯದಲ್ಲಿ ದಾಸ ಶ್ರೇಷ್ಠರಾದ ಕನಕದಾಸರು ಕುಳಿತು ಧ್ಯಾನ ಮಾಡುವ ಕನಕ ಬಂಡೆಯನ್ನು ಅಭಿವೃದ್ಧಿಪಡಿಸಲು ಹಲವರು ಮನವಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಕನಕದಾಸರ ಇತಿಹಾಸವನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ವರದಿ ರಚಿಸಿ ನಂತರ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಅಭಿವೃದ್ಧಿಗಾಗಿ ಪ್ರಯತ್ನಿಸಲಾಗುವುದು ಎಂದು ಹೇಳಿದರು.

"ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ" ಎಂಬ ಕನಕದಾಸರ ಕೀರ್ತನೆಯನ್ನು ಇಂದಿಗೂ ಸಹ ಅನೇಕ ಸಮಾರಂಭಗಳಲ್ಲಿ ಗೀತೆಯ ಮೂಲಕ ವ್ಯಕ್ತಪಡಿಸಲಾಗುತ್ತಿದೆ. ನಮ್ಮ ದೇಶದಲ್ಲಿ ಕನಕದಾಸರಂತಹ ಮಹಾನ್ ಶ್ರೇಷ್ಠ ವ್ಯಕ್ತಿಗಳು ಹಾಗೂ ದಾರ್ಶನಿಕರು ಜನಿಸಿದ್ದು, ಈ ಭೂಮಿಯ ಮೇಲೆ ನಡೆದಾಡಿ ಅನೇಕ ಕೊಡುಗೆಯನ್ನು ನೀಡಿದ್ದಾರೆ. ಅವರುಗಳ ಸಾಧನೆಯನ್ನು ಪ್ರತಿಯೊಬ್ಬರೂ ನೆನೆದು ಪೂಜಿಸಬೇಕು ಎಂದು ತಿಳಿಸಿದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಕನಕದಾಸರ ಜಯಂತಿಯು ಒಂದು ಅರ್ಥಪೂರ್ಣವಾದ ಕಾರ್ಯಕ್ರಮವಾಗಿದೆ. ಕನಕದಾಸರು ಸುಮಾರು 15–16ನೇ ಶತಮಾನದಲ್ಲಿ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಹೋರಾಟ ಮಾಡಿ ಎಲ್ಲಾ ಕುಲದವರು ಒಂದೇ ಎಂದು ಸಾರಿದ ದಾರ್ಶನಿಕರು. ಅಂದಿನ ಸಮಾಜದಲ್ಲಿ ಒಗ್ಗಟ್ಟನ್ನು ತರುವ ಸಲುವಾಗಿ ಶ್ರಮಿಸಿದ ಮಹಾನ್ ಹೋರಾಟಗಾರರಾಗಿದ್ದಾರೆ ಎಂದರು.

ತಳಗವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕಿ ಎಂ.ಡಿ.ಪವಿತ್ರ ಮಾತನಾಡಿ, ಕನಕದಾಸರು ಸಮಾಜದ ಜಾತಿ ಭೇದಗಳ ತಾರತಮ್ಯವನ್ನು ಲೆಕ್ಕಿಸದೆ ಸಾಮರಸ್ಯದಿಂದ ಬದುಕಲು ಸಮಾಜಕ್ಕೆ ಕರೆಯನ್ನು ನೀಡಿದವರು ಹಾಗೂ ಜೀವನದ ಏಳಿಗೆಗಾಗಿ ಸದಾ ಹೋರಾಟವನ್ನು ಮಾಡುವ ಮೂಲಕ ಆತ್ಮೋದ್ಧಾರಕ್ಕೆ ದಾರಿಯನ್ನು ಕಂಡುಕೊಂಡು ಮಹಾತ್ಮರಾದವರು. ಆತ್ಮ ಸಾಕ್ಷಾತ್ಕಾರವನ್ನು ಹೊಂದಲಿಕ್ಕೆ ಜಾತಿ ಮುಖ್ಯವಲ್ಲ, ನೀತಿ ಹಾಗೂ ಭಕ್ತಿ ಮುಖ್ಯ ಎಂಬ ತತ್ವವನ್ನು ಸಾರಿದವರು. ಅಂದಿನ ಸಮಾಜಕ್ಕೆ ಸತ್ವಯುತವಾದ ಸರ್ವಕಾಲಿಕವಾದ ನೈತಿಕ ಮೌಲ್ಯವನ್ನು ಸಮಾಜಕ್ಕೆ ನೀಡಿದವರಾಗಿದ್ದಾರೆ. ಅವರ ತತ್ವ ಹಾಗೂ ಆದರ್ಶಗಳನ್ನು ನಾವೆಲ್ಲರೂ ಅನುಸರಿಸೋಣ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿ.ಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಮಂಡ್ಯ ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ನಯೀಮ್, ಎಎಸ್ಪಿ ತಿಮ್ಮಯ್ಯ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ರಾಜೇಶ್, ಉಪವಿಭಾಗಾಧಿಕಾರಿ ಶಿವಮೂರ್ತಿ, ನಗರಸಭೆ ಸದಸ್ಯ ಶ್ರೀಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ನಂದೀಶ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಡಾ.ಸಿದ್ದಲಿಂಗೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಾಂಡವಪುರದಲ್ಲಿ ಕನಕ ಭವನ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ

ಶಾಸಕ ದರ್ಶನ್ ಪುಟ್ಟಣ್ಣಯ್ಯ ಭರವಸೆ



ಪಾಂಡವಪುರ: ಕುರುಬ ಸಮುದಾಯದ ಮುಖಂಡರ ಬೇಡಿಕೆಯಂತೆ ಪಟ್ಟಣದಲ್ಲಿ ಕನಕ ಭವನಕ್ಕೆ ನಿವೇಶನ ಮಂಜೂರು ಮಾಡಿಸಿ ಕಟ್ಟಡ ನಿರ್ಮಾಣ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಭರವಸೆ ನೀಡಿದರು.

ತಾಲೂಕು ಕಚೇರಿ ಆವರಣದಲ್ಲಿ ತಾಲೂಕು ಆಡಳಿತದಿಂದ ಸೋಮವಾರ ಆಯೋಜಿಸಿದ್ದ ಕನಕದಾಸರ 537ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕದಾಸರ ಕೀರ್ತನೆಗಳ ಆಳವನ್ನು ಅರ್ಥಮಾಡಿಕೊಂಡು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು. ಮಹನೀಯರ ಆಶಯಗಳನ್ನು ಬರೀ ಮಾತು ಮತ್ತು ಭಾಷಣಗಳಿಗೆ ಸೀಮಿತಗೊಳಿಸಬಾರದು. ನಮ್ಮ ಜೀವನದ ನಡೆಯಲ್ಲೂ ಅದರ ಸಾರ ಇರಬೇಕು. ಶ್ರದ್ಧೇ ಭಕ್ತಿ ಇದ್ದರೆ ದೇವರು ಪ್ರತ್ಯಕ್ಷನಾಗುತ್ತಾನೆ ಎಂಬುದಕ್ಕೆ ಉಡುಪಿ ಶ್ರೀಕೃಷ್ಣ ದೇವಸ್ಥಾನದಲ್ಲಿರುವ ಕನಕ ಕಿಂಡಿಯೇ ಸಾಕ್ಷಿ. ಕನಕದಾಸರ ಭಕ್ತಿಗೆ ದೇವರು ದಿಕ್ಕನ್ನು ಬದಲಾಯಿಸಿ ದರ್ಶನ ನೀಡಿದ್ದಾರೆ. ನಾವೆಲ್ಲರೂ ದೇಶದ ಪ್ರತಿಯೊಬ್ಬ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಕಡೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪಶುಸಖಿಯರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಮ್ಮ ವೈಯಕ್ತಿಕ ಹಣದಲ್ಲಿ ಸಮವಸ್ತ್ರ ನೀಡಿದರು.

ಸಮಾರಂಭದಲ್ಲಿ ತಹಸೀಲ್ದಾರ್ ಎಸ್. ಸಂತೋಷ್, ಶಿರಸ್ತೇದಾರ್ ಮೋಹನ್, ತಾಪಂ ಇಒ ಲೋಕೇಶ್‌ಮೂರ್ತಿ, ಪುರಸಭೆ ಮುಖ್ಯಾಧಿಕಾರಿ ಸತೀಶ್‌ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ನವೀನ್ ಕುಮಾರ್, ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ತಾಲೂಕು ಅಧ್ಯಕ್ಷನಾಗರಾಜು, ಉಪನ್ಯಾಸಕಿ ಉಷಾ, ಕುರುಬರ ಸಂಘದ ಅಧ್ಯಕ್ಷ ಹುಚ್ಚೇಗೌಡ, ಸಿ.ಸ್ವಾಮೀಗೌಡ, ಗೋಪಾಲಗೌಡ ಸೇರಿದಂತೆ ಹಲವರು ಇದ್ದರು.

ಬಿಜೆಪಿ ನಾಯಕರಿಂದ ಕಾಂಗ್ರೆಸ್ ಶಾಸಕರ ಸಂಪರ್ಕ ನಿಜ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ,ನ.18– ಆಪರೇಷನ್ ಕಮಲದ ಮೂಲಕ ನಮ್ಮ ಸರ್ಕಾರ ತೆಗೆಯಲು ಬಿಜೆಪಿ–ಜೆಡಿಎಸ್ ಮುಂದಾಗಿದೆ. ನಮ್ಮ ಶಾಸಕರಲ್ಲಿ ಹಲವರನ್ನು ಬಿಜೆಪಿ ನಾಯಕರು ಸಂಪರ್ಕ ಮಾಡಿರುವುದು ನಿಜ. ಕಳೆದ ಒಂದು ವರ್ಷದಿಂದಲೂ ಈ ಪ್ರಯತ್ನ ನಡೆಯುತ್ತಲೇ ಇದೆ. ಆದರೆ ನಮ್ಮವರು ಅವರಿಗೆ ಮನ್ನಣೆ ಕೊಡುತ್ತಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಇಂತವರನ್ನು ಭೇಟಿ ಮಾಡಿದ್ದಾರೆ, ಇಷ್ಟು ಆಮಿಷ ಒಡ್ಡಿದ್ದಾರೆ ಎನ್ನಲ್ಲ. ನಮ್ಮ ಶಾಸಕರನ್ನು ಸಂಪರ್ಕ ಮಾಡಿರುವುದು ಸತ್ಯ. ಈ ಸಂಬಂಧ ಆಡಿಯೋ ವಿಡಿಯೋ ಯಾರ ಬಳಿ ಇದೆಯೋ ಅವರು ಬಿಡುಗಡೆ ಮಾಡುತ್ತಾರೆ ಎಂದರು.

ರಾಜ್ಯದಲ್ಲಿ ಮೊದಲ ಬಾರಿಗೆ ಆಪರೇಷನ್ ಕಮಲ ಮಾಡುತ್ತಿಲ್ಲ. ಯಡಿಯೂರಪ್ಪನ ಸಿಎಂ ಮಾಡಲು ಜೆಡಿಎಸ್, ಕಾಂಗ್ರೆಸ್ ಶಾಸಕರನ್ನು ಆಪರೇಷನ್ ಕಮಲ ಮಾಡಿದ್ದರು. ಹಣ ನೀಡದೇ ಆ ಸಂದರ್ಭದಲ್ಲಿ ಯಾರೂ ಬಿಜೆಪಿಗೆ ಹೋಗಿಲ್ಲ. ನಮ್ಮ ಸರ್ಕಾರ ರಚನೆಯಾದಾಗಿನಿಂದ ಈ ಸರ್ಕಾರ ಉಳಿಯಲ್ಲ ಅಂದಿದ್ದರು. ಯಾವ ಕಾರಣದಿಂದ ನಮ್ಮ ಸರ್ಕಾರ ಉಳಿಯಲ್ಲ ಅಂತ ಹೇಳಿದ್ದರು ಗೊತ್ತಿಲ್ಲ. ಇದರ ಉದ್ದೇಶವೇ ಆಪರೇಷನ್ ಕಮಲ. ಕುಮಾರಸ್ವಾಮಿ ಹಾಗೂ ಬಿಜೆಪಿ ನಾಯಕರು ಹತ್ತಾರು ಬಾರಿ ಮೂರು ತಿಂಗಳಲ್ಲಿ, ಆರು ತಿಂಗಳಲ್ಲಿ ಸರ್ಕಾರ ತೆಗೀತೀವಿ ಎಂದು ಹೇಳಿದ್ದಾರೆ. ಉಪಚುನಾವಣೆಯಲ್ಲೂ ಕುಮಾರಸ್ವಾಮಿ ಈ ಸರ್ಕಾರ ಉಳಿಯಲ್ಲ ಎಂದು ಹೇಳಿದ್ದಾರೆ. ಸರ್ಕಾರ ಕೆಡವಲು ಪ್ರಯತ್ನ ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ ಎಂದರು.

ಮೊದಲು ಆಪರೇಷನ್ ಕಮಲಕ್ಕೆ ಎಷ್ಟು ಹಣ ಕೊಟ್ಟಿದ್ದರೋ ಗೊತ್ತಿಲ್ಲ. ಮೊದಲಿಗಿಂತ ಈಗ ಅಪ್‌ಗ್ರೇಡ್ ಆಗಿದ್ದು, ಹೆಚ್ಚಿನ ಹಣದ ಆಮಿಷವೊಡ್ಡಿದ್ದಾರೆ. ಚುನಾವಣೆಗಳು ಹಿಂದೆ ನಡೆದ ಹಾಗೆ ನಡೆಯುತ್ತಿಲ್ಲ, ಅದಕ್ಕೆ ಹೆಚ್ಚು ಆಫರ್ ಕೊಟ್ಟಿರಬಹುದು. ಹಗರಣಗಳು ಇದ್ದರೆ ಸರ್ಕಾರ ಉಳಿಯಲ್ಲ. ನಾವು ಹಗರಣಗಳನ್ನು ಮಾಡಿಲ್ಲ. ನಮ್ಮದನ್ನು ಯಾವುದಾದರೂ ಪ್ರೂವ್ ಮಾಡಿದ್ದಾರಾ? ಸಿಎಂ ಸೇರಿದಂತೆ ಹಲವರ ಮೇಲೆ ಆರೋಪ ಮಾಡಿದ್ದಾರೆ. ಆದರೆ ಅವರು ಒಂದನ್ನು ನಿರೂಪಿಸಿಲ್ಲ ಎಂದು ದೂರಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ಸಾಹಿತಿಗಳ ಸಮಾಲೋಚನಾ ಸಭೆ



ಸಾಹಿತಿಗಳ ಸಮಾಲೋಚನಾ ಸಭೆಯಲ್ಲಿ ಮಾತನಾಡುತ್ತಿರುವ ಸಚಿವ ಚಲುವರಾಯಸ್ವಾಮಿ

ಮಂಡ್ಯ,ನ.18– 30 ವರ್ಷಗಳ ಬಳಿಕ ಮಂಡ್ಯದಲ್ಲಿ ಡಿಸೆಂಬರ್ 20, 21, 22 ರಂದು ಮೂರು ದಿನಗಳ ಕಾಲ ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೊಳಿಸಲು ಎಲ್ಲರ ಸಹಕಾರ, ಬೆಂಬಲ ಅತ್ಯವಶ್ಯಕ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಎನ್.ಚಲುವರಾಯಸ್ವಾಮಿ ಹೇಳಿದರು.

ಸೋಮವಾರ ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಮಂಡ್ಯ ಜಿಲ್ಲೆಯ ಸಾಹಿತಿಗಳ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು, ಮಂಡ್ಯದ ಆತಿಥ್ಯ, ಸತ್ಕಾರವನ್ನು ಎಲ್ಲರೂ ನೆನೆಯಬೇಕು. ಆ ನಿಟ್ಟಿನಲ್ಲಿ ಸಮ್ಮೇಳನ ಯಶಸ್ವಿಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಮಂಡ್ಯಕ್ಕೆ ತನ್ನದೇ ಆದ ಸೊಗಡಿದೆ. ವೈಶಿಷ್ಟ್ಯ ಇದೆ. ನೂರಕ್ಕೆ ನೂರು ಈ ಸಮ್ಮೇಳನ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಸಚಿವರು, ಜನಸಾಮಾನ್ಯರಾದಿಯಾಗಿ ಎಲ್ಲರ ಸಲಹೆಗಳನ್ನು ಸ್ವೀಕರಿಸಿ, ಸಮಿತಿಯೊಂದಿಗೆ ಚರ್ಚಿಸಿ ಕಾರ್ಯರೂಪಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸಾಹಿತ್ಯ ಸಮ್ಮೇಳನದ ಕುರುಹು ಉಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು. ಕಲಾಮಂದಿರ ದುರಸ್ತಿ ಕಾರ್ಯ ವಾರದಲ್ಲಿ ಪೂರ್ಣಗೊಳ್ಳಲಿದೆ. ಅಂಬೇಡ್ಕರ್ ಭವನ ರೆಡಿಯಾಗಲಿದೆ. ರೈತ ಭವನಕ್ಕೆ ಚಾಲನೆ ನೀಡಲಾಗಿದೆ. ಶಿವಪುರ ಧ್ವಜ ಸತ್ಯಾಗ್ರಹ ಪ್ರತಿಷ್ಠಾನ ರಚನೆ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದು ಹೇಳಿದರು.

ಮೂವತ್ತು ವರ್ಷಗಳ ನಂತರ ನಡೆಯುತ್ತಿರುವ ಈ ಸಮ್ಮೇಳನವನ್ನು ವಿಜೃಂಭಣೆಯಿಂದ, ಅರ್ಥಪೂರ್ಣವಾಗಿ ನೆರವೇರಿಸಲಾಗುವುದು. ಇದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಸರ್ಕಾರ, ಜಿಲ್ಲಾಡಳಿತ ಅಥವಾ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನವಲ್ಲ, ಇದು ಎಲ್ಲಾ ಕನ್ನಡಿಗರ ಮನ ಮನೆಯ ಸಮ್ಮೇಳನವಾಗಿದೆ. ಎಲ್ಲಾ ಕನ್ನಡಿಗರ ಮನಸ್ಸುಗಳು ಸೇರಿ ನಾವೆಲ್ಲ ಒಂದು ಎಂಬ ಅಭಿಮಾನ ಮೂಡಿಸಲು ಸರ್ವರ ಸಹಕಾರದ ಅವಶ್ಯಕತೆ ಇದೆ. ಸಮ್ಮೇಳನದಲ್ಲಿ ಸಾಹಿತಿಗಳ ಸಹಕಾರ ಬಹಳ ಮುಖ್ಯ ಎಂದರು.

28 ಸಮಿತಿಗಳು ಈಗಾಗಲೇ ರಚನೆ ಮಾಡಿಕೊಂಡಿದ್ದು ಎಲ್ಲಾ ಸಮಿತಿ ಯವರೂ ಕೂಡ ಸುಮಾರು 5 ರಿಂದ 6 ಬಾರಿ ಸಭೆ ನಡೆಸಿ ಈಗಾಗಲೇ ಕ್ರಿಯಾ ಯೋಜನೆ ರೂಪಿಸಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಬರಹಗಾರ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, ಮಂಡ್ಯ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆ. ಸಮ್ಮೇಳನದಲ್ಲಿ ಜಿಲ್ಲೆಯ ಸಾಂಸ್ಕೃತಿಕ, ಶ್ರೀಮಂತ ಪರಂಪರೆ ಬಿಂಬಿಸಬೇಕು. ಯಕ್ಷಗಾನದ ತವರು ಮಂಡ್ಯ. ಕೆಂಪಣ್ಣಗೌಡ ಮೊದಲ ಕವಿ. ಮೂಡಲಪಾಯ ಕಲೆ ಮತ್ತೆ ಬೆಳಕಿಗೆ ಬರಬೇಕು. ಮಂಡ್ಯ ಜಿಲ್ಲೆಯ ಕೊಡುಗೆಗಳನ್ನು ಕೇಂದ್ರವಾಗಿಟ್ಟುಕೊಂಡು ಚರ್ಚೆಯಾಗಬೇಕು. ರಾಜ್ಯಮಟ್ಟದ ವಿದ್ವಾಂಸರನ್ನು ಕರೆಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಕೇಂದ್ರ ಕಸಾಪ ಅಧ್ಯಕ್ಷ ಡಾ.ಮಹೇಶ್, ಜೋಷಿ, ವಾಗ್ಮಿ ಪ್ರೊ. ಕೃಷ್ಣೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ.ಜಯಪ್ರಕಾಶ್‌ಗೌಡ, ಶಾಸಕ ಪಿ.ರವಿಕುಮಾರ್ ಗಣಿಗ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್, ಸಮ್ಮೇಳನದ ಸಂಚಾಲಕಿ ಮೀರಾ ಶಿವಲಿಂಗಯ್ಯ ಸೇರಿದಂತೆ ಮಂಡ್ಯ ಜಿಲ್ಲೆಯ ಇನ್ನಿತರ ಹಿರಿಯ ಸಾಹಿತಿಗಳು ಉಪಸ್ಥಿತರಿದ್ದರು.

ಸಮಾಲೋಚನಾ ಸಭೆಯಲ್ಲಿ ವ್ಯಕ್ತವಾದ ಪ್ರಮುಖ ಸಲಹೆಗಳು

ಮಂಡ್ಯ ಜಿಲ್ಲೆಗೆ ಪ್ರತ್ಯೇಕ ಗೋಷ್ಠಿ ಮೀಸಲಿರಿಸಬೇಕು. ನಾಡು, ನುಡಿ, ನೀರಿಗಾಗಿ ಹೋರಾಟ ಮಾಡಿದವರ ನೆನೆಯುವ ಗೋಷ್ಠಿ ಇರಬೇಕು. ಯುವ ಸಾಹಿತ್ಯ, ಮಕ್ಕಳ ಸಾಹಿತ್ಯದ ಬಗ್ಗೆ ಚರ್ಚೆಯಾಗಬೇಕು. ಮಹಿಳೆಯರಿಗೆ ಆದ್ಯತೆ ನೀಡಬೇಕು. ಮಹಾಕಾವ್ಯಗಳ ಬಗ್ಗೆ ಗೋಷ್ಠಿಯಾಗಬೇಕು. ಉಪವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಮುದ್ರಾಕಾರರಿಗೆ ಸಹಾಯಹಸ್ತ ನೀಡಬೇಕು. ನಶಿಸುತ್ತಿರುವ ತೊಗಲು ಗೊಂಬೆ ಕಲೆ ಪ್ರದರ್ಶನಕ್ಕೆ ಒತ್ತು ಕೊಡಬೇಕು. ತೊಗಲುಬೊಂಬೆ ಶ್ರೀಮಂತಿಕೆ ಪರಿಚಯಿಸಬೇಕು. ಜಿಲ್ಲೆಯ ಎಲ್ಲಾ ಲೇಖಕರ ಪುಸ್ತಕ ಪ್ರದರ್ಶನ ಏರ್ಪಾಡು ಮಾಡಿ ಮಂಡ್ಯ ಜಿಲ್ಲಾ ಸಾಹಿತ್ಯ ಪುಸ್ತಕ ಪ್ರದರ್ಶನ ಮಾಡಬೇಕು. ಮುದ್ರಣಗೊಳ್ಳುವ ಪುಸ್ತಕಗಳಲ್ಲಿ ಸಾಹಿತಿಗಳ ಫೋಟೋ ಮಾತ್ರ ಇರಬೇಕು. ಕಾಲೇಜು, ಹೈಸ್ಕೂಲ್‌ಗಳಿಗೆ ಸಂಚಾಲಕರನ್ನು ನೇಮಿಸಿ ಕನ್ನಡ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಬೇಕು. ಎಲ್ಲಾ ವರ್ಗದ ವಚನಕಾರರ ವಚನ ಗೋಷ್ಠಿ ಇರಬೇಕು. ಸಮ್ಮೇಳನ ನೆನಪಿಗೆ 87 ಪುಸ್ತಕಗಳನ್ನು ಬಿಡುಗಡೆ ಮಾಡಬೇಕು.

ಭಾವನೆ, ಸಂಸ್ಕೃತಿ, ಇತಿಹಾಸದ ಮಿಶ್ರಣವೇ ಕನ್ನಡ: ನಿಂಗರಾಜೇಗೌಡ



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಅಭಿನಂದಿಸಲಾಯಿತು.

ಮಂಡ್ಯ,ನ.18– ಕರ್ನಾಟಕದ ಇತಿಹಾಸವೇ ಕನ್ನಡವಾಗಿದ್ದು, ಭಾವನೆ, ಸಂಸ್ಕೃತಿ, ಇತಿಹಾಸದ ಮಿಶ್ರಣವೇ ಕನ್ನಡ ಎಂದು ಮೈಸೂರು ವಿವಿ ಸಿಂಡಿಕೇಟ್‌ನ ಮಾಜಿ ಸದಸ್ಯ ಈ.ಸಿ.ನಿಂಗರಾಜೇಗೌಡ ಅಭಿಪ್ರಾಯಪಟ್ಟರು.

ಭಾನುವಾರ ನಗರದ ಗಾಂಧಿಭವನದಲ್ಲಿ ಡಾ. ಜೀಶಂಪ ಸಾಹಿತ್ಯ ವೇದಿಕೆ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಕನ್ನಡ ಹಬ್ಬ, ಕವಿಗೋಷ್ಠಿ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ 165ಕ್ಕೂ ಅಧಿಕ ಭಾಷೆಗಳನ್ನು ಜನ ಬಳಸುತ್ತಾರೆ. ಆದರೆ ಮಂಡ್ಯದಂತಹ ಜಿಲ್ಲೆಯಲ್ಲಿ ಕನ್ನಡ ಭಾಷೆಯ ಅತಿ ಹೆಚ್ಚು ಬಳಕೆ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಹಾಭಾರತ ಸಂದರ್ಭದಲ್ಲೇ ಕನ್ನಡ, ಕರುನಾಡು ಹುಟ್ಟಿದೆ ಎಂಬ ಹೆಗ್ಗಳಿಕೆ ಇದೆ. ಅಲ್ಲಿಂದ ಕನ್ನಡ ಹುಟ್ಟಿ, ಬೆಳೆಯುತ್ತಾ ಬಂದಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಇದೀಗ ಕನ್ನಡಕ್ಕೆ ತನ್ನದೇ ಆದ ವಿಶಿಷ್ಟ ಹೆಸರಿದೆ. ಐದು ಕೋಟಿಗೂ ಹೆಚ್ಚು ಜನರು ವಿಶ್ವಾದ್ಯಂತ ಕನ್ನಡ ಮಾತನಾಡುತ್ತಾರೆ. ಐವತ್ತಕ್ಕೂ ಹೆಚ್ಚು ದೇಶದಲ್ಲಿ ಕನ್ನಡ ಮಾತನಾಡುವ ಕನ್ನಡಿಗರಿದ್ದಾರೆ. ಕನ್ನಡ ಮತ್ತಷ್ಟು ಬೆಳೆಯಬೇಕೆಂದರೆ ಮಾತನಾಡುವವರ ಸಂಖ್ಯೆ ಹೆಚ್ಚಾಗಬೇಕೆಂದರು.

1721 ವೈವಿಧ್ಯಮಯ ಭಾಷೆ ನಮ್ಮ ದೇಶದಲ್ಲಿದೆ. ಜನಗಣತಿ ಮಾಡಿದರೆ ಮತ್ತಷ್ಟು ಭಾಷೆ ಹೆಚ್ಚಾಗುವ ಸಾಧ್ಯತೆ ಇದೆ. ಇಷ್ಟು ಭಾಷೆಗಳ ನಡುವೆ ನಮ್ಮ ಕನ್ನಡ ವಿಶೇಷ ಸ್ಥಾನಮಾನ ಉಳಿಸಿಕೊಂಡು ಬಂದಿರುವುದು ಶ್ಲಾಘನೀಯ ಎಂದ ಅವರು, ಊಟಿ, ಕಾಸರಗೋಡು, ಸೊಲ್ಲಾಪುರ ಪ್ರದೇಶಗಳು ಬೇರೆ ರಾಜ್ಯದಲ್ಲಿದ್ದರೂ ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಿದೆ. ಈ ಪ್ರದೇಶಗಳು ಮೂಲ ಕರ್ನಾಟಕಕ್ಕೆ ಸೇರಿದ್ದರಾದರೂ ಹಿಂದೆ ನಮ್ಮನ್ನಾಳಿದ ರಾಜಕಾರಣಿಗಳ ಲಾಲಸ್ಯದಿಂದ ಈ ಪ್ರದೇಶಗಳು ಇಂದು ಬೇರೆ ರಾಜ್ಯಗಳ ಪಾಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಬಹಳಷ್ಟಿದೆ. ಅವರನ್ನು ಸದಾ ಸ್ಮರಿಸುವ ಕೆಲಸವಾಗಬೇಕು. ಮಂಡ್ಯ ನಗರದ ಪ್ರಮುಖ ವೃತ್ತದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ನಿರ್ಮಾಣ ಮಾಡಬೇಕು. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಪಿ. ಪ್ರಕಾಶ್ ಮಾತನಾಡಿ, ಮಂಡ್ಯ ಜಿಲ್ಲೆಯಂತಹ ಕನ್ನಡ ಹೆಚ್ಚು ಮಾತನಾಡುವ ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯ ಉಳಿಸಿ, ಬೆಳೆಸುವಂತಹ ಇಂತಹ ಕಾರ್ಯಕ್ರಮ ಹೆಚ್ಚಾಗಿ ನಡೆಯಬೇಕು. ಮುಂದಿನ ತಿಂಗಳು ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಮಂಡ್ಯ ಸಮ್ಮೇಳನ ರಾಜ್ಯದಲ್ಲಿ ಇತಿಹಾಸವಾಗಬೇಕು. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮ್ಮೇಳನ ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಸಮಾಜ ಸೇವಕ ಎಲ್.ಜಿ.ಮಂಜುನಾಥ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಎಂಬುದು ಕೇವಲ ನವೆಂಬರ್ ತಿಂಗಳಿಗೆ ಮೀಸಲಾಗದೇ ವರ್ಷಪೂರ್ತಿ ಕನ್ನಡ ಕಟ್ಟಿ ಬೆಳೆಸುವ ಕೆಲಸವಾಗಬೇಕೆಂದು ಕರೆ ನೀಡಿದರು.

ಜೆಡಿಎಸ್‌ನ ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ಜಯರಾಂ ಮಾತನಾಡಿ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಕೆಲಸ ಯುವಕರ ಮೇಲಿದೆ. ಇಂದಿನ ಯುವ ಪೀಳಿಗೆ ಆಂಗ್ಲ ಭಾಷೆಗೆ ಜೋತು ಬಿದ್ದಿದ್ದಾರೆ. ಆಂಗ್ಲ ಭಾಷೆಯನ್ನು ಕಲಿಕೆಗೆ ಮೀಸಲಿಟ್ಟು, ಕನ್ನಡವನ್ನು ಹೆಚ್ಚು ಬೆಳೆಸುವ ಮೂಲಕ ಕನ್ನಡ ಕಟ್ಟುವ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಹಲವು ಮಂದಿಗೆ ಸುವರ್ಣ ಕರ್ನಾಟಕ ಸಾಹಿತ್ಯ ಪ್ರಶಸ್ತಿ, ಕನ್ನಡ ರತ್ನ ಪ್ರಶಸ್ತಿ ಹಾಗೂ ಕಾವ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಸುರೇಶ್ ಕಂಠಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ, ಸಮಾಜ ಸೇವಕರಾದ ಗಂಗಾಧರ್, ವೆಂಕಟೇಶ್, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಉಪಾಧ್ಯಕ್ಷ ಅರಸಯ್ಯ, ಕಾರ್ಯಾಧ್ಯಕ್ಷ ನಾಗೇಶ್ ರಾಗಿಮುದ್ದನಹಳ್ಳಿ, ಪ್ರಧಾನ ಕಾರ್ಯದರ್ಶಿ ಮಂಗಲ ಶಿವಣ್ಣ, ಉದ್ಯಮಿ ಸಿದ್ದೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ರೂಪಾ ಹೊಸಹಳ್ಳಿ ಉಪಸ್ಥಿತರಿದ್ದರು.

ಕಿಕ್ಕೇರಿಯಲ್ಲಿ ಕನಕದಾಸ ಜಯಂತಿ



ಕಿಕ್ಕೇರಿ ಗ್ರಾಪಂ.ಕಚೇರಿಯಲ್ಲಿ ಸೋಮವಾರ ಜರುಗಿದ ಕನಕದಾಸರ ಜಯಂತಿಯಲ್ಲಿ ಕನಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗಣ್ಯರು ನಮಿಸಿದರು. ಕೆ.ಜೆ. ಪುಟ್ಟರಾಜು, ಚಲುವರಾಜು, ಪಾಪೇಗೌಡ, ವಾಸು ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ,ನ.18– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2024–25ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್.ಡಿ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, ಹಾಗೂ 3ಬಿ ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಡಿಸೆಂಬರ್ 15ರೊಳಗೆ http://bcwd.karnataka.gov.inವೆಬ್‌ಸೈಟ್ ಮೂಲಕ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8050770004 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರಿಹರಪುರ ಗ್ರಾಪಂ ಉಪಾಧ್ಯಕ್ಷರಾಗಿ ಟಿ.ಆರ್.ನಂದೀಶ್



ತಾಲೂಕಿನ ಹರಿಹರಪುರ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಟಿ.ಆರ್.ನಂದೀಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಪಂ. ಅಧ್ಯಕ್ಷೆ ರತಿ ಶ್ರೀಧರ್, ಮುಖಂಡರು ಹಾಗೂ ಇತರರು ಇದ್ದರು.

ಕೆ.ಆರ್.ಪೇಟೆ,ನ.18– ತಾಲೂಕಿನ ಹರಿಹರಪುರ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಟಿ.ಆರ್.ನಂದೀಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ

ಗ್ರಾಮ ಪಂಚಾಯಿತಿಯ ಈ ಹಿಂದಿನ ಉಪಾಧ್ಯಕ್ಷ ಬಲರಾಮೇಗೌಡರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಟಿ.ಆರ್. ನಂದೀಶ್ ಹೊರತುಪಡಿಸಿ ಬೇರೆ ಯಾವ ಸದಸ್ಯರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ನಡೆಯಿತು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ರತಿ ಶ್ರೀಧರ್, ಗ್ರಾ.ಪಂ. ಸದಸ್ಯರಾದ ಬಿ.ಸಿ.ಹರ್ಷ, ಬಲರಾಮೇಗೌಡ, ಕತ್ತರಘಟ್ಟ ಪರಮೇಶ್, ಹರೀಶ್, ಆಶಾ, ಸರೋಜಮ್ಮ ವಿಜಿಯಮ್ಮ, ದೇವಮ್ಮ, ಲತಾ, ಕುಸುಮ, ನಾಗೇಗೌಡ, ರುಕ್ಮಿಣಿ, ಜಯಮಣಿ, ಸುಂದ್ರಮ್ಮ, ದೇವರಾಜ್, ನರಸಿಂಹಮೂರ್ತಿ, ಗಣೇಶ್, ಗ್ರಾಪಂ ಮಾಜಿ ಸದಸ್ಯ ಹರಿಹರಪುರ ಶ್ರೀಧರ್, ಮುಖಂಡರಾದ ಶ್ರೀಧರ್, ರಮೇಶ್, ರಾಜೇಗೌಡ, ಅಶೋಕ್, ಯಳವಯ್ಯ, ಹರಿಹರಪುರ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಮೋಹನ್, ಬಸವರಾಜ್, ಲೋಕೇಶ್, ರವಿ, ಉಮೇಶ್, ಮಂಜುನಾಥ್, ಸೇರಿದಂತೆ ಹಲವು ಮುಖಂಡರು, ಯುವಕ ಮಿತ್ರರು ಉಪಸ್ಥಿತರಿದ್ದರು.

ಕೆ.ಆರ್.ಪೇಟೆ ರೋಟರಿ ಕ್ಲಬ್ ಪದಾಧಿಕಾರಿಗಳ ಪದಗ್ರಹಣ



ಕೆ.ಆರ್.ಪೇಟೆ ರೋಟರಿ ಕ್ಲಬ್ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಜಿಲ್ಲಾ ಗವರ್ನರ್ ಡಾ.ಎಸ್.ವಿ.ಶ್ರೀನಿವಾಸಮೂರ್ತಿ ಉದ್ಘಾಟಿಸಿದರು. ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಕೆ.ಆರ್.ಪೇಟೆ ರೋಟರಿ ಕ್ಲಬ್ ಕಾರ್ಯದರ್ಶಿ ರಂಗನಾಥ್ ಸೇರಿದಂತೆ ರೋಟರಿ ಕುಟುಂಬದ ನೂರಾರು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕನಕದಾಸರ ಸಾಹಿತ್ಯ ಪರಿಷತ್ ಸ್ಥಾಪಿಸಬೇಕು

ಚಿಂತಕಿ ಮಮತಾ ಚಂದ್ರಶೇಖರ್



ಸಮಾರಂಭದಲ್ಲಿ ಉಪನ್ಯಾಸಕಿ ಹಾಗೂ ಚಿಂತಕಿ ಮಮತಾ ಚಂದ್ರಶೇಖರ್ ಕನಕದಾಸರನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕೆ.ಆರ್.ಪೇಟೆ,ನ.18– ಭಕ್ತ ಕನಕದಾಸರ ಕೀರ್ತನೆಗಳು ಉತ್ತಮ ಸಮಾಜಕ್ಕೆ ದಾರಿದೀಪವಾಗಿವೆ ಇದಕ್ಕಾಗಿ ಕನಕದಾಸರ ಕೀರ್ತನೆಗಳನ್ನು ಬೆಳಕಿಗೆ ತರುವ ಅಗತ್ಯವಿದೆ. ಇದಕ್ಕಾಗಿ ಸರ್ಕಾರವು ಕನಕದಾಸರ ಸಾಹಿತ್ಯ ಪರಿಷತ್ ಸ್ಥಾಪಿಸಬೇಕು ಎಂದು ಉಪನ್ಯಾಸಕಿ ಹಾಗೂ ಚಿಂತಕಿ ಮಮತಾ ಚಂದ್ರಶೇಖರ್ ಹೇಳಿದರು.

ಅವರು ತಾಲೂಕು ಆಡಳಿತ ವತಿಯಿಂದ ಪಟ್ಟಣದಲ್ಲಿರುವ ಶತಮಾನದ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಭಕ್ತ ಕನಕದಾಸರ 537ನೇ ವರ್ಷದ ಜಯಂತ್ಯುತ್ಸವ ಸಮಾರಂಭದಲ್ಲಿ ಪ್ರಧಾನ ಭಾಷಣಕಾರರಾಗಿ ಆಗಮಿಸಿ, ಕನಕ ದಾಸರನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕನಕದಾಸರು ತಮ್ಮ ಚಿಂತನೆಯನ್ನು ಸಮಾಜಕ್ಕೆ ಕೊಟ್ಟು ಹೋದ ಕವಿ, ದಾರ್ಶನಿಕ, ಸಂತ, ಸಮಾಜ ಸುಧಾರಕ, ತತ್ವಜ್ಞಾನಿ ಆಗಿದ್ದರು. ಚಿಕ್ಕ ವಯಸ್ಸಿನಲ್ಲೇ ಹಲವಾರು ಕೃತಿಗಳನ್ನು ರಚಿಸಿದ ಕನಕದಾಸರು ತಮ್ಮ ಕೊನೆ ಉಸಿರು ಇರುವವರೆಗೆ ಸಂಗೀತ ಸಾಹಿತ್ಯ ಮುಂತಾದವುಗಳಲ್ಲಿ ತೊಡಗಿ ಕೊಂಡವರು. ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಅತ್ಯಂತ ಸರಳವಾದ ಭಾಷೆಯನ್ನು ಬಳಸಿ ಕೃತಿಗಳನ್ನು ರಚಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಟಿ.ಮಂಜು ಮಾತನಾಡಿ ಕನಕದಾಸರು 4ಸಾವಿರ ಕೀರ್ತನೆಗಳು ಅಥವಾ ಪದ್ಯಗಳನ್ನು ಬರೆದಿದ್ದಾರೆ. ಎಲ್ಲವೂ ಸಹ ಸಮಾಜ ಬದಲಾವಣೆಗೆ ಪೂರಕವಾಗಿ ರಚಿಸಿರುವ ಕಾವ್ಯಗಳಾಗಿವೆ ಎಂದು ತಿಳಿಸಿದರು. ಈ 4ಸಾವಿರ ಪಂದ್ಯಗಳ ಸಾರವನ್ನು ಸಮಾಜಕ್ಕೆ ತಿಳಿಸಬೇಕಾದರೆ ಕನಕದಾಸರ ಸಾಹಿತ್ಯ ಅಕಾಡೆಮಿ ಅಥವಾ ಕನಕದಾಸ ಸಾಹಿತ್ಯ ಪರಿಷತ್ ಸ್ಥಾಪಿಸುವ ಅಗತ್ಯವಿದೆ ಎಂದು ಪ್ರಧಾನ ಭಾಷಣಕಾರರಾದ ಮಮತಾ ಚಂದ್ರಶೇಖರ್ ಅವರು ಪ್ರತಿಪಾದಿಸಿದ್ದಾರೆ ಇದನ್ನು ನಾನು ಸರ್ಕಾರದ ಶಾಸಕನಾಗಿ ಅನುಮೋದಿಸುತ್ತೇನೆ. ಕೂಡಲೇ ಸರ್ಕಾರವು ಕನಕದಾಸ ಜಯಂತಿ ಆಚರಣೆಗಿಂತ ಅವರ ಕಾವ್ಯಗಳ ಸಾರವನ್ನು ಜನತೆಗೆ ತಿಳಿಸಲು ಕೂಡಲೇ ಕನಕದಾಸ ಸಾಹಿತ್ಯ ಅಕಾಡೆಮಿ ಅಥವಾ ಪರಿಷತ್ ಸ್ಥಾಪನೆ ಮಾಡಬೇಕು. ಜನರಿಗೆ ಕನಕದಾಸರ ಕೀರ್ತನೆಗಳ ಸಾರವು ತಿಳಿಯುವಂತಾಗಬೇಕು. ಈ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರ ನೀಡಬೇಕು ಎಂದು ಶಾಸ ಕರು ಸರ್ಕಾರಕ್ಕೆ ಮನವಿ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಬೆಳ್ಳಿ ಸಾರೋಟಿನಲ್ಲಿ ಪ್ರವಾಸಿ ಮಂದಿರದಿಂದ ಹೊರಟ ಕನಕದದಾಸರ ಭಾವಚಿತ್ರ ಮೆರವಣಿಗೆಗೆ ಶಾಸಕರಾದ ಹೆಚ್.ಟಿ. ಮಂಜು ಚಾಲನೆ ನೀಡಿದರು.

ತಹಶೀಲ್ದಾರ್ ಡಾ.ಅಶೋಕ್, ಜಿ.ಪಂ. ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್ ಕಾರ್ಯಕ್ರಮ ಕುರಿತು ಮಾತನಾಡಿದರು. ಜಿಪಂ ಮಾಜಿ ಸದಸ್ಯರಾದ ಐಪನಹಳ್ಳಿ ನಾಗೇಂದ್ರ ಕುಮಾರ್, ರಾಂದಾಸ್, ಪುರಸಭಾ ಅಧ್ಯಕ್ಷೆ ಪಂಕಜಾ ಪ್ರಕಾಶ್, ಉಪಾಧ್ಯಕ್ಷೆ ಸೌಭಾಗ್ಯ ಉಮೇಶ್, ಜಿಲ್ಲಾ ಕುರುಬರ ಸಂಘದ ಕಾರ್ಯದರ್ಶಿ ಎಂ.ಜೆ.ಶಶಿಧರ್, ನಿರ್ದೇಶಕ ಪ್ರಸನ್ನಕುಮಾರ್, ಪುರಸಭಾ ಸದಸ್ಯರಾದ ಕೆ.ಆರ್.ರವೀಂದ್ರಬಾಬು, ಸುಗುಣ ರಮೇಶ್, ಸುಚೇಂದ್ರ ಕುಮಾರ್, ಬಸ್ತಿರಂಗಪ್ಪ ರಾಜಯ್ಯ, ಶಕುಂತಲಾ, ಜಿ.ಎ.ರಾಯಪ್ಪ, ಅಕ್ಕಿಹೆಬ್ಬಾಳು ದಿವಾಕರ್, ಲತಾ ಮುರುಳಿ, ಲೋಲಾಕ್ಷಿ ಜಗದೀಶ್, ಬಿಇಓ ತಿಮ್ಮೇಗೌಡ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಡಾ. ದಿವಾಕರ್, ಪಶುವೈದ್ಯ ಸಹಾಯಕ ನಿರ್ದೇಶಕ ಡಾ.ಹೆಚ್.ಎಸ್.ದೇವರಾಜು, ಬಿಸಿಎಂ ಅಧಿಕಾರಿ ಎಂ.ಎನ್.ವೆಂಕಟೇಶ್, ಕೆಪಿಎಸ್ ಶಾಲೆಯ ಉಪಪ್ರಾಂಶುಪಾಲ ತಿಮ್ಮೇಗೌಡ, ರಾಜಸ್ವ ನಿರೀಕ್ಷಕ ಜ್ಞಾನೇಶ್, ಸರ್ಕಲ್ ಇನ್ಸ್‌ಪೆಕ್ಟರ್ ಸುಮಾರಾಣಿ, ಗ್ರಾಮ ಆಡಳಿತಾಧಿಕಾರಿ ಜಗದೀಶ್ ಸೇರಿದಂತೆ ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ವಿವಿಧ ಗಣ್ಯರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 19 ನವೆಂಬರ್ 2024

ಮುಡಾ ಅನುಮೋದಿತ ಬಡಾವಣೆ ನಗರ ಪಾಲಿಕೆಗೆ ಹಸ್ತಾಂತರಿಸಲು ಆಗ್ರಹ

ಪಾಲಿಕೆ ಯುಜಿಡಿ ಕಾಮಗಾರಿಗೆ ತಡೆಯೊಡ್ಡಿ ನಿವಾಸಿಗಳಿಂದ ರಸ್ತೆ ತಡೆದು ಪ್ರತಿಭಟನೆ



ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಶೋಭಾ ಗಾರ್ಡನ್ ಬಡಾವಣೆಯನ್ನು ನಗರಪಾಲಿಕೆಗೆ ಹಸ್ತಾಂತರಿಸಿ, ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಸೋಮವಾರ ಬಡಾವಣೆ ನಿವಾಸಿಗಳು ರಸ್ತೆ ತಡೆದು, ಪ್ರತಿಭಟನೆ ನಡೆಸಿದರು.

ಮೈಸೂರು, ನ.18(ಬಿಎಲ್‌ಯು)– ಮುಡಾ ಅನುಮೋದಿತ ತಮ್ಮ ಬಡಾವಣೆಯನ್ನು ನಗರ ಪಾಲಿಕೆಗೆ ಹಸ್ತಾಂತರಿಸಿ, ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಮೈಸೂರು–ಬೆಂಗಳೂರು ಹೆದ್ದಾರಿಯ ಶೋಭಾ ಗಾರ್ಡನ್ ನಿವಾಸಿಗಳು ಇಂದು ನಗರ ಪಾಲಿಕೆಯ ಯುಜಿಡಿ ಕಾಮಗಾರಿಗೆ ತಡೆಯೊಡ್ಡಿ, ರಸ್ತೆ ತಡೆ ಮಾಡಿ, ಪ್ರತಿಭಟನೆ ನಡೆಸಿದರು.

ನಗರದ ಎನ್.ಆರ್.ಮೊಹಲ್ಲಾದ ಶೋಭಾ ಗಾರ್ಡನ್ ನಿವಾಸಿಗಳು ಸೋಮವಾರ ನಗರಪಾಲಿಕೆ ಕೈಗೊಂಡಿದ್ದ ಯುಜಿಡಿ ಕಾಮಗಾರಿಗೆ ತಡೆಯೊಡ್ಡಿ, ರಸ್ತೆಗೆ ಅಡ್ಡಲಾಗಿ ಕುಳಿತು ಪ್ರತಿಭಟಿಸಿದರು.

ಕಳೆದ 12 ವರ್ಷದ ಹಿಂದೆ ನಿರ್ಮಾಣವಾಗಿರುವ ಶೋಭಾ ಗಾರ್ಡನ್ ಮುಡಾದಿಂದ ಅನುಮೋದನೆಗೊಂಡಿದೆ. ಪ್ರತಿ ಮನೆಯವರು ಮುಡಾಗೆ ತಲಾ 25 ಸಾವಿರ ರೂಪಾಯಿ ತೆರಿಗೆ ಪಾವತಿ ಮಾಡುತ್ತಿದ್ದೇವೆ. ಆದರೆ ನಮಗೆ ಈ ತನಕ ಯಾವುದೇ ಮೂಲಸೌಕರ್ಯ ಕಲ್ಪಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡಾವಣೆ ಒಳಗೆ ಇರುವ ಬೋರ್‌ವೆಲ್ ನೀರು ಬಳಸುತ್ತಿದ್ದು, ಮನೆ ಬಳಿ ಪಿಟ್ ಮಾಡಿಕೊಂಡು ಅದರ ಮೂಲಕ ಎಸ್‌ಟಿಪಿಗೆ ಒಳಚರಂಡಿ ನೀರಿನ ಸಂಪರ್ಕ ನೀಡಲಾಗಿದೆ. ಬೀದಿದೀಪಗಳ ವಿದ್ಯುತ್ ಶುಲ್ಕ ಕೂಡ ನಾವೇ ಪಾವತಿ ಮಾಡುತ್ತಿದ್ದೇವೆ. ತೆರಿಗೆ ಪಾವತಿ ಮಾಡುತ್ತಿದ್ದರೂ ಸರ್ಕಾರದಿಂದ ನಮಗೆ ಯಾವುದೇ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಕಿಡಿಕಾರಿದರು.

ಈ ಹಿನ್ನೆಲೆಯಲ್ಲಿ ಮುಡಾ ಅನುಮೋದಿತ ನಮ್ಮ ಬಡಾವಣೆಯನ್ನು ನಗರ ಪಾಲಿಕೆಗೆ ಹಸ್ತಾಂತರ ಮಾಡಿ, ಮೂಲಸೌಕರ್ಯ ಕಲ್ಪಿಸುವಂತೆ ಕಳೆದ ಐದು ವರ್ಷಗಳಿಂದ ಮುಡಾ ಹಾಗೂ ನಗರ ಪಾಲಿಕೆಗೆ ಅಲೆದಾಡುತ್ತಿದ್ದೇವೆ. ಆದರೆ ಈ ತನಕ ಯಾರೂ ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ಎನ್.ಆರ್.ಮೊಹಲ್ಲಾದ ಒಳಚರಂಡಿ ಸಂಪರ್ಕವನ್ನು ಸುಯೇಜ್ ಪ್ಲಾಂಟ್‌ಗೆ ಕಲ್ಪಿಸಲು ನಮ್ಮ ಬಡಾವಣೆ ಎದುರು ಯುಜಿಡಿ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ. ಆದರೆ ನಮ್ಮ ಬಡಾವಣೆಯ ಒಳಚರಂಡಿ ಸಂಪರ್ಕವನ್ನು ಇಲ್ಲಿಗೆ ನೀಡಲು ನಗರಪಾಲಿಕೆ ನಿರಾಕರಿಸುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಬೇಡಿಕೆ ಈಡೇರುವ ತನಕ ಯುಜಿಡಿ ಪೈಪ್ ಅಳವಡಿಸಲು ಬಿಡುವುದಿಲ್ಲ ಎಂದು ಪ್ರತಿಭಟನೆ ನಡೆಸಿದರು.

ಯುಜಿಡಿ ಸಂಪರ್ಕ ಕಲ್ಪಿಸಲು ಕಾಮಗಾರಿ ನಡೆಸುತ್ತಿದ್ದ ಜೆಸಿಬಿ ತಡೆದು, ರಸ್ತೆಯಲ್ಲೇ ಚೇರ್‌ಗಳನ್ನು ಹಾಕಿಕೊಂಡು ಪ್ರತಿಭಟನೆ ನಡೆಸಿದರು. ನಮ್ಮ ಬೇಡಿಕೆ ಈಡೇರುವ ತನಕ ಯುಜಿಡಿ ಕಾಮಗಾರಿಗೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ಕಾವೇರಿ ಕುಡಿಯುವ ನೀರು ಸರಬರಾಜು ಮಾಡಬೇಕು, ಒಳಚರಂಡಿ ಸಂಪರ್ಕ ಕಲ್ಪಿಸಬೇಕು, ಇತರೆ ಬಡಾವಣೆಗಳಂತೆ ಬೀದಿದೀಪಗಳ ವಿದ್ಯುತ್ ದರವನ್ನು ನಗರ ಪಾಲಿಕೆಯೇ ಭರಿಸಬೇಕು ಎಂದು ಆಗ್ರಹಿಸಿದರು. ಶೋಭಾ ಗಾರ್ಡನ್ ನಿವಾಸಿಗಳ ಸಂಘದ ಅಧ್ಯಕ್ಷೆ ಮುಮ್ತಾಜ್ ಬೇಗಂ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಭಾರತೀಯ ಭೂ ಸೇನೆಯ ನಿವೃತ್ತ ವಿಂಗ್ ಕಮಾಂಡರ್ ತರೀನ್, ಏರ್‌ಫೋರ್ಸ್ ನಿವೃತ್ತ ಫ್ಲೈಟ್ ಲೆಫ್ಟಿನೆಂಟ್ ಬಿ.ಎಂ.ಕಾಮತ್, ಪ್ರೊ.ದುರಾನಿ, ಪ್ರೊ.ಅನಿಸಾ, ಮೊಹಮ್ಮದ್ ಸೇಠ್, ಅಶ್ರಫ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕೇಂದ್ರ ಸರ್ಕಾರದಿಂದ ವಾಯು ಗುಣಮಟ್ಟ ಸೂಚ್ಯಂಕ ಬಿಡುಗಡೆ

ಚಾಮರಾಜನಗರ ಉತ್ತಮ ಸ್ಥಿತಿ; ಮೈಸೂರು, ಮಡಿಕೇರಿ ತೃಪ್ತಿದಾಯಕ

ಮೈಸೂರು, ನ.18(ಬಿಎಲ್‌ಯು)– ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ದೇಶದ ಪ್ರಮುಖ ನಗರಗಳ ವಾಯು ಗುಣಮಟ್ಟ ಸೂಚ್ಯಂಕ (ಏರ್ ಕ್ವಾಲಿಟಿ ಇಂಡೆಕ್ಸ್) ಬಿಡುಗಡೆ ಮಾಡಿದ್ದು, ಚಾಮರಾಜನಗರದ ವಾಯು ಗುಣಮಟ್ಟ ಉತ್ತಮವಾಗಿದೆ ಎಂದು ಘೋಷಿಸಿದ್ದರೆ, ಮೈಸೂರಿನ ವಾಯು ಗುಣಮಟ್ಟ ತೃಪ್ತಿದಾಯಕವಾಗಿದೆ ಎಂದು ತಿಳಿಸಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯು ಮಾಲಿನ್ಯ ಸಂಪೂರ್ಣ ಹದಗೆಟ್ಟು ಗ್ಯಾಸ್ ಚೇಂಬರ್‌ನಂತಾಗಿರುವ ಹಿನ್ನೆಲೆ ಕೇಂದ್ರ ಸರ್ಕಾರದ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ದೇಶದ ಪ್ರಮುಖ ನಗರಗಳ ವಾಯುಮಾಲಿನ್ಯದ ಬಗ್ಗೆ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿ ಸೂಚ್ಯಂಕ ನೀಡಿದೆ. ಅದರಂತೆ ಮೈಸೂರು, ಮಡಿಕೇರಿ ವಾಯು ತೃಪ್ತಿದಾಯಕವಾಗಿದೆ. ಬಂಡಿಪುರ, ಬಿಳಿಗಿರಿರಂಗನ ಬೆಟ್ಟ ಅರಣ್ಯ ಪ್ರದೇಶ ಆವರಿಸಿರುವ ಚಾಮರಾಜನಗರದ ವಾಯು ಗುಣಮಟ್ಟ ಉತ್ತಮವಾಗಿದೆ ಎಂದು ಹೇಳಿದೆ. ಆದರೆ ಹಾಸನ ಮತ್ತು ಮಂಡ್ಯದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

ಶಾಸಕ ಶ್ರೀವತ್ಸ ಅವರಿಗೆ ಅಭಿನಂದನೆ



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ನೂತನ ಶಾಸಕರ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀವತ್ಸ ಅವರು ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದ ಭಾವ ಚಿತ್ರವನ್ನು ಬಿಜೆಪಿ ಮುಖಂಡ ಎನ್.ಪ್ರದೀಪ್‌ಕುಮಾರ್ ನೀಡಿ ಅಭಿನಂದಿಸಿದರು. ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾದ ಜೈರಾಮ್, ಟಿ.ಎಸ್.ಅರುಣ್, ಕಿಶೋರ್, ಆದಿತ್ಯ ಕೀರ್ತಿ, ಮಂಜು, ಶಶಿ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಕನಕ ಸೇವಾರತ್ನ ಪ್ರಶಸ್ತಿ ಪ್ರದಾನ



ಮೈಸೂರಿನ ಭಾರತಿ ವೃದ್ಧಾಶ್ರಮದಲ್ಲಿ ಎಸ್.ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗದ ವತಿಯಿಂದ ಕನಕದಾಸರ ಜಯಂತಿ ಅಂಗವಾಗಿ ವೃದ್ಧಾಶ್ರಮದ ಹಿರಿಯರಿಗೆ ಹಣ್ಣು ಹಂಪಲು ವಿತರಿಸಲಾಯಿತು. ನಂತರ ವಿವಿಧ ಕ್ಷೇತ್ರದ ಸಾಧಕರಾದ ಶಾಂತಮ್ಮ (ಸಾಮಾಜಿಕ), ಬಸವರಾಜ್ (ಬಸಪ್ಪ) (ಸಹಕಾರಿ), ಗಿರೀಶ್ (ವೈದ್ಯಕೀಯ), ವೀರಭದ್ರ ಸ್ವಾಮಿ (ಸಂಘಟನಾ), ಮಂಜೇಶ್ ಮೌರ್ಯ (ಸಾಮಾಜಿಕ), ಸತೀಶ್ ಮೈತ್ರಿ (ಸಮಾಜ ಸೇವೆ) ಅವರಿಗೆ ಶ್ರೀ ಕನಕ ಸೇವಾರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇಳೈಆಳ್ವಾರ್ ಸ್ವಾಮೀಜಿ, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಅಲೋಕ್ ಜೈನ್, ಸುಚೇಂದ್ರ, ಮಹಾನ್ ಶ್ರೇಯಸ್, ಹೋಮದೇವ್, ಪದ್ಮಾವತಿ, ಛಾಯಾ, ಯಶ್ವಂತ್ ಕುಮಾರ್, ರಾಜೇಶ್ ಕುಮಾರ್, ಮಹೇಶ್, ಶ್ರೀಧರ್, ಎಸ್.ಪಿ.ಅಕ್ಷಯ್ ಪ್ರಿಯಾದರ್ಶನ, ಹರ್ಷಿತ್ ಎಸ್ ನಾಗೇಶ್, ಪುನೀತ್ ಇನ್ನಿತರರು ಹಾಜರಿದ್ದರು.

ಮೈಸೂರು ಶಾರದಾ ವಿಲಾಸ ಪಿಯು ಕಾಲೇಜಿನಲ್ಲಿ ಕನಕದಾಸರ ಜಯಂತಿ



ಶಾರದಾ ವಿಲಾಸ ಪಿಯು ಕಾಲೇಜಿನಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು.

ಮೈಸೂರು, ನ.18–ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನಲ್ಲಿ ಸಂತ ಕನಕದಾಸರ 537ನೇ ಜಯಂತ್ಯುತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ ಕುಮಾರ್, ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸಾರ್ವಕಾಲಿಕ ಸತ್ಯವನ್ನು ಸಾರಿದ ಮಹಾನ್ ಶ್ರೇಷ್ಠ ಭಕ್ತರು ಕನಕದಾಸರು. ಭಕ್ತಿಯ ಪರಾಕಾಷ್ಠೆಯನ್ನು ಮೆರೆದ ಸಂತರಲ್ಲಿ ಕನಕದಾಸರು ಮೊದಲಿಗರು. ಕನಕದಾಸರು ಹರಿದಾಸ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು. ಅಂದಿನ ಕಾಲದಲ್ಲಿಯೇ ಜಾತಿ, ಮೂಢನಂಬಿಕೆ ಹೋಗಲಾಡಿಸಲು ಕೀರ್ತನೆಗಳ ಮೂಲಕ ಜಾಗೃತಿ ಮೂಡಿಸಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಕಾಲೇಜಿನ ಕನ್ನಡ ಉಪನ್ಯಾಸಕ ರಾಜೇಂದ್ರಪ್ರಸಾದ್ ಹೊನ್ನಲಗೆರೆ ಮಾತನಾಡಿ, ಕನಕದಾಸರು ರಚಿಸಿದ ರಾಮಧಾನ್ಯ ಚರಿತೆ, ಹರಿಭಕ್ತಿ ಸಾರ, ಮೋಹನ ತರಂಗಿಣಿ, ನಳ ಚರಿತೆ ಎಂದೆಂದಿಗೂ ಅಮರವಾದ ಅನನ್ಯ ಕೃತಿಗಳು ಎಂದು ಸಮಾಜದಲ್ಲಿ ಸಮಾನತೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಕನಕದಾಸರು ಕುಲವನ್ನು ಖಂಡಿಸುವಲ್ಲಿ ಬಸವೇಶ್ವರರು ಹಾಗೂ ಸರ್ವಜ್ಞರಷ್ಟೇ ಧೈರ್ಯವನ್ನು ತೋರಿಸಿದ್ದಾರೆ. ಕುಲಾಚಾರವನ್ನು ಮಾಡುವ ಹೀನ ಮನಸ್ಸಿನವರಿಗೆ ಕುಲ ಕುಲವೆಂದು ಹೊಡೆದಾಡದಿರಿ ಎಂದು ಎಚ್ಚರಿಸಿದ್ದಾರೆ ಎಂದು ತಿಳಿಸಿದರು.

ಹಿರಿಯ ಉಪನ್ಯಾಸಕರಾದ ಜಿ.ವೆಂಕಟರಾಮು, ಶಿಲ್ಪ, ಡಾ.ಡಿ.ಸಿ.ಉಮೇಶ್, ಡಾ.ಲಾವಣ್ಯ, ಮುಷೀರ್, ಪ್ರವೀಣ್ ಕುಮಾರ್, ವಿಂದ್ಯಾ ಬಿ.ಪ್ರಸಾದ್, ಮಧುರ, ಶಶಿಕಲಾ, ಪ್ರವೀಣ್ ಕುಮಾರ್, ಹೆಗಡೆ, ದೀಪಿಕ, ಭೂಮಿಕಾ, ಮಂಜುನಾಥ್, ಪ್ರಕಾಶ್ ಇತರರು ಉಪಸ್ಥಿತರಿದ್ದರು.

ಮಾಜಿ ಶಾಸಕ ಅಶ್ವಿನ್‌ಕುಮಾರ್‌ಗೆ ಹುಟ್ಟುಹಬ್ಬದ ಶುಭ ಹಾರೈಕೆ



ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಎಂ.ಅಶ್ವಿನ್‌ಕುಮಾರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ದಿವಂಗತ ಚನ್ನಿಗಪ್ಪನವರ ಹಿರಿಯ ಪುತ್ರ ಅರುಣ್‌ಕುಮಾರ್ ಡಿ.ಸಿ., ಜೆಡಿಎಸ್ ಮುಖಂಡರಾದ ನಾಡನಹಳ್ಳಿ ಕೆ.ಸಿದ್ದರಾಜು, ಮಹೇಶ್ ಗೌಡ, ನಿಶಾಂತ್ (ದಾಸ), ರವಿ, ದಿಲೀಪ, ಚಂದ್ರ (ಗೂಳಿ) ಅಭಿನಂದಿಸಿ, ಶುಭಾಶಯ ಕೋರಿದರು.

ದಾಸ ಶ್ರೇಷ್ಠ ಭಕ್ತ ಕನಕದಾಸರ 537ನೇ ಜಯಂತ್ಯುತ್ಸವ



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ದಾಸ ಶ್ರೇಷ್ಠ ಭಕ್ತ ಕನಕದಾಸರ 537ನೇ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಮೈಸೂರು ನಗರ ಮಹಿಳಾ ಘಟಕದ ಅಧ್ಯಕ್ಷರಾದ ಪ್ರೇಮಾ ಶಂಕರೇಗೌಡ, ಜಿಲ್ಲಾಧ್ಯಕ್ಷರಾದ ದಾಕ್ಷಾಯಿಣಿ, ಹಿರಿಯ ಮುಖಂಡರಾದ ಎಚ್.ಕೆ. ರಮೇಶ್, ಮಾಜಿ ಮಹಾಪೌರರಾದ ಕೃಷ್ಣ, ಹಿರಿಯ ಉಪಾಧ್ಯಕ್ಷರಾದ ಫಾಲ್ಕನ್ ಬೋರೇಗೌಡ, ನಗರ ಹಿಂದುಳಿದ ವರ್ಗದ ಅಧ್ಯಕ್ಷ ಕುಮಾರ್, ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಮಧುವನ ಚಂದ್ರು, ನರಸಿಂಹರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷರಾದ ಎಂ.ಎನ್. ರಾಮು, ರಿಜ್ವಾನ್, ಚಾಮರಾಜ ಮಹಿಳಾ ಘಟಕದ ಅಧ್ಯಕ್ಷರಾದ ಲಕ್ಷ್ಮಿ, ಮುಖಂಡರಾದ ಶೇಖರ್, ಆನಂದ್, ಬಬಿತಾ, ನಾಗರಾಜ್, ಚಿಕ್ಕತಾಯಮ್ಮ ಇನ್ನಿತರರು ಉಪಸ್ಥಿತರಿದ್ದರು.

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್, ಶೂಸ್ ಭಾರಿ ರಿಯಾಯಿತಿ ಮಾರಾಟ




ಮೈಸೂರು: ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್ಸ್‌ಗಳ ಮೇಲೆ ಭಾರಿ ರಿಯಾಯಿತಿ ಮಾರಾಟವನ್ನು ಮೈಸೂರು ನಗರದ ವಿನೋಬಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದಲ್ಲಿ ಏರ್ಪಡಿಸಲಾಗಿದೆ. ಬ್ರಾಂಡೆಡ್ ಫುಟ್‌ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್ಸ್, ಜಾಕೆಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್ಸ್, ಬೆಲ್ಟ್‌ಗಳು ಲಭ್ಯವಿದೆ.

ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರ್ಯಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಲಭ್ಯವಿದೆ.

ಬ್ರ್ಯಾಂಡೆಡ್ ಅಡಿದಾಸ್, ನೈಕಿ, ಪ್ಯೂಮಾ, ರೋಡ್ ಸ್ಟಾರ್, ರೀಬಾಕ್, ಎಚ್‌ಆರ್‌ಎಕ್ಸ್ ವಾನ್ಸ್, ಯುಸಿಬಿ, ಮಸ್ತ್ ಅಂಡ್ ಹರ್ಬರ್, ಲೊಟ್ಟೊ, ಸಹಿತ ವಿವಿಧ ಕಂಪನಿಗಳ ಉತ್ಪನ್ನಗಳು ಸಹ ಭಾರಿ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದೆ. ಪ್ರತಿದಿನ ಬೆಳಗ್ಗೆ 10.30ರಿಂದ ರಾತ್ರಿ 9.30 ರವರೆಗೆ ಪ್ರದರ್ಶನ ಮಾರಾಟವಿದೆ.

ಕೇಂದ್ರ ಸಚಿವ ಕುಮಾರಸ್ವಾಮಿ ಬಗ್ಗೆ ಜಮೀರ್ ಹೇಳಿಕೆ ಒಪ್ಪುವಂತಹದ್ದಲ್ಲ

ಮಾಜಿ ಸಿಎಂ ಬೊಮ್ಮಾಯಿ ಪ್ರತಿಕ್ರಿಯೆ



ಬೆಂಗಳೂರು, ನ.18(ಕೆಎಂಶಿ)–ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಕುರಿತು ವಸತಿ ಸಚಿವ ಜಮೀರ್ ಅಹಮದ್ ಖಾನ್ ನೀಡಿರುವ ಹೇಳಿಕೆ ನಾಗರಿಕ ಸಮಾಜ ಒಪ್ಪುವಂತಹದ್ದಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲರಿಗೂ ಗೌರವ ಎಂಬುದು ಇರುತ್ತದೆ. ಶ್ರೀಮಂತನಿರಲಿ, ಬಡವನಿರಲಿ ಯಾರೂ ಯಾರನ್ನೂ ಕೊಂಡುಕೊಳ್ಳಲು ಆಗುವುದಿಲ್ಲ, ಇದರ ಅರಿವು ಇರುವವರು ಯಾರೂ ಹೀಗೆ ಮಾತನಾಡುವುದಿಲ್ಲ ಎಂದರು. ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಮಾಡಿದ್ದ ಶೇಕಡ 40 ಕಮೀಷನ್ ಆರೋಪ ಕುರಿತ ಲೋಕಾಯುಕ್ತ ವರದಿ ಬಗ್ಗೆ ಮಾತನಾಡುವುದಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಉಪಚುನಾವಣೆ ಫಲಿತಾಂಶ ನಂತರ ನಾನು ಮಾತನಾಡುತ್ತೇನೆ ಎಂದರು.

ಶೇಕಡ 40 ಕಮೀಷನ್ ಆರೋಪದಲ್ಲಿ ಯಾವುದು ಸತ್ಯ, ಯಾವುದು ಅಸತ್ಯ ಎಂಬ ಬಗ್ಗೆ ನವೆಂಬರ್ 23ರ ನಂತರ ನಾನು ಮಾತನಾಡುತ್ತೇನೆ. ಬಿಜೆಪಿ ಆಡಳಿತ ವೇಳೆಯಲ್ಲಿನ ವಿಷಯಗಳ ತನಿಖೆಗೆ ಕಾಂಗ್ರೆಸ್ ಸರ್ಕಾರ ಮುಂದಾಗಿರುವ ಕುರಿತು ಉಪಚುನಾವಣಾ ಫಲಿತಾಂಶದ ನಂತರ ಪ್ರತಿಕ್ರಿಯಿಸುವೆ ಎಂದು ಪುನರುಚ್ಚರಿಸಿದರು.

ಕರ್ನಾಟಕ ಸುವರ್ಣ ರಾಜ್ಯೋತ್ಸವ: 'ಅಭಿರುಚಿ ಸುವರ್ಣ ರತ್ನ ಪ್ರಶಸ್ತಿ' ಪ್ರದಾನ

ಮೈಸೂರು,ನ.18–ನಗರದ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ಸಂಯುಕ್ತ ಆಶ್ರಯದಲ್ಲಿ ಡಿ.1ರಂದು ನಮನ ಕಲಾ ಮಂಟಪದಲ್ಲಿ ಬೆಳಗ್ಗೆ 10ರಿಂದ ಸಂಜೆ 6.00ವರೆಗೆ ಸಾಹಿತ್ಯೋತ್ಸವ ಕಾರ್ಯಕ್ರಮ ಜರುಗಲಿದೆ.

ಪ್ರಶಸ್ತಿ ವಿಜೇತರು: ಇದೇ ವೇಳೆ ಸ್ಮೈಲ್ ಶಿವು, ಬೆಂಗಳೂರು–ಚಲನಚಿತ್ರ ಹಾಗೂ ರಂಗಭೂಮಿ ಕಲಾವಿದರು; ಅಂಶಿ ಪ್ರಸನ್ನ ಕುಮಾರ್, ಕಾರ್ಯನಿರ್ವಾಹಕ ಸಂಪಾದಕ, ಕನ್ನಡಪ್ರಭ, ಮೈಸೂರು; ಮಡ್ಡೀಕೆರೆ ಗೋಪಾಲ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಮೈಸೂರು; ಚಂದ್ರಶೇಖರ ಸಿರಿಗಂಧ, ಬೆಂಗಳೂರು– ಪರಿಸರ ಸಂರಕ್ಷಕರು; ವೈಲೇಶ್, ಕೊಡಗು–ಕನ್ನಡ ಸಾಹಿತ್ಯ ಪ್ರೇಮಿ; ಬಿ.ಎನ್.ಸೌಮ್ಯ ಕೋಠಿ, ಆಧ್ಯಾತ್ಮಿಕ ಚಿಂತಕರು, ಮೈಸೂರು; ಶ್ರೀಕಂಠಯ್ಯ ಅರಳಿಕಟ್ಟೆಮಠ, ಸಮಾಜ ಸೇವೆ, ಕೊಪ್ಪಳ; ಸಂತೋಷ್ ಜಾಧವ್, ಲೇಖಕರು, ಭದ್ರಾವತಿ; ಗಿರಿಮಲ್ಲಪ್ಪ ಹನುಮಂತಪ್ಪ ಪೂಜಾರಿ, ಮುಧೋಳ– ಚಿತ್ರ ಕಲಾವಿದರು; ಅನಿಲ್‌ರಾಜ, ಶಿಕ್ಷಣ ಹಾಗೂ ಸಾಹಿತ್ಯ, ಮೈಸೂರು ಇವರಿಗೆ ಅಂದು ಸಂಜೆ 4 ಗಂಟೆಗೆ 'ಅಭಿರುಚಿ ಸುವರ್ಣ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಅಭಿರುಚಿ ಬಳಗ ಹಾಗೂ ಆಸಕ್ತಿ ಪ್ರಕಾಶನದ ಅಧ್ಯಕ್ಷ ಎನ್.ವಿ.ರಮೇಶ್ ತಿಳಿಸಿದ್ದಾರೆ.

ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಜ್ಞಾನೋದಯ ಪಬ್ಲಿಕ್ ಶಾಲೆಯ ಸಾಧನೆ



ಮೈಸೂರಿನ ಟೆರೇಷಿಯನ್ ಕಾಲೇಜಿನಲ್ಲಿ ನಡೆದ 27ನೇ ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಜ್ಞಾನೋದಯ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ಖುಷಿ. ಸಿ.ವಿ., ಅನ್ನಪೂರ್ಣ ಎಸ್., ಎಂ.ಸ್ಕಂದ, ಐ.ಕೆ.ಸಿದ್ದಾರ್ಥ, ಎಸ್.ಲಿಕಿತ್, ಡಿ.ಎನ್.ದೈವಿಕ್, ಡಿ.ಸೂರ್ಯ, ಯಶಸ್‌ಗೌಡ, ಅಚಿಂತ್ಯಾ, ಲಕ್ಷ್ಮೀಶ್, ಮೌರ್ಯ, ಗೋಕುಲ್ ಸಾಯಿ ಪದಕ, ಟ್ರೋಫಿ ಜಯಿಸಿದ್ದಾರೆ.

ದೇಶ - ವಿದೇಶ

ರಹಸ್ಯವಾಗಿ ಇರಾನ್ ಸರ್ವೋಚ್ಚ ನಾಯಕನ ಉತ್ತರಾಧಿಕಾರಿ ಆಯ್ಕೆ



ಇರಾನ್: ಇರಾನ್ ತನ್ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯನ್ನು ರಹಸ್ಯವಾಗಿ ಆಯ್ಕೆ ಮಾಡಿದೆ. ಅನಾರೋಗ್ಯದಿಂದ ಬಳಲುತ್ತಿರುವ 85 ವರ್ಷದ ಅಲಿ ಖಮೇನಿ ಅವರ ಎರಡನೇ ಪುತ್ರ ಮೊಜ್ತಾಬಾ ಖಮೇನಿ ಅವರು ಟೆಹ್ರಾನ್‌ನಲ್ಲಿ ದೇಶದ ಮುಂದಿನ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ. ಇಸ್ರೇಲ್‌ನೊಂದಿಗಿನ ಉದ್ವಿಗ್ನತೆ ಮತ್ತು ಯುದ್ಧದ ಅಪಾಯದ ಮಧ್ಯೆ ಇರಾನ್ ಈ ವರ್ಷ ನಾಯಕತ್ವದಲ್ಲಿ ಪ್ರಮುಖ ಬದಲಾವಣೆಯನ್ನು ಕಾಣುವ ಸಾಧ್ಯತೆಯಿದೆ. ಪರ್ಷಿಯನ್ ಭಾಷೆಯ ಅಂತಾರಾಷ್ಟ್ರೀಯ ಮಾಧ್ಯಮ ಸಂಸ್ಥೆ ಇರಾನ್ ಇಂಟರ್‌ನ್ಯಾಷನಲ್ ತನ್ನ ವರದಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದೆ. ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಇರಾನ್‌ನ ಸರ್ವೋಚ್ಚ ನಾಯಕ ಸಾವಿಗೆ ಮುನ್ನ ಅಧಿಕಾರದಿಂದ ಕೆಳಗಿಳಿಯಬಹುದು. ಅಲಿ ಖಮೇನಿ ಅವರ ಬೇಡಿಕೆಯ ಮೇರೆಗೆ ಇರಾನ್‌ನ ತಜ್ಞರ ಅಸೆಂಬ್ಲಿಯ 60 ಸದಸ್ಯರು ಸೆ.26ರಂದು ಸಭೆ ಸೇರಿದ್ದರು. ಈ ಸಭೆಯಲ್ಲಿ ಯಾವುದೇ ಪೂರ್ವ ಸೂಚನೆ ನೀಡದೆ ಗೌಪ್ಯತೆಯಡಿಯಲ್ಲಿ ತಕ್ಷಣವೇ ಉತ್ತರಾಧಿಕಾರಿಯನ್ನು ನಿರ್ಧರಿಸುವಂತೆ ಸದಸ್ಯರಿಗೆ ಸೂಚಿಸಲಾಯಿತು.

ಆಪ್ ತೊರೆದ ಮರುದಿನವೇ ಬಿಜೆಪಿ ಸೇರ್ಪಡೆಯಾದ ಕೈಲಾಶ್ ಗಹ್ಲೋಟ್



ನವದೆಹಲಿ: ನಿನ್ನೆಯಷ್ಟೇ ಆಪ್‌ಗೆ ರಾಜೀನಾಮೆ ನೀಡಿದ್ದ ದೆಹಲಿ ಸಚಿವರಾಗಿದ್ದ ಕೈಲಾಶ್ ಗಹ್ಲೋಟ್ ಮರುದಿನ (ಇಂದು) ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರ ವಿರುದ್ಧ ಹಲವು ಬಾರಿ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ದಾಳಿಗಳ ನಂತರ ಒತ್ತಡಕ್ಕೆ ಒಳಗಾದ ಗಹ್ಲೋಟ್ ಅವರು ಆಪ್ ತೊರೆದು ಬಿಜೆಪಿ ಸೇರದೆ ಬೇರೆ ದಾರಿ ಇರಲಿಲ್ಲ ಎಂದು ಎಎಪಿ ಆರೋಪಿಸಿದೆ. ಕೈಲಾಶ್ ಗಹ್ಲೋಟ್ ಈ ಆರೋಪವನ್ನು ಅಲ್ಲಗಳೆದಿದ್ದಾರೆ.

ನಾನು ಇಂದು ಬಿಜೆಪಿ ಸೇರಿದ್ದೇನೆ. ಇದು ನನಗೆ ಸುಲಭದ ನಿರ್ಧಾರವಾಗಿರಲಿಲ್ಲ. ಅಣ್ಣಾ ಹಜಾರೆಯವರ ಕಾಲದಿಂದಲೂ ನಾನು ಆಪ್ ಮತ್ತು ದೆಹಲಿಯ ಜನರಿಗಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಈ ನಿರ್ಧಾರವನ್ನು ಒತ್ತಡದಲ್ಲಿ ತೆಗೆದುಕೊಂಡಿದ್ದೇನೆ ಎಂದು ಕೆಲವರು ಭಾವಿಸಬಹುದು, ಆದರೆ ನಾನು ಯಾರ ಒತ್ತಡಕ್ಕೂ ಒಳಗಾಗಿ ಏನನ್ನೂ ಮಾಡಿಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ ಎಂದು ಗಹ್ಲೋಟ್ ಹೇಳಿದ್ದಾರೆ. ಮುಂದಿನ ವರ್ಷ ದೆಹಲಿ ವಿಧಾನಸಭೆ ಚುನಾವಣೆಗೆ ಮುನ್ನ ದೊಡ್ಡ ಆಘಾತ ಎದುರಿಸುತ್ತಿರುವ ಎಎಪಿ, ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಒತ್ತಡ ಹೇರುವ ಮೂಲಕ ಬಿಜೆಪಿ ತಮ್ಮ ನಾಯಕರ ವಿರುದ್ಧ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿದೆ.

ರಷ್ಯಾ ವಿರುದ್ಧ ಯುಎಸ್ ಶಸ್ತ್ರಾಸ್ತ್ರ ಬಳಕೆಗೆ ಉಕ್ರೇನ್‌ಗೆ ಅನುಮತಿ ನೀಡಿದ ಬೈಡನ್



ಅಮೆರಿಕಾ: ಅಮೆರಿಕಾ ಅಧ್ಯಕ್ಷ ಜೋ ಬೈಡೆನ್ ನಿರ್ಗಮಿಸುವುದಕ್ಕೂ ಮುನ್ನ ದೊಡ್ಡ ನಿರ್ಧಾರ ಕೈಗೊಂಡಿದ್ದು, ರಷ್ಯಾದ ಮೇಲೆ ದಾಳಿ ಮಾಡಲು ಅಮೆರಿಕ ನೀಡಿದ ದೂರಗಾಮಿ ಕ್ಷಿಪಣಿಗಳನ್ನು ಬಳಸಲು ಯುಎಸ್ ಅಧ್ಯಕ್ಷ ಜೋ ಬೈಡನ್ ಮೊದಲ ಬಾರಿಗೆ ಉಕ್ರೇನ್‌ಗೆ ಅನುಮತಿ ನೀಡಿದರು. ಬೈಡನ್ ತೆಗೆದುಕೊಂಡ ಈ ನಿರ್ಧಾರವು ಅಮೆರಿಕಾ ನೀತಿಯಲ್ಲಿ ಪ್ರಮುಖ ಬದಲಾವಣೆಯಾಗಿದೆ.


ಪ್ರಸ್ತುತ ಅಧ್ಯಕ್ಷ ಬೈಡನ್ ಅವರ ಅಧಿಕಾರಾವಧಿಯು ಕೊನೆಗೊಳ್ಳುವ ಸಮಯದಲ್ಲಿ ಈ ನಿರ್ಧಾರವು ಹೊರಬಿದ್ದಿದೆ. ಅಧ್ಯಕ್ಷರಾಗಿ ಚುನಾಯಿತರಾದ ಡೊನಾಲ್ಡ್ ಟ್ರಂಪ್ ಈಗಾಗಲೇ ಯುಎಸ್ ಬೆಂಬಲವನ್ನು ಉಕ್ರೇನ್‌ಗೆ ಸೀಮಿತಗೊಳಿಸುವ ಮತ್ತು ಸಾಧ್ಯವಾದಷ್ಟು ಬೇಗ ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಮಾತನಾಡಿದ್ದಾರೆ. ಮೂಲಗಳ ಪ್ರಕಾರ ಉಕ್ರೇನ್ ಮೇಲೆ ದಾಳಿ ಮಾಡುವ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿರ್ಧಾರವನ್ನು ಬೆಂಬಲಿಸಲು ಉತ್ತರ ಕೊರಿಯಾ ಸಾವಿರಾರು ಸೈನಿಕರನ್ನು ರಷ್ಯಾಕ್ಕೆ ಕಳುಹಿಸಲು ನಿರ್ಧರಿಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಈ ಕ್ಷಿಪಣಿಗಳನ್ನು ಬಳಸಲು ನಿರ್ಧರಿಸಲಾಗಿದೆ.

ಸತ್ಯ ಹೊರಬರುತ್ತಿದೆ: ಸಬರಮತಿ ವರದಿ ಸಿನಿಮಾ ಹೊಗಳಿದ ಮೋದಿ



ನವದೆಹಲಿ: ಇತ್ತೀಚೆಗಷ್ಟೇ ಬಿಡುಗಡೆಯಾದ 'ಸಬರಮತಿ ವರದಿ' ಸಿನಿಮಾವನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಸಿನಿಮಾ ಬಗ್ಗೆ ಟ್ವೀಟ್ ಮಾಡಿರುವ ಮೋದಿ, ಈ ಸತ್ಯ ಹೊರಬರುತ್ತಿರುವುದು ಸಂತಸ ತಂದಿದೆ ಎಂದು ಹೇಳಿದ್ದಾರೆ. ಚೆನ್ನಾಗಿ ಹೇಳಿದ್ದೀರಿ. ಈ ಸತ್ಯ ಹೊರಬರುವುದು ಒಳ್ಳೆಯದು ಮತ್ತು ಸಾಮಾನ್ಯ ಜನರು ಅದನ್ನು ನೋಡುವ ರೀತಿಯಲ್ಲಿ ಸತ್ಯ ಹೊರಬರುತ್ತಿದೆ. ನಕಲಿ ನಿರೂಪಣೆಯು ಸೀಮಿತ ಅವಧಿಯವರೆಗೆ ಮಾತ್ರ ಉಳಿಯಬಹುದು. ಅಂತಿಮವಾಗಿ ಸತ್ಯಗಳು ಯಾವಾಗಲೂ ಹೊರಬರುತ್ತವೆ ಎಂದು ಮೋದಿ ಹೇಳಿದ್ದಾರೆ. 2002ರಲ್ಲಿ ಗೋಧ್ರಾ ರೈಲು ದುರಂತಕ್ಕೆ ಕಾರಣವಾದ ಘಟನೆಗಳ ಮೇಲೆ ಈ ಸಿನಿಮಾ ಕೇಂದ್ರೀಕೃತವಾಗಿದೆ. ಈ ಘಟನೆಯನ್ನು ಪಟ್ಟಭದ್ರ ಹಿತಾಸಕ್ತಿ ಗುಂಪು ರಾಜಕೀಯಗೊಳಿಸಿದ್ದು, ಇದನ್ನು ಒಬ್ಬ ನಾಯಕನ ಪ್ರತಿಷ್ಠೆಗೆ ಕಳಂಕ ತರುವ ಅವಕಾಶವಾಗಿ ಬಳಸಿಕೊಂಡಿದೆ ಎಂದು ಮೋದಿ ಹೇಳಿದ್ದಾರೆ. ಧೀರಜ್ ಸರ್ನಾ ನಿರ್ದೇಶನದ ಈ ಚಿತ್ರವು 2002ರ ದುರಂತದ ಕಥೆಯನ್ನು ಹೇಳುತ್ತದೆ. ವಿಕ್ರಾಂತ್ ಮಾಸ್ಸೆ ನಟಿಸಿರುವ ಈ ಚಿತ್ರ ನವೆಂಬರ್ 15ರಂದು ಬಿಡುಗಡೆಯಾಯಿತು.

ರೈಲಿನ ಊಟದಲ್ಲಿ ಹುಳ ಪತ್ತೆ: ಸಿಬ್ಬಂದಿಗೆ 50 ಸಾವಿರ ರೂ. ದಂಡ



ಚೆನ್ನೈ: ದೇಶದ ಪ್ರತಿಷ್ಠಿತ ರೈಲು ಸೇವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಊಟದಲ್ಲಿ ಹುಳು ಪತ್ತೆಯಾದ ಹಿನ್ನೆಲೆಯಲ್ಲಿ ರೈಲ್ವೇ ಇಲಾಖೆ ಕೇಟರಿಂಗ್ ಸಿಬ್ಬಂದಿಗೆ ಬರೋಬ್ಬರಿ 50 ಸಾವಿರ ರೂ. ದಂಡ ವಿಧಿಸಿದೆ. ತಮಿಳುನಾಡಿನ ತಿರುನಲ್ವೇಲಿ ಜಂಕ್ಷನ್‌ನಿಂದ ಚೆನ್ನೈ ಎಗ್ಮೋರ್‌ಗೆ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕನೊಬ್ಬ ರೈಲಿನಲ್ಲಿ ಬಡಿಸಿದ ಸಾಂಬಾರ್‌ನಲ್ಲಿ ಹುಳ ಬಿದ್ದ ಬಗ್ಗೆ ದೂರು ಸಲ್ಲಿಸಿದ್ದು ಮಾತ್ರವಲ್ಲದೆ, ಕಲುಷಿತ ಆಹಾರದ ದೃಶ್ಯಗಳನ್ನು ಫೋಟೋ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದ್ದಾರೆ. ವಿಚಾರ ಗಮನಿಸಿದ ಕಾಂಗ್ರೆಸ್ ಸಂಸದ ಮಾಣಿಕಂ ಟ್ಯಾಗೋರ್, ಪ್ರೀಮಿಯಂ ರೈಲುಗಳಲ್ಲಿ ಆಹಾರ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದರು. ಪೋಸ್ಟ್ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಪರ–ವಿರೋಧ ಚರ್ಚೆಗೆ ಕಾರಣವಾಗುತ್ತಿದ್ದಂತೆಯೇ ಎಚ್ಚೆತ್ತ ದಕ್ಷಿಣ ರೈಲ್ವೆಯ ಅಧಿಕೃತ ಎಕ್ಸ್ ಹ್ಯಾಂಡಲ್, ಕಲುಷಿತ ಆಹಾರದ ಬಗ್ಗೆ ಸ್ಪಷ್ಟೀಕರಣ ನೀಡಿದೆ. ರೈಲ್ವೆಯು ಆಹಾರದ ಮಾದರಿಗಳನ್ನು ಸಂಗ್ರಹಿಸಿ, ಮಾಲಿನ್ಯದ ಮೂಲವನ್ನು ಗುರುತಿಸಲು ಪರೀಕ್ಷೆಗೆ ಕಳುಹಿಸಿದ್ದಲ್ಲದೆ, ಅಡುಗೆ ಮಾಡುವವರಿಗೆ 50,000 ರೂ. ದಂಡ ವಿಧಿಸಿದೆ ಎಂದು ಹೇಳಿದೆ.

ಮೈಸೂರು ಮಿತ್ರ

ಹವಾಮಾನ ವೈಪರಿತ್ಯದಿಂದ ಕಾಫಿ ಉತ್ಪಾದನೆ ಕುಂಠಿತ

ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಮ್ಯಾಥ್ಯೂ ಅಬ್ರಾಹಂ ಆತಂಕ

ಮಡಿಕೇರಿ, ನ.18–ಕಾಫಿ ಬೆಳೆಗೆ ಮುಂದಿನ 3 ವರ್ಷ ಅತ್ಯುತ್ತಮ ಬೆಲೆ ನಿರೀಕ್ಷಿಸಬಹುದು. ಆದರೆ, ಚಂಡ ಮಾರುತ, ಅಕಾಲಿಕ ಮಳೆ ಸೇರಿದಂತೆ ಹವಾಮಾನ ವೈಪರಿತ್ಯದಿಂದಾಗಿ ಕಾಫಿ ಉತ್ಪಾದನೆ ನಿರೀಕ್ಷೆಗೂ ಮೀರಿ ಕಡಿಮೆಯಾಗುತ್ತಿದೆ ಎಂದು ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಮ್ಯಾಥ್ಯೂ ಅಬ್ರಾಹಂ ಆತಂಕ ವ್ಯಕ್ತಪಡಿಸಿದರು.

ನಗರದ ಹೊರವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ 66ನೇ ವಾರ್ಷಿಕ ಸಮ್ಮೇಳನ ಆಯೋಜನೆ ಸಂಬಂಧ ಮಾತನಾಡಿದ ಅವರು, ಕಾರ್ಮಿಕರನ್ನೇ ನಂಬಿರುವ ಕಾಫಿ ಉದ್ಯಮ ಇಂದು ಕವಲು ದಾರಿಯಲ್ಲಿದೆ. ಅಕಾಲಿಕ ಮಳೆ ಹಾಗೂ ಕಾರ್ಮಿಕರ ಅಲಭ್ಯತೆ ಹಿನ್ನೆಲೆಯಲ್ಲಿ ಕಾಫಿ ಬೆಳೆ ಗುಣಮಟ್ಟ ಕೂಡ ಕುಂಠಿತವಾಗಿದೆ. ಈ ಸವಾಲುಗಳನ್ನು ಎದುರಿಸುವುದೇ ಇಂದಿನ ತುರ್ತು ಅಗತ್ಯವಾಗಿದೆ ಎಂದು ಹೇಳಿದರು.

ಬ್ರೆಜಿಲ್, ಕೊಲಂಬಿಯಾ, ಮೆಕ್ಸಿಕೋದಂತಹ ಜಗತ್ತಿನ ಪ್ರಮುಖ ಕಾಫಿ ಬೆಳೆ ದೇಶದಲ್ಲೂ ಗಣನೀಯವಾಗಿ ಕುಂಠಿತವಾಗಿದೆ. ಹೀಗಾಗಿ ಭಾರತದ ಕಾಫಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಮುಂದಿನ 3 ವರ್ಷಗಳ ಕಾಲ ಉತ್ತಮ ಬೇಡಿಕೆ ಲಭಿಸುವ ಎಲ್ಲಾ ಸಾಧ್ಯತೆಗಳಿದೆ. ಅಕಾಲಿಕ ಮಳೆಯಿಂದಾಗಿ


ಸುದ್ದಿಗೋಷ್ಠಿಯಲ್ಲಿ ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಮ್ಯಾಥ್ಯು ಅಬ್ರಾಹಂ ಮಾತನಾಡಿದರು.

ಭಾರತದಲ್ಲೂ ಕಾಫಿ ಉತ್ಪಾದನೆ ಇಳಿಮುಖವಾಗಲಿದ್ದು, ಇದು ಬೆಳೆಗಾರರ ಪಾಲಿಗೆ ಕಳವಳಕಾರಿ ವಿಚಾರ ಎಂದು ವಿಷಾದಿಸಿದರು.

ಉಪಾಸಿಯ ಕಾಫಿ ಸಮಿತಿ ಅಧ್ಯಕ್ಷ ಸಹದೇವ ಬಾಲಕೃಷ್ಣ ಮಾತನಾಡಿ, ಕಾಫಿಗೆ ಕಳೆದ 4–5 ವರ್ಷಗಳಿಂದ ಸುಸ್ಥಿರ ಬೆಲೆ ಲಭಿಸುತ್ತಿದೆ. ಆದರೆ, ಕಾಫಿ ಕಣ, ಯಂತ್ರೋಪಕರಣಗಳು, ಕಾಫಿ ಉದ್ಯಮಗಳಿಗೆ ಅಗತ್ಯ ಪರಿಕರಗಳನ್ನು ಖರೀದಿಸಲು ಅಗತ್ಯವಾದ ಅಧಿಕ ಆರ್ಥಿಕ ವೆಚ್ಚ ಭರಿಸಲು ಸಾಧ್ಯವಾಗುತ್ತಿಲ್ಲ. 15 ವರ್ಷಗಳಿಂದಲೂ ಕಾಫಿ ಬೆಳೆಗಾರರು, ಉದ್ಯಮಿಗಳು ಕಷ್ಟದ ದಿನಗಳನ್ನೇ ಎದುರಿಸುತ್ತಾ ಬಂದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಕಳ್ಳಿಚಂಡ ರಾಜೀವ್ ಗಣಪತಿ ಮಾತನಾಡಿ, ಕಾಫಿ ಉದ್ಯಮದ ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತ ರೀತಿ ಸಂಶೋಧನೆ ನಡೆಯಬೇಕಾಗಿದೆ. ಅಂತೆಯೇ ಅಗತ್ಯವಾದ ಅಭಿವೃದ್ಧಿ ಯೋಜನೆಗಳೂ ಜಾರಿಯಾಗಬೇಕು. ಹವಾಮಾನ ವೈಪರಿತ್ಯ, ಕೀಟಗಳ ನಿವಾರಣೆಗೆ ಮಾರ್ಗೋಪಾಯ ಕಂಡುಕೊಳ್ಳುವಿಕೆ, ಕಾಫಿ ಗಿಡಗಳಿಗೆ ತಗುಲುತ್ತಿರುವ ಮಾರಕ ರೋಗ, ಕೀಟ ಬಾಧೆಗೆ ಪರಿಹಾರ, ಹೊಸ ತಳಿಗಳಿಗೆ ಪ್ರೋತ್ಸಾಹ, ತಾಂತ್ರಿಕತೆ ಉನ್ನತೀಕರಣ ಮತ್ತು ಅಭಿವೃದ್ಧಿ, ಕಾಫಿ ಉತ್ಪನ್ನಗಳ ಗುಣಮಟ್ಟ ಹೆಚ್ಚಳದ ಬಗ್ಗೆ ಸಮಗ್ರ ಸಂಶೋಧನೆ ನಡೆಸಲು ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಎ.ಅರವಿಂದ್ ರಾವ್, ಉಪಾಸಿಯ ಉಪಾಧ್ಯಕ್ಷ ಅಜಯ್ ತಿಮ್ಮಯ್ಯ, ಕಾರ್ಯದರ್ಶಿ ಆರ್.ಸಂಜಿತ್ ಉಪಸ್ಥಿತರಿದ್ದರು.

> “ಕರ್ನಾಟಕದಲ್ಲಿ ಈ ಕೃಷಿ ಸಾಲಿನಲ್ಲಿ ಅರೇಬಿಕಾ ಕಾಫಿ ಉತ್ಪಾದನೆಯಲ್ಲಿ ಶೇ.50ರಷ್ಟು ಕುಂಠಿತವಾಗಲಿದೆ. ಕಾಫಿ ಕೃಷಿಕರ ನೆರವಿಗೆ ಇನ್ನಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬರಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.
> –ಮ್ಯಾಥ್ಯೂ ಅಬ್ರಾಹಂ, ಅಧ್ಯಕ್ಷ, ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟ

> “ಕರಿಮೆಣಸು ಬೆಳೆ ಮೇಲೆ ಜಿಎಸ್‌ಟಿ ವಿಧಿಸಬಾರದು ಎಂದು ಈಗಾಗಲೇ ಕಾಫಿ ಬೆಳೆಗಾರರ ಸಂಘಟನೆಗಳು ಸಂಸದರ ಮೂಲಕ ಕೇಂದ್ರ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಿವೆ. ಜಿಎಸ್‌ಟಿ ಸಭೆಯಲ್ಲಿ ಈ ವಿಚಾರ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸಚಿವರು ಭರವಸೆ ನೀಡಿದ್ದಾರೆ. ಕಾಫಿ ಕೃಷಿಗೆ ಸಂಬಂಧಿಸಿದಂತೆ ಹತ್ತಾರು ಬೇಡಿಕೆಗಳನ್ನು ಸರ್ಕಾರಗಳ ಮುಂದಿಟ್ಟಿದ್ದೇವೆ.
> –ಕಳ್ಳಿಚಂಡ ರಾಜೀವ್ ಗಣಪತಿ, ಅಧ್ಯಕ್ಷ, ಕೆಪಿಎ

ಬೇಗೂರು ಈಶ್ವರ ಯೂತ್ ಕ್ಲಬ್‌ಗೆ ಹಾಕಿ ಕೂರ್ಗ್ ಚಾಂಪಿಯನ್


ಹಾಕಿ ಕೂರ್ಗ್ ಲೀಗ್ ಮತ್ತು ನಾಕೌಟ್ ಟೂರ್ನಿಯಲ್ಲಿ ಚಾಂಪಿಯನ್ ಸ್ಥಾನ ಪಡೆದ ಬೇಗೂರು ಈಶ್ವರ ಯೂತ್ ಕ್ಲಬ್ ತಂಡ.

ಗೋಣಿಕೊಪ್ಪ, ನ.18–ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಹಾಕಿ ಕೂರ್ಗ್ ಸಹಯೋಗದಲ್ಲಿ ನಡೆದ ಹಾಕಿ ಲೀಗ್ ಮತ್ತು ನಾಕೌಟ್ ಟೂರ್ನಿಯಲ್ಲಿ ಬೇಗೂರು ಈಶ್ವರ ಯೂತ್ ಕ್ಲಬ್ ತಂಡ ಚಾಂಪಿಯನ್ ಸ್ಥಾನ ಅಲಂಕರಿಸಿದ್ದು, ಮೂರ್ನಾಡು ಬ್ಲೇಜ್ ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಫೈನಲ್ ಹಣಾಹಣಿಯಲ್ಲಿ ಬೇಗೂರು ಈಶ್ವರ ಯೂತ್ ಕ್ಲಬ್ ತಂಡ ಮೂರ್ನಾಡು ತಂಡವನ್ನು 2–0 ಗೋಲುಗಳಿಂದ ಮಣಿಸಿತು. ಬೇಗೂರು ತಂಡದ ಚೆಪ್ಪುಡೀರ ಪ್ರಣವ್ ಎರಡು ಗೋಲು ಹೊಡೆದು ಟೂರ್ನಿ ಗೆಲ್ಲಿಸಿದರು. ಬ್ಲೇಜ್ ತಂಡಕ್ಕೆ ದೊರೆತ 9 ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಲಾಗಿ ಸೋಲಿಗೆ ಶರಣಾಯಿತು.

ಕೋಣನಕಟ್ಟೆ ಇಲೆವೆನ್ ತಂಡದ ದಿವಾನ್ ಸುಬ್ಬಯ್ಯ ಬೆಸ್ಟ್ ಡಿಫೆಂಡರ್, ಬೇಗೂರು ತಂಡದ ವೇಣು ಬೆಸ್ಟ್ ಗೋಲ್ ಕೀಪರ್, ಕುಂದ ತಂಡದ ಅನ್ನಾಡಿಯಂಡ ಪೊನ್ನಣ್ಣ ಬೆಸ್ಟ್ ಮಿಡ್ ಫೀಲ್ಡರ್, ಬೇಗೂರು ತಂಡದ ಅಯ್ಯಂಡ ಪೊನ್ನಣ್ಣ ಬೆಸ್ಟ್ ಫಾರ್ವಡ್ ಪ್ರಶಸ್ತಿ ಪಡೆದುಕೊಂಡರು. ನ.5ರಿಂದ ಆರಂಭಗೊಂಡಿದ್ದ ಲೀಗ್ ಮತ್ತು ನಾಕೌಟ್ ಟೂರ್ನಿ ಭಾನುವಾರ ತೆರೆ ಕಂಡಿದ್ದು, ಪ್ರೀ ಕ್ವಾರ್ಟರ್ ಪ್ರವೇಶಿಸಿದ 16 ತಂಡ ನೆಸ್‌ಕೆಫೆ ಕಪ್‌ಗೆ ಪ್ರವೇಶ ಪಡೆದುಕೊಂಡವು.

ದಾನಿ ಪಟ್ರಂಗಡ ಶ್ರೀಮಂತ್ ಮುತ್ತಣ್ಣ ಚೆಪ್ಪುಡೀರ ಭವ್ಯ ರಾಕೇಶ್, ಅಂಜಪರವಂಡ ಅನಿಲ್, ಮೇವಡ ಚಿಣ್ಣಪ್ಪ ಬಹುಮಾನ ವಿತರಿಸಿದರು. ಚೆಪ್ಪುಡೀರ ಕಾರ್ಯಪ್ಪ ಪಂದ್ಯ ವಿವರಣೆ ನೀಡಿದರು. ಟೂರ್ನಿ ನಿರ್ದೇಶಕ ಕಳ್ಳಿಚಂಡ ಗೌತಂ, ತೀರ್ಪುಗಾರರಾಗಿ ಸಣ್ಣುವಂಡ ಲೋಕೇಶ್, ಕುಪ್ಪಂಡ ದಿಲನ್ ಬೋಪಣ್ಣ ಕಾರ್ಯನಿರ್ವಹಿಸಿದರು. ಒಲಿಂಪಿಯನ್ ಕರ್ನಲ್ ಬಾಳೆಯಡ ಕೆ.ಸುಬ್ರಮಣಿ, ಪ್ರಧಾನ ಕಾರ್ಯದರ್ಶಿ ಅಮ್ಮಾಂಡೀರ ಚೇತನ್, ಉಪಾಧ್ಯಕ್ಷೆ ಯಮುನಾ ಚಂಗಪ್ಪ ಇದ್ದರು.

ದೇವಾಲಯ ಹುಂಡಿ ಕಳ್ಳನ ಬಂಧನ



ಮಡಿಕೇರಿ: ಶನಿವಾರಸಂತೆಯ ವಿಜಯ ವಿನಾಯಕ ದೇವಾಲಯ ಹಾಗೂ ಶ್ರೀರಾಮ ಮಂದಿರದಲ್ಲಿ ನ.3 ರಂದು ರಾತ್ರಿ ನಡೆದಿದ್ದ ಹುಂಡಿ ಕಳ್ಳತನ ಪ್ರಕರಣದ ಆರೋಪಿಯನ್ನು ಶನಿವಾರಸಂತೆ ಪೊಲೀಸರು ಹಾಸನದಲ್ಲಿ ಬಂಧಿಸಿದ್ದಾರೆ.

ಹಾಸನ ಮೂಲದ ಮುಬಾರಕ್ ಬಂಧಿತ ಆರೋಪಿ. ಈತ ಶ್ರೀರಾಮ ಮಂದಿರದ ಹುಂಡಿ ಹಣ ಕದ್ದು ಹುಂಡಿಯನ್ನು ಹೊರಗಡೆ ಬಿಸಾಡಿರುವುದು ಪತ್ತೆಯಾಗಿತ್ತು. ಸ್ಕೂಟಿಯಲ್ಲಿ ಬಂದು ಕಳ್ಳತನ ಮಾಡಿರುವ ದೃಶ್ಯಗಳು ದೇವಾಲಯ ಆವರಣದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಈತ ತನ್ನ ಗುರುತು ಪತ್ತೆಯಾಗದಂತೆ ಮುಖಕ್ಕೆ ಮಾಸ್ಕ್ ಧರಿಸಿದ್ದ.

ಈ ಕುರಿತು ಶನಿವಾರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ತಾಂತ್ರಿಕ ಸಾಕ್ಷ್ಯಾಧಾರ, ಸಿಸಿ ಕ್ಯಾಮರಾ ದೃಶ್ಯಾವಳಿ ಆಧರಿಸಿ ಹಾಸನದಲ್ಲಿ ಬಂಧಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಸೋಮವಾರಪೇಟೆ ಡಿವೈಎಸ್‌ಪಿ ಗಂಗಾಧರ್, ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್ ಮಾರ್ಗದರ್ಶದಲ್ಲಿ ಹುಂಡಿ ಕಳವು ಪ್ರಕರಣದ ಕಾರ್ಯಾಚರಣೆ ನಡೆಸಲಾಗಿದೆ.

ವಿನಾಕಾರಣ ಲೈನ್‌ಮ್ಯಾನ್ ಮೇಲೆ ಹಲ್ಲೆ


ಲೈನ್‌ಮಾನ್ ಸಲ್ಮಾನ್ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು.

ವಿರಾಜಪೇಟೆ: ಸಮೀಪದ ಕಾಕೋಟುಪರಂಬು ಗ್ರಾಮದಲ್ಲಿ ಕರ್ತವ್ಯದಲ್ಲಿದ್ದ ಲೈನ್‌ಮಾನ್ ಮೇಲೆ ಇಬ್ಬರು ಕುಡುಕರು ವಿನಾಃಕಾರಣ ಹಲ್ಲೆ ನಡೆಸಿರುವ ಘಟನೆ ಭಾನುವಾರ ರಾತ್ರಿ ನಡೆದಿದೆ.

ಗಾಯಾಳು ಲೈನ್‌ಮಾನ್ ಸಲ್ಮಾನ್ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸಲ್ಮಾನ್ ಭಾನುವಾರ ರಾತ್ರಿ ವಿರಾಜಪೇಟೆ–ಭೇತ್ರಿ ಗ್ರಾಮದ ವಿದ್ಯುತ್ ಮಾರ್ಗ ಕಾಕೋಟುಪರಂಬು ಸಮೀಪ ತಾಂತ್ರಿಕ ಅಡಚಣೆಯಿಂದ ಅಭಿಯಂತರರ ಸೂಚನೆಯಂತೆ ಸೆಸ್ಕ್ ಕೇಂದ್ರದ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಇಬ್ಬರು ಕುಡುಕರು ವಿನಾಃಕಾರಣ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಸಲ್ಮಾನ್ ಮುಖಕ್ಕೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿದ ಕುಡುಕರು ಮೂಲತಃ ಬೆಳಗಾವಿ ಮೂಲದವರಾಗಿದ್ದು, ಕೆಲ ವರ್ಷದಿಂದ ಭೇತ್ರಿ, ಕಡಂಗಮೂರುರು, ಬೆಳ್ಳುಮಾಡು, ಕುಂಜಿಲ ಗ್ರಾಮಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎನ್ನಲಾಗಿದೆ ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> “ಕರ್ತವ್ಯ ನಿರತ ಸಿಬ್ಬಂದಿ ಮೇಲೆ ವಿನಾಃಕಾರಣ ಹಲ್ಲೆ ನಡೆಸುವುದು ಸರಿಯಲ್ಲ. ಇದೇ ರೀತಿ ಮುಂದುವರೆದರೆ ಕರ್ತವ್ಯ ನಿರ್ವಹಿಸಲು ಯಾವ ಸಿಬ್ಬಂದಿ ಬರಲು ಭಯಪಡುತ್ತಾರೆ. ಮೊದಲೇ ಸೆಸ್ಕ್‌ನಲ್ಲಿ ಸಿಬ್ಬಂದಿ ಕೊರತೆ ಇದೆ.
> –ಸುರೇಶ್, ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರ.

ಮಾದಕ ವಸ್ತು ಮಾರುತ್ತಿದ್ದ ಐವರ ಬಂಧನ


ಎಂ.ಕೆ.ಸುಜೇಶ್


ಮೊಹಮದ್ ಕುಂಞ


ಜಂಶಿರ್


ಸಿ.ವಿ.ಶಮ್ಮಾಸ್


ಯು.ವೈ.ಜಬ್ಬರ್

ಮಡಿಕೇರಿ, ನ.18–ವಿರಾಜಪೇಟೆ ಸಮೀಪದ ಆರ್ಜಿ ಗ್ರಾಮದ ಕಿರುಮಕ್ಕಿ–ಕಂಡಿಮಕ್ಕಿ ಜಂಕ್ಷನ್ ಬಳಿ ಮಾದಕ ವಸ್ತು ಎಂಡಿಎಂಎ ಮತ್ತು ಗಾಂಜಾ ಮಾರುತ್ತಿದ್ದ ಕೊಡಗು ಹಾಗೂ ಕೇರಳ ಮೂಲದ ಒಟ್ಟು 5 ಆರೋಪಿಗಳನ್ನು ವಿರಾಜಪೇಟೆ ಪೊಲೀಸರು ಬಂಧಿಸಿದ್ದಾರೆ.

ಕೇರಳ ಕಣ್ಣೂರು ಜಿಲ್ಲೆಯ ಎಂ.ಕೆ.ಸುಜೇಶ್(44), ಮೊಹಮದ್ ಕುಂಞ(48), ಕೇರಳ ಪಿಣರಾಯಿ ನಿವಾಸಿ ಜಂಶಿರ್(37), ತಲಚೇರಿ ಎರನ್ನೋಳಿ ನಿವಾಸಿ ಸಿ.ವಿ.ಶಮ್ಮಾಸ್(32) ಹಾಗೂ ವಿರಾಜಪೇಟೆ ಮರೂರು ನಿವಾಸಿ ಯು.ವೈ.ಜಬ್ಬರ್(38) ಬಂಧಿತ ಆರೋಪಿಗಳು. 84 ಗ್ರಾಂ ಎಂಡಿಎಂಎ, 7 ಗ್ರಾಂ ಗಾಂಜಾ, ಕೃತ್ಯಕ್ಕೆ ಬಳಸಿದ್ದ ಕಾರು, 1 ಡಿಜಿಟಲ್ ತೂಕದ ಯಂತ್ರ ಹಾಗೂ ಮಾದಕ ವಸ್ತು ಸೇವನೆಗೆ ಬಳಸುವ ಉಪಕರಣವನ್ನು ವಶಕ್ಕೆ ಪಡೆಯಲಾಗಿದೆ.

ಆರ್ಜಿ ಗ್ರಾಮದ ಕಿರುಮಕ್ಕಿ–ಕಂಡಿಮಕ್ಕಿ ಜಂಕ್ಷನ್ ಬಳಿ ಮಾದಕ ವಸ್ತು ಮಾರುತ್ತಿರುವ ಮಾಹಿತಿ ಪೊಲೀಸರಿಗೆ ಲಭಿಸಿತ್ತು ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಪೊಲೀಸರು 5 ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ಪ್ರಮೋದ್ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಜೋಡುಬೀಟಿ–ಕುಂದ ರಸ್ತೆಗೆ ಎನ್.ಪೊನ್ನಪ್ಪ ನಾಮಕರಣ...



ಪೊನ್ನಂಪೇಟೆಯ ಜೋಡುಬೀಟಿ–ಕುಂದ ಸಂಪರ್ಕ ರಸ್ತೆಗೆ ಇಂಡೋ– ಪಾಕಿಸ್ತಾನ ಯುದ್ಧದಲ್ಲಿ ವೀರ ಮರಣನಪ್ಪಿದ ನಾಯಕ್ ಕೂಕಂಡ ಎನ್.ಪೊನ್ನಪ್ಪ ಅವರ ನಾಮಕರಣ ಮಾಡಲಾಯಿತು. ಅಖಿಲ ಕರ್ನಾಟಕ ಮಾಜಿ ಯೋಧರ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕೊಟ್ಟುಕತ್ತಿರ ಸೋಮಣ್ಣ, ಪೊನ್ನಂಪೇಟೆ ಮಾಜಿ ಸೈನಿಕ ಸಂಘದ ಅಧ್ಯಕ್ಷ ಐನಂಡ ಸುಬ್ರಮಣಿ ಮಂದಣ್ಣ, ಜಿಪಂ ಮಾಜಿ ಸದಸ್ಯ ಮೂಕಳೇರ ಕುಶಾಲಪ್ಪ, ಹಳ್ಳಿಗಟ್ಟು ದೇವಾಲಯ ಸಮಿತಿ ಅಧ್ಯಕ್ಷ ಚಮ್ಮಟ್ಟಿರ ಪ್ರವೀಣ್ ಉತ್ತಪ್ಪ, ದಿ.ಪೊನ್ನಪ್ಪ ಸಹೋದರ ಮಾಜಿ ಯೋಧ ಕೂಕಂಡ ಕಾಶಿ ಕಾಶಿಯಪ್ಪ, ಬಿದ್ದಂಡ ಗೌರಮ್ಮ, ಪುತ್ತರಿರ ಕರುಣ್ ಕಾಳಯ್ಯ, ಪೊರೆರ ಕುಶಿ ಅಕ್ಕಮ್ಮ, ಕೂಕಂಡ ಕುಟುಂಬ ಪಟ್ಟೆದಾರ ರಾಜ ಕಾವೇರಿಯಪ್ಪ, ಕೂಕಂಡ ಪೃಥ್ವಿ ಅಯ್ಯಪ್ಪ ಕೂಕಂಡ ಪ್ರದೀಪ್ ಪೂವಯ್ಯ ಇದ್ದರು.

ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಕನಕದಾಸರು


ಚಾಮರಾಜನಗರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಪುಷ್ಪಾರ್ಚನೆ ಮಾಡಿದರು.

ಚಾಮರಾಜನಗರ, ನ.18–ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, 15 ಮತ್ತು 16ನೇ ಶತಮಾನದಲ್ಲಿ ಭಕ್ತಿಪಂಥದ ಮೂಲಕ ಸಮಾಜ ಸುಧಾರಣೆಗೆ ಶ್ರಮಿಸಿದರು ಎಂದರು.

ಕನಕದಾಸರು ಕೀರ್ತನೆಗಳನ್ನು ರಚಿಸಿ ನಾಡಿನ ವ್ಯಾಪಿ ಸಂಚರಿಸುವ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಅವರು ಸಂತರಷ್ಟೇ ಅಲ್ಲದೆ, ದಾರ್ಶನಿಕರೂ ಆಗಿದ್ದರು. ಸಾಹಿತ್ಯ, ಸಂಗೀತ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ್ದರು. ಕನ್ನಡ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳೋಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಓಬಿಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಕೊಡಗು ಮಾಜಿ ಜಿಲ್ಲಾಧ್ಯಕ್ಷ ಭಾರತೀಸ್, ಜಿಪಂ ಮಾಜಿ ಅಧ್ಯಕ್ಷ ಆರ್.ಸುಂದರ್, ಮಾಜಿ ಸದಸ್ಯ ಬಾಲರಾಜ್, ಡಾ.ಎ.ಆರ್.ಬಾಬು, ನಗರಸಭಾ ಅಧ್ಯಕ್ಷ ಸುರೇಶ್ ನಾಯಕ, ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಕೇಶ್ ಜಟ್ಟಿ, ಅರಕಲವಾಡಿ ನಾಗೇಂದ್ರ, ಹನೂರು ಮಂಡಲ ಅಧ್ಯಕ್ಷ ವೃಷಭೇಂದ್ರಸ್ವಾಮಿ, ಡಾ.ನವೀನ್ ಮೌರ್ಯ, ಮಹದೇಶ್ವರಬೆಟ್ಟ ಮಂಡಲ ಅಧ್ಯಕ್ಷ ರಾಜು, ಪ್ರಣಯ್, ನಗರದ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಕೂಸಣ್ಣ, ಸರಸ್ವತಿ, ಪದ್ಮ, ಕೇಬಲ್ ರಂಗಸ್ವಾಮಿ ಇತರರು ಹಾಜರಿದ್ದರು.

ಸಮಾಜ ಸುಧಾರಣೆಗಾಗಿ ಸರಳ ಕೀರ್ತನೆ ರಚಿಸಿದ ಕನಕದಾಸರು

● ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಣೆ ● ಚಾಮರಾಜನಗರದಲ್ಲಿ ಕನಕ ಜಯಂತಿ ಆಚರಣೆ

ಚಾಮರಾಜನಗರ, ನ.18–ಸಮಾಜದ ಅಂಕು–ಡೊಂಕುಗಳನ್ನು ತಿದ್ದುವಂತಹ ಸರಳ ಕೀರ್ತನೆಗಳನ್ನು ರಚಿಸಿ ಕನಕದಾಸರು ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಆಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಮಾಜಿಕ ಅಸಮಾನತೆ ತಾಂಡವವಾಡುತ್ತಿದ್ದ ಅಂದಿನ ಕಾಲಘಟ್ಟದಲ್ಲಿ ಜನರಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿ ಜನರನ್ನು ಬಡಿದೆಚ್ಚರಿಸಿದ ಕನಕದಾಸರು ಮನುಕುಲದ ಒಳಿತಿಗೆ ದುಡಿದ ಮಹಾನ್ ಸಾಧಕರಾಗಿದ್ದಾರೆ. ಸಂಗೀತ ಹಾಗೂ ನಾಟಕಕಾರರು ಆಗಿದ್ದ ಕನಕದಾಸರ ಚರಿತ್ರೆಯನ್ನು ಓದಿದರೇ ಸಾಲದು. ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದವರನ್ನು ಒಂದೆಡೆ ಕಲೆ ಹಾಕಿ ಸಮಾನತೆಗೆ ಒತ್ತುಕೊಟ್ಟಿದ್ದರು. ಬಳಿಕ 16ನೇ ಶತಮಾನದಲ್ಲಿ ಕನಕದಾಸರು ಸಹ ಅದೇ ದಾರಿಯಲ್ಲಿ ಜನರನ್ನು ಮುನ್ನೆಡೆಸಿದರು.


ಚಾಮರಾಜನಗರ ಪ್ರವಾಸಿ ಮಂದಿರ ಆವರಣದಲ್ಲಿ ಕನಕದಾಸರ ಭಾವಚಿತ್ರ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಕನಕದಾಸರ ಜೀವನಚರಿತ್ರೆಯನ್ನಾಧರಿಸಿದ 'ಭಕ್ತ ಕನಕದಾಸ' ಚಲನಚಿತ್ರದಲ್ಲಿ ಜಿಲ್ಲೆಯವರಾದ ಡಾ.ರಾಜ್‌ಕುಮಾರ್ ಮನೋಜ್ಞವಾಗಿ ನಟಿಸಿದ್ದಾರೆ. ಆ ಮೂಲಕ ಕನಕದಾಸರು ಜನಮಾನಸದಲ್ಲಿ ಅಚ್ಚಳಿಯದೇ ಚಿರಸ್ಥಾಯಿಯಾಗಿದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ಸಮಾಜದಲ್ಲಿ ಮೇಲು–ಕೀಳು, ಬಡವ–ಬಲ್ಲಿದ ಬೇಧ–ಭಾವಗಳನ್ನು ಹೋಗಲಾಡಿಸಲು ಶ್ರಮಿಸಿದ ಕನಕದಾಸರು ದಾಸರಲ್ಲಿ ಅತೀ ಶ್ರೇಷ್ಠ ದಾಸರಾಗಿದ್ದಾರೆ. 316 ಕೀರ್ತನೆಗಳನ್ನು ರಚಿಸಿದ ಕನಕದಾಸರು ಶ್ರೀಕೃಷ್ಣನ ಪರಮಭಕ್ತರಾಗಿ ಭಕ್ತಶ್ರೇಷ್ಠರೆನಿಸಿಕೊಂಡರು. ಅವರ ಆದರ್ಶ ಮೌಲ್ಯ ಇಂದಿಗೂ ದಾರಿದೀಪವಾಗಿವೆ ಎಂದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕುರುಬ ಸಮಾಜದ ತಾಲೂಕು ಅಧ್ಯಕ್ಷ ಉಮೇಶ್, ಮಾದಾಪುರ ರವಿಕುಮಾರ್ ಮಾತನಾಡಿದರು. ಜಿಲ್ಲಾಧಿಕಾರಿ ಶಿಲ್ಪನಾಗ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಮುಖಂಡರಾದ ಬೆಳ್ಳೀಗೌಡ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಿಂದ ಅಲಂಕೃತ ಬೆಳ್ಳಿ ರಥದಲ್ಲಿ ಕನಕದಾಸರ ಭಾವಚಿತ್ರ ಅದ್ಧೂರಿ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ನಂತರ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ಆಕರ್ಷಕ ಕಲಾತಂಡಗಳು, ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಆಟೋ ಟ್ಯಾಬ್ಲೋಗಳು ಗಮನ ಸೆಳೆದವು.


> “ಕೃಷ್ಣದೇವರಾಯ ಸೈನ್ಯದ ಜೊತೆ 1512ರಲ್ಲಿ ದಂಡೆತ್ತಿ ಬರುವ ಮೂಲಕ ಕನಕದಾಸರು ಚಾಮರಾಜನಗರ ತಾಲೂಕಿನ ಉಮ್ಮತ್ತೂರಿಗೆ ಬಂದಿದ್ದರು ಎಂಬ ಐತಿಹ್ಯವಿದೆ. ಉಮ್ಮತ್ತೂರಿನ ದೈವ ರಂಗನಾಥ ಸ್ವಾಮಿ ಬಗ್ಗೆ ಕೀರ್ತನೆಯಲ್ಲಿ ಸ್ಮರಿಸಿದ್ದಾರೆ. ಕನಕದಾಸರು ರಾಮಧ್ಯಾನ ಚರಿತೆ ಹಾಗೂ ಹರಿಭಕ್ತಿಸಾರ ಕೃತಿಗಳನ್ನು ರಚಿಸಿ, ಜನರನ್ನು ಭಕ್ತಿಮಾರ್ಗದಲ್ಲಿ ನಡೆಸುವ ಮೂಲಕ ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ.
> –ಡಾ.ಎಂ.ಮಂಜುನಾಥ್, ಸಂಶೋಧಕ

ಇಂದು ಹಾಲಹಳ್ಳಿಯಲ್ಲಿ ಸಹಕಾರ ಸಪ್ತಾಹ

ಗುಂಡ್ಲುಪೇಟೆ, ನ.18–ಅಖಿಲ ಭಾರತ ಸಹಕಾರ ಸಪ್ತಾಹವನ್ನು ನ.19ರಂದು ಬೆಳಗ್ಗೆ 10.30ಕ್ಕೆ ತಾಲೂಕಿನ ಹಾಲಹಳ್ಳಿ ಗ್ರಾಮದ ಹೆಚ್‌ಎನ್‌ಎಸ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್ ತಿಳಿಸಿದ್ದಾರೆ.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮುಲ್ ಅಧ್ಯಕ್ಷ ವೈ.ವಿ.ನಾಗೇಂದ್ರ, ಟಿಎಪಿಸಿಎಂಎಸ್ ಅಧ್ಯಕ್ಷ ಜಯರಾಮು, ಚಾಮುಲ್ ನಿರ್ದೇಶಕ ಎಂ.ಪಿ.ಸುನೀಲ್, ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ರಾಯಪ್ಪನ್, ಚಾಮುಲ್ ನಿರ್ದೇಶಕಿ ಶೀಲಾ ಪುಟ್ಟರಂಗಶೆಟ್ಟಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಸವಣ್ಣ, ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ ಚೆಕ್ ವಿತರಣೆ...



ಅಕಾಲಿಕ ಮರಣ ಹೊಂದಿದ ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದ ಅಂಕಪ್ಪ ಅವರ ತಾಯಿ ಮಹದೇವಮ್ಮಗೆ ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯಡಿ 2 ಲಕ್ಷ ರೂ. ಚೆಕ್ ಅನ್ನು ಹೊಂಗನೂರು ಗ್ರಾಮದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ವ್ಯವಸ್ಥಾಪಕ ಅವನೀಶ್ ಕುಮಾರ್ ಪಠಾಕ್ ವಿತರಿಸಿದರು. ಬ್ಯಾಂಕ್‌ನ ಪವನ್ ತೇಜಾ, ಲೂಯಿಸ್, ರಾಹುಲ್ ನಾಯಕ್, ಇಂಟೆಗ್ರಾ ಸಂಸ್ಥೆಯ ಬಸವನಾಯಕ, ವ್ಯವಹಾರ ಪ್ರತಿನಿಧಿ ಸುನೀಲ್ ಇದ್ದರು.

ಸಮಾಜದ ಒಳಿತಿಗೆ ಬೇಕಿರುವುದು ದ್ವೇಷವಿಲ್ಲದ ಮಾರ್ಗ


ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಚೇರಿಯಲ್ಲಿ ಕನಕ ಜಯಂತಿ ಆಚರಿಸಲಾಯಿತು.

ಹನೂರು, ನ.18–ಸಮಾಜದ ಒಳಿತಿಗೆ ಬೇಕಾಗಿರುವುದು ಶ್ರೇಷ್ಠ ಸಂತರ ದಾರ್ಶನಿಕ ಅಸೂಯೆ, ದ್ವೇಷ ಇಲ್ಲದ ಮಾರ್ಗ ಎಂದು ಮಲೆಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ. ರಘು ತಿಳಿಸಿದರು.

ತಾಲೂಕಿನ ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಚೇರಿಯಲ್ಲಿ ನಡೆದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೇಷ್ಠಸಂತ ಕನಕದಾಸರು ರಚಿಸಿದ ಕೀರ್ತನೆಗಳು ಜಾತಿ, ಭೇದ–ಭಾವವಿಲ್ಲದೆ ಸಮಾಜದ ಒಳಿತಾಗಿವೆ. ಸಮಾಜದ ಒಳಿತಿಗೆ ಮಾದಯ್ಯ, ಅಲ್ಲಮಪ್ರಭು, ಬಸವಣ್ಣ, ಪುರಂದರದಾಸರು, ಡಾ.ಬಿ.ಆರ್. ಅಂಬೇಡ್ಕರ್ ಇನ್ನಿತರ ಮಹಾನ್ ನಾಯಕರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಪ್ರಾಧಿಕಾರ ಉಪ ಕಾರ್ಯದರ್ಶಿ ಚಂದ್ರಶೇಖರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನ.22ರಂದು ಉಸ್ತುವಾರಿ ಸಮಿತಿ ಪರಿಶೀಲನೆ ಸಭೆ



ಚಾಮರಾಜನಗರ, ನ.18– ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನೆ ಸಭೆ ಸಂಸದ ಸುನೀಲ್ ಬೋಸ್ ಅಧ್ಯಕ್ಷತೆಯಲ್ಲಿ ನ.22ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾ ಪಂಚಾಯಿತಿ ನೂತನ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಕಚೇರಿಯಲ್ಲಿ ಕನಕ ಜಯಂತಿ...



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಕನಕದಾಸ ಜಯಂತಿ ಆಚರಿಸಲಾಯಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಜಿಪಂ ಮಾಜಿ ಸದಸ್ಯ ಕೆರಹಳ್ಳಿ ನವೀನ್, ಪದ್ಮಾ ಪುರುಷೋತ್ತಮ್, ತಾಪಂ ಮಾಜಿ ಸದಸ್ಯ ಕುಮಾರ್ ನಾಯಕ್, ಮಹದೇವಶೆಟ್ಟಿ, ಎಪಿಎಂಸಿ ಅಧ್ಯಕ್ಷ ಸೋಮೇಶ್ ಇದ್ದರು.

ಒಂದನೇ ಪುಟದಿಂದ

ಕನಕದಾಸರ ಪ್ರತಿಮೆ ಅದ್ದೂರಿ ಮೆರವಣಿಗೆ

ಚರ್ಚಿಸುವುದಾಗಿ ತಿಳಿಸಿದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕನಕದಾಸರ ಜಯಂತಿ ಹಿನ್ನೆಲೆಯಲ್ಲಿ ಪ್ರತಿಷ್ಠಾಪಿಸಿದಂತೆ ಈ ಬಾರಿಯೂ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕನಕದಾಸರ ಪ್ರತಿಮೆ ಹಾಗೂ ಭಾವಚಿತ್ರಗಳ ಮೆರವಣಿಗೆಯನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ. ಕನಕದಾಸರ ಸಂದೇಶ ಸಾರುವ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಿ, ಜನರಿಗೆ ಕನಕದಾಸರ ಸಂದೇಶ ರವಾನಿಸಲು ಶ್ರಮ ಕೈಗೊಳ್ಳಲಾಗಿದೆ ಎಂದರು.

ಜಾನಪದ ಸೊಬಗು: ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಮೆರವಣಿಗೆಯು ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ ಹಾರ್ಡಿಂಜ್ ವೃತ್ತ ಚಾಮರಾಜ ಜೋಡಿ ರಸ್ತೆ ಶಾಂತಲಾ ವೃತ್ತ ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಅರಸ್ ರಸ್ತೆ, ಜೆ.ಎಲ್.ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಮೆರವಣಿಗೆಯಲ್ಲಿ ಕಂಸಾಳೆ, ಡೊಳ್ಳು ಕುಣಿತ, ಗೊರವರ ಕುಣಿತ, ಲಂಬಾಣಿ ನೃತ್ಯ, ಗೊಂಬೆ ಕುಣಿತ, ತಾಲೂಕಿನ ವಿವಿಧ ಗ್ರಾಮಗಳ ಬೀರೇಶ್ವರ, ಬನ್ನಿಮಹಾಕಾಳೇಶ್ವರಿ ದೇವಿಯ ಪೂಜಾ ಕುಣಿತ, ವೀರಮಕ್ಕಳ ಕುಣಿತ, ಮಹಿಳಾ ಡೊಳ್ಳು ಕುಣಿತ, ಚಂಡೆಮದ್ದಳೆ, ಯಕ್ಷಗಾನ ವೇಷಧಾರಿಗಳು ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿ, ಮೆರುಗು ತುಂಬಿದವು. ಅಲ್ಲದೆ, ಈಶ್ವರ, ಶ್ರೀರಾಮ-ಲಕ್ಷ್ಮಣ, ಹನುಮಂತ, ರಾವಣ ಸೇರಿದಂತೆ ಪೌರಾಣಿಕ ಪಾತ್ರಗಳ ವೇಷಧಾರಿಗಳು, ಸಂಗೊಳ್ಳಿ ರಾಯಣ್ಣ, ಕನಕದಾಸರ ವೇಷಧಾರಿಗಳು ಹಾಗೂ ಕನಕದಾಸರು, ಹಕ್ಕಬುಕ್ಕ, ಸಂಗೊಳ್ಳಿ ರಾಯಣ್ಣ ಸೇರಿದಂತೆ ಹಾಲುಮತ ಸಮುದಾಯ ಸಾಧಕರ ಭಾವಚಿತ್ರವುಳ್ಳ ಸ್ತಬ್ಧಚಿತ್ರಗಳು, ಉಡುಪಿ ಕೃಷ್ಣ ಮಂದಿರದ ಕನಕ ಕಿಂಡಿ ಸೇರಿದಂತೆ ಇನ್ನಿತರ ಸ್ತಬ್ಧಚಿತ್ರಗಳು ನೋಡುಗರ ಕಣ್ಮನ ಸೆಳೆದವು. ದಾರಿ ಯುದ್ದಕ್ಕೂ ಮೆರವಣಿಗೆಯಲ್ಲಿ ಸಾಗುವವರಿಗೆ ಮಜ್ಜಿಗೆ, ಪಾನೀಯ ನೀಡಿ ಉಪಚರಿಸಲಾಯಿತು.

ಡಿಜೆ ಸದ್ದಿಗೆ ಯುವಕ ಭರ್ಜರಿ ಕುಣಿತ: ಮೆರವಣಿಗೆಯಲ್ಲಿ ಡಿಜೆ ವ್ಯವಸ್ಥೆ ಮಾಡಲಾಗಿತ್ತು. ಹಾಲುಮತ ಸಂಪ್ರದಾಯ ಮೇಳೈಸುವ ಹಾಗೂ ಕುರುಬ ಸಮುದಾಯ ಬಣ್ಣಿಸುವ ಗೀತೆಗಳಿಗೆ ಯುವ ಸಮುದಾಯ ಕುಣಿದು ಕುಪ್ಪಳಿಸಿತು.

ಮೆರವಣಿಗೆಯಲ್ಲಿ ಶಾಸಕ ಕೆ. ಹರೀಶ್ ಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮುಖಂಡರಾದ ಜೆರಿಹುಂಡಿ ಬಸವಣ್ಣ, ಸುಬ್ರಹ್ಮಣ್ಯ, ಜೆ.ಗೋಪಿ, ಎಂ.ಶಿವಣ್ಣ, ಬಿ.ಎಂ.ರಾಮು, ಕೆಎಸ್.ಶಿವರಾಮ್, ರಘು, ಟಿ.ಬಿ.ಚಿಕ್ಕಣ್ಣ, ಲೋಕೇಶ್, ಉತ್ತನಹಳ್ಳಿ ಶಿವಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ ಬಾಮೈದ ಮಲ್ಲಿಕಾರ್ಜುನಸ್ವಾಮಿ

ಮುಡಾ ಮಾಜಿ ಅಧ್ಯಕ್ಷ ಕೆ. ಮರಿಗೌಡ, ಅಂದಿನ ಆಯುಕ್ತರಾಗಿದ್ದ ನಟೇಶ್ ಸೇರಿದಂತೆ ಹಲವರನ್ನು ವಿಚಾರಣೆ ನಡೆಸಿದ್ದರು. ಮೈಸೂರಿನ ಕೆಸರೆ ಜಾಗವನ್ನು ಮಾಲೀಕರಾಗಿದ್ದ ದೇವರಾಜು ಅವರಿಂದ ಯಾವಾಗ ಖರೀದಿಸಿದ್ದರು, ಹೇಗೆ ಖರೀದಿ ಮಾಡಲಾಗಿತ್ತು. ಸಹೋದರಿ ಪಾರ್ವತಿ ಅವರಿಗೆ ಜಮೀನು ದಾನ ಮಾಡಿದ್ದು ಯಾವಾಗ ಎಂಬುದು ಸೇರಿದಂತೆ ಹಲವು ವಿಚಾರ ಬಗ್ಗೆ ಮಲ್ಲಿಕಾರ್ಜುನಸ್ವಾಮಿ ಅವರನ್ನು ವಿಚಾರಣೆ ಮಾಡಲಾಗಿದೆ ಎಂದು ಇಡಿ ಮೂಲಗಳು ತಿಳಿಸಿವೆ. ಮತ್ತೊಂದೆಡೆ ಮುಡಾ ಹಗರಣ ಸಂಬಂಧ ತನಿಖೆ ನಡೆಸುತ್ತಿರುವ ಮೈಸೂರಿನ ಲೋಕಾಯುಕ್ತ ಅಧಿಕಾರಿಗಳು ಕಳೆದ ಅಕ್ಟೋಬರ್ 10 ರಂದು ಮಲ್ಲಿಕಾರ್ಜುನಸ್ವಾಮಿ ಅವರಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಿದ್ದರು.

ಸಿಎಂ ಹಾಗೂ ಅವರ ಪತ್ನಿಗೂ ನೋಟಿಸ್ ಸಾಧ್ಯತೆ: ಸದ್ಯ ವಿಚಾರಣೆಗೆ ಹಾಜರಾಗಿರುವ ಮಲ್ಲಿಕಾರ್ಜುನಸ್ವಾಮಿ ಅವರಿಂದ ಮೂಲ ಜಮೀನು ಖರೀದಿಗೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಹೇಳಿಕೆಯನ್ನು ಪಡೆದಿದ್ದಾರೆ. ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪತ್ನಿ ಪಾರ್ವತಿ ಅವರನ್ನು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಇಂದು ವಿಚಾರಣೆಗೆ ಹಾಜರು

ಸೇರಿದಂತೆ ಇನ್ನು ಹಲವರನ್ನು ಲೋಕಾಯುಕ್ತರು ವಿಚಾರಣೆ ನಡೆಸಲಿದ್ದಾರೆ.

ಸಿದ್ದರಾಮಯ್ಯ ಆರೋಪಿ ಆಗಿರುವ ಮುಡಾ ಹಗರಣವನ್ನು ಸಿಬಿಐಗೆ ವಹಿಸುವ ಸಂಬಂಧ ನವೆಂಬರ್ 26 ರಂದು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ನವೆಂಬರ್ 24 ರೊಳಗೆ ಏನೇನು ವಿಚಾರಣೆ ಪ್ರಕ್ರಿಯೆ ನಡೆದಿದೆ ಎಂಬ ಮಧ್ಯಂತರ ವರದಿಯನ್ನು ನವೆಂಬರ್ 25 ರಂದು ಸಲ್ಲಿಸುವಂತೆ ಹೈಕೋರ್ಟ್ ಲೋಕಾಯುಕ್ತರಿಗೆ ಸೂಚನೆ ನೀಡಿದೆ.

ಈ ಕಾರಣದಿಂದ ಲೋಕಾಯುಕ್ತರು ಬಿರುಸಿನ ತನಿಖೆ ನಡೆಸುತ್ತಿದ್ದಾರೆ. ಇಡೀ ಪ್ರಕರಣದ ಅಂತಿಮ ವರದಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಡಿಸೆಂಬರ್ 24 ರೊಳಗೆ ಸಲ್ಲಿಸಬೇಕಿದೆ.

ಅಕ್ರಮ ಪ್ರತ್ಯಾಸ್ತ್ರ...!

ಮುಗಿಬೀಳಲು ಸಂಪುಟ ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಫರ್ಮಾನು ಹೊರಡಿಸಿದ್ದಾರೆ.

ನ್ಯಾ. ಕುನ್ಹಾ ವರದಿ ಆಧರಿಸಿ ಕ್ರಮಕ್ಕೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಈಗಾಗಲೇ ಸಂಪುಟ ನಿರ್ಧರಿಸಿದ್ದು, ತಂಡದ ಮುಖ್ಯಸ್ಥರಾಗಿ ಯಾರನ್ನು ನೇಮಕ ಮಾಡಬೇಕು ಎಂಬುದನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ವಿವೇಚನೆಗೆ ಸಿಎಂ ಬಿಟ್ಟರು. ಆದರೆ, ಕೋವಿಡ್ ಕಾಲದ ಕೋಟ್ಯಾಂತರ ಹಣ ಲೂಟಿ ಸಾಬೀತಾಗಿರುವುದನ್ನು ದೊಡ್ಡದಾಗಿ ಬಿಂಬಿಸಬೇಕು. ಈ ವಿಚಾರದಲ್ಲಿ ಎಲ್ಲ ಸಚಿವರೂ ಆಕ್ರಮಣಕಾರಿಯಾಗಿ ಮುಂದುವರಿಯಬೇಕು ಎಂದು ಸಿಎಂ ಸ್ಪಷ್ಟ ನಿರ್ದೇಶನ ನೀಡಿದರು ಎಂದು ತಿಳಿದು ಬಂದಿದೆ.

ಅಧಿವೇಶನದಲ್ಲಿ ಮಂಡಿಸುವ ವಿಧೇಯಕಗಳು: ಕಳೆದ ಅವೇಶನದಲ್ಲಿ ತಡೆಹಿಡಿದು ಜಂಟಿ ಸದನ ಸಮಿತಿ ಪರಾಮರ್ಶೆಗೆ ಒಪ್ಪಿಸಲಾಗಿದ್ದ ಗ್ರೇಟರ್ ಬೆಂಗಳೂರು ರಚನೆ ವಿಧೇಯಕವನ್ನೂ ಅವೇಶನದಲ್ಲಿ ಮಂಡನೆ ಮಾಡಲಾಗುತ್ತಿದ್ದು, ಶ್ರೀ ಗುರು ರಾಘವೇಂದ್ರ ಬ್ಯಾಂಕ್ ಹಗರಣದ ಹಿನ್ನೆಲೆಯಲ್ಲಿ ಸಹಕಾರಿ ಬ್ಯಾಂಕ್‌ಗಳಲ್ಲಿ ಠೇವಣಿದಾರರ ಹಿತಾಸಕ್ತಿ ಕಾಪಾಡುವ ಸಂಬಂಧ ಮತ್ತೊಂದು ಮಹತ್ವದ ವಿಧೇಯಕವೂ ಬರಲಿದೆ. ಉಳಿದಂತೆ ಯಾವೆಲ್ಲಾ ವಿಧೇಯಕಗಳು ಅಧಿವೇಶನದಲ್ಲಿ ಮಂಡನೆಯಾಗಬೇಕು ಎಂಬ ಕುರಿತು ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಿತು. ರಾಜ್ಯಪಾಲರು ಅನುಮೋದನೆ ನೀಡದೆ ಬಾಕಿ ಉಳಿಸಿಕೊಂಡಿರುವ ವಿಧೇಯಕಗಳ ಬಗ್ಗೆಯೂ ಸಿಎಂ ಈ ಸಂದರ್ಭದಲ್ಲಿ ಕಾನೂನು ಸಚಿವರಿಂದ ವಿವರಣೆ ಪಡೆದುಕೊಂಡರು ಎಂದು ತಿಳಿದುಬಂದಿದೆ.

ಬಿಪಿಎಲ್ ಕಾರ್ಡ್ ಗೊಂದಲ: ಬಿಪಿಎಲ್ ಕಾರ್ಡ್ ರದ್ದತಿ ವಿಚಾರದಲ್ಲಿ ಅನಗತ್ಯ ಟೀಕೆಗಳು ಎದುರಾಗುತ್ತಿವೆ. ಸರಕಾರಿ ನೌಕರರು, ಆದಾಯ ತೆರಿಗೆ ಪಾವತಿದಾರರು ಸೇರಿ ಕೆಲವು ಅನರ್ಹರ ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ. ಯಾವೊಂದು ಬಡ ಕುಟುಂಬದ ಬಿಪಿಎಲ್ ಕಾರ್ಡ್ ಕೂಡ ರದ್ದಾಗಿಲ್ಲ ಮತ್ತು ಅದಕ್ಕೆ ಅವಕಾಶವನ್ನೂ ಕೊಡುವುದಿಲ್ಲ. ಈ ಬಗ್ಗೆ ಸ್ಪಷ್ಟ ಮಾತುಗಳಲ್ಲಿ ಸ್ಪಷ್ಟನೆ ಕೊಡಿ. ಈ ಸಂಬಂಧ ಅನಗತ್ಯ ಚರ್ಚೆ, ಟೀಕೆಗಳು ಮುಂದುವರಿಯಬಾರದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ ಸಿಎಂ ತಾಕೀತು ಮಾಡಿದರು ಎನ್ನಲಾಗಿದೆ.

ಇಂದಿನ ಮಹತ್ತರ ಸಭೆಗೆ 10 ಹಿರಿಯ ಸಚಿವರಿಗಷ್ಟೇ ಆಹ್ವಾನವಿತ್ತು. ಡಿಸಿಎಂ ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ಕೆ.ಎನ್.ರಾಜಣ್ಣ, ಪ್ರಿಯಾಂಕ್ ಖರ್ಗೆ, ಡಾ.ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ, ದಿನೇಶ್ ಗುಂಡೂರಾವ್ ಸಭೆಗೆ ಹಾಜರಾದರು. ಪ್ರಸಕ್ತ ರಾಜಕೀಯ ವಿದ್ಯಮಾನಗಳು, ಪ್ರತಿಪಕ್ಷ ಪಾಳೇಯದ ತಂತ್ರಗಾರಿಕೆಗಳು, ಅಧಿವೇಶನ ತಯಾರಿ ಹಾಗೂ ನ.23ರ ಉಪಚುನಾವಣೆ ಫಲಿತಾಂಶ ಮತ್ತು ಪರಿಣಾಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.

ಕೆಡವಲು 100 ಕೋಟಿ ಆಫರ್!

ಸರ್ಕಾರ ಕೆಡವಲು ಯತ್ನಿಸುತ್ತಿದ್ದು, ನಮ್ಮ ಬಳಿ ಆಪರೇಷನ್ ಕಮಲಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳಿವೆ ಎಂದು ಸ್ಪಷ್ಟಪಡಿಸಿದರು. ಯಾರನ್ನು ಯಾವ್ಯಾವ ಹೋಟೆಲ್, ಏರ್‌ಪೋರ್ಟ್, ಗೆಸ್ಟ್ ಹೌಸ್‌ನಲ್ಲಿ ಸಂಪರ್ಕಿಸಿದ್ದಾರೆ ಎಂಬ ಮಾಹಿತಿ ಇದೆ. ಈ ಬಗ್ಗೆ ಆಡಿಯೋ, ವಿಡಿಯೋ, ಸಿಡಿ, ಪೆನ್‌ಡ್ರೈವ್ ಮಾತ್ರವಲ್ಲದೆ ಐ ಕ್ಲೌಡ್ ಕೂಡ ಇದೆ. 50 ಶಾಸಕರ ಪೈಕಿ 30 ಮಂದಿಗೆ ಸಚಿವ ಸ್ಥಾನ ನೀಡುವ ಭರವಸೆ ನೀಡುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯ ಹಗರಣಗಳು ಹೊರಗೆ ಬರುತ್ತಿವೆ. ಹಾಗಾಗಿ ಅವರಿಗೆ ಜೈಲಿಗೆ ಹೋಗುವ ಭಯ ಶುರುವಾಗಿದ್ದು, ಹೀಗಾಗಿ ತಮ್ಮ ಸರ್ಕಾರ ಬರಬೇಕು ಎಂದು ಆಫರ್ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಶೀಘ್ರದಲ್ಲೇ ಮಾಧ್ಯಮಗಳ ಮೂಲಕ ದಾಖಲೆ ಬಿಡುಗಡೆ ಮಾಡುತ್ತೇನೆ. ಸರ್ಕಾರ ಕೆಡವಲು ಪ್ರಯತ್ನಿಸಿದವರು ಈ ಬಗ್ಗೆ ತನಿಖೆ ಮಾಡಿಸಿ ಅಂತಾರೆ. ಆದರೆ ಆ ಪ್ರಯತ್ನ ಮಾಡಿದವರು ಯಾರೂ ತನಿಖೆ ಮಾಡಿಸಿ ಎಂದು ಹೇಳುತ್ತಿಲ್ಲ. ನಮ್ಮ ಶಾಸಕರು ಬಿಜೆಪಿ ಆಮಿಷಗಳಿಗೆ ಬಲಿಯಾಗಲ್ಲ. ನಾವೆಲ್ಲಾ ಒಗ್ಗಟ್ಟಾಗಿದ್ದೇವೆ, ಸರ್ಕಾರವೂ ಸ್ಥಿರವಾಗಿದೆ ಎಂದು ಸ್ಪಷ್ಟಪಡಿಸಿದರು.

ಪ್ರತಿಕ್ರಿಯೆ ನೀಡಲು ನಕಾರ: ರವಿ ಕುಮಾರ್ ಗಣಿಗ ನೀಡಿದ ಹೇಳಿಕೆ ದೃಶ್ಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗುತ್ತಿದ್ದಂತೆಯೇ, ನಮಗ್ಯಾವ ಆಮಿಷವೂ ಬಂದಿಲ್ಲ ಎಂದು ಶಾಸಕರಾದ ಬಾಬಾ ಸಾಹೇಬ್ ಪಾಟೀಲ್, ಹೆಚ್.ಟಿ.ತಿಮ್ಮಯ್ಯ ಸ್ಪಷ್ಟಪಡಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಲು ರವಿ ಗಣಿಗ ನಿರಾಕರಿಸಿದರು.

ಮಂಡ್ಯದ ಅಂಬೇಡ್ಕರ್ ಭವನದಲ್ಲಿ ನಡೆದ ಕನಕ ಜಯಂತಿಯಲ್ಲೂ ಪಾಲ್ಗೊಂಡಿದ್ದ ರವಿಕುಮಾರ್ ಗಣಿಗ ಕಾರ್ಯಕ್ರಮ ಮುಗಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡದೇ ಈ ಬಗ್ಗೆ ಮಂಗಳವಾರ ಸುದ್ದಿಗೋಷ್ಠಿ ನಡೆಸುವುದಾಗಿ ಹೇಳಿ, ಅಲ್ಲಿಂದ ಕಾಲ್ಕಿತ್ತರು.

ಮೈಸೂರಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ನಾನಾ ಅನುಕೂಲ ಕಲ್ಪಿಸುವ ಸಂಬಂಧ ಪಾಲಿಕೆ ಅಧಿಕಾರಿಗಳೊಂದಿಗೆ ಸಂಸದ ಯದುವೀರ್ ಸಭೆ

ನಿರ್ದಿಷ್ಟ ಅವಧಿಯಲ್ಲಿ ವಿವಿಧ ಯೋಜನೆಯಡಿ ಕ್ರಮಕ್ಕೆ ಸೂಚನೆ



ಮೈಸೂರು ಮಹಾ ನಗರಪಾಲಿಕೆಯಲ್ಲಿ ಶನಿವಾರ ಬೀದಿಬದಿ ವ್ಯಾಪಾರಿಗಳ ಕಾಯ್ದೆ ಜಾರಿ ಕುರಿತ ಸಭೆಯಲ್ಲಿ ಸಂಸದ ಯದುವೀರ್ ಮಾತನಾಡಿದರು. ಶಾಸಕರಾದ ಶ್ರೀವತ್ಸ, ಕೆ.ಹರೀಶ್‌ಗೌಡ ಹಾಗೂ ಅಧಿಕಾರಿಗಳಿದ್ದರು.

ಮೈಸೂರು, ನ.18(ಎಸ್‌ಬಿಡಿ)– ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪಾಲಿಕೆ ನವೀಕೃತ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಶನಿವಾರ ಬೀದಿಬದಿ ವ್ಯಾಪಾರಿಗಳ ಕಾಯ್ದೆ ಜಾರಿ ಕುರಿತ ಸಭೆಯಲ್ಲಿ ಮಾತನಾಡಿ, ಬೀದಿಬದಿ ವ್ಯಾಪಾರಿಗಳ ಜೀವನ ನಿರ್ವಹಣೆಗೆ ಅನುಕೂಲಕರ ವಾತಾವರಣ ನಿರ್ಮಿಸಬೇಕು. ಕೈಗೆಟುಕುವ ದರದಲ್ಲಿ ಬಂಡವಾಳ ಸಾಲ, ಸಾಮಾಜಿಕ ಭದ್ರತೆ ಒದಗಿಸಲು ಕ್ರಮ ವಹಿಸಬೇಕು. ಬೀದಿಬದಿ ವ್ಯಾಪಾರಿಗಳ ಜೀವನ ನಿರ್ವಹಣೆ ದೃಷ್ಟಿಯಿಂದ ರೂಪಿಸಿರುವ ಪ್ರಧಾನಮಂತ್ರಿ ಸ್ವ-ನಿಧಿ ಮತ್ತು ಪ್ರಧಾನಮಂತ್ರಿ ಶ್ರೀ ವಿಶ್ವಕರ್ಮ ಯೋಜನೆಯ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ತಿಳಿಸಿದರು.

ಈ ಹಿಂದೆ ಬೀದಿಬದಿ ವ್ಯಾಪಾರವನ್ನು ವ್ಯವಸ್ಥಿತಗೊಳಿಸುವ ನಿಟ್ಟಿನಲ್ಲಿ ವ್ಯಾಪಾರ ವಲಯ ಹಾಗೂ ವ್ಯಾಪಾರ ಮುಕ್ತ ವಲಯಗಳನ್ನು ಗುರುತಿಸಲಾಗಿತ್ತು. ಆದರೆ ನಂತರದಲ್ಲಿ ಅವೈಜ್ಞಾನಿಕವಾಗಿ ವ್ಯಾಪಿಸಿಕೊಂಡಿದೆ. ಆದ್ದರಿಂದ ಮತ್ತೆ ಪಾಲಿಕೆಯ ಎಲ್ಲಾ ವಲಯ ಕಚೇರಿ ವ್ಯಾಪ್ತಿಯಲ್ಲೂ ವ್ಯಾಪಾರ ವಲಯ ಹಾಗೂ ವ್ಯಾಪಾರ ಮುಕ್ತ ವಲಯವನ್ನು ಗುರುತಿಸಿ, ವರದಿ ಸಲ್ಲಿಸಬೇಕು ಎಂದು ಸೂಚನೆ ನೀಡಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳವನ್ನು ಗುರುತಿಸಲು ವಲಯ ಆಯುಕ್ತರು ತಮ್ಮ ಅಧಿಕಾರಿಗಳಿಗೆ ಗಡುವು ನೀಡಬೇಕು. ಅರ್ಹ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳನ್ನು ವಿತರಿಸುವ ಮೂಲಕ ಅವರ ಜೀವನೋಪಾಯಕ್ಕೆ ನೆರವಾಗಬೇಕು ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡಬೇಕು. ಕೆಲವರಿಂದ ಎಲ್ಲಾ ವ್ಯಾಪಾರಿಗಳಿಗೂ ತೊಂದರೆ ನೀಡಬಾರದು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

30 ಸಾವಿರ ನೋಂದಣಿ?: ಪಿಎಂ ಸ್ವ-ನಿಧಿ ಯೋಜನೆಯಡಿ ನಗರದಲ್ಲಿ 30 ಸಾವಿರ ಮಂದಿ ಬೀದಿಬದಿ ವ್ಯಾಪಾರಿಗಳೆಂದು ಸ್ವಯಂ ನೋಂದಣಿ ಮಾಡಿಕೊಂಡಿದ್ದಾರೆ. ಪಾಲಿಕೆ ವತಿಯಿಂದ 3,416 ವ್ಯಾಪಾರಿಗಳ ಗುರುತಿಸಿ, ಗುರುತಿನ ಚೀಟಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಸಮೀಕ್ಷೆ ನಡೆಸಿ, ಅರ್ಹ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಿಸಲಾಗುವುದು. ಉದಯಗಿರಿ ಹಾಗೂ ಬಲ್ಲಾಳ್ ವೃತ್ತದ ಬಳಿ ಪಾಲಿಕೆಯಿಂದ ವ್ಯಾಪಾರ ವಲಯ ನಿರ್ಮಿಸಲಾಗಿದ್ದು, ಉದ್ಘಾಟನೆ ಹಂತದಲ್ಲಿದೆ ಎಂದು ಪಾಲಿಕೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬೀದಿಬದಿ ವ್ಯಾಪಾರಿಗಳ ಸಮಿತಿಯ ಹಿರಿಯ ಸದಸ್ಯ ಮಾತನಾಡಿ, ನಗರದಲ್ಲಿ ಬೀದಿಬದಿ ವ್ಯಾಪಾರಿಗಳ ಸಂಖ್ಯೆ 15 ಸಾವಿರಕ್ಕಿಂತ ಕಡಿಮೆ ಇಲ್ಲ. ಆದರೆ ಪಾಲಿಕೆಯಿಂದ ಸುಮಾರು ಒಂದೂವರೆ ಸಾವಿರ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಿರಬಹುದು. ಗುರುತಿನ ಚೀಟಿ ಪಡೆದವರು ನಿಗದಿಪಡಿಸಿದ ಸ್ಥಳದಲ್ಲೇ ವ್ಯಾಪಾರ ನಡೆಸಬೇಕೆಂಬ ನಿಯಮವಿದೆಯಾದರೂ ಅದನ್ನು ಕೆಲವರು ಪಾಲಿಸುತ್ತಿಲ್ಲ ಎಂದು ತಿಳಿಸಿದರು.

ನ.22ರಂದು ಯುವ ಕಾಂಗ್ರೆಸ್ ಪ್ರತಿಭಟನೆ



ಬಿಜೆಪಿ, ಜೆಡಿಎಸ್ ವಿರುದ್ಧ ಪ್ರತಿಭಟನೆ ನಡೆಸಲು ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೈಸೂರು, ನ.18(ಎಸ್‌ಪಿಎನ್)– ದಿನನಿತ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸುಳ್ಳು ಆರೋಪ ಮಾಡಿ ನೈತಿಕವಾಗಿ ಕುಗ್ಗಿಸುತ್ತಿರುವ ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಯುವ ಕಾಂಗ್ರೆಸ್ ವತಿಯಿಂದ ನ.22ರಂದು ಪ್ರತಿಭಟನೆ ನಡೆಸಲು ಸೋಮವಾರ ತೀರ್ಮಾನಿಸಲಾಯಿತು.

ಮೈಸೂರು ಜಲದರ್ಶಿನಿ ಸರ್ಕಾರಿ ವಸತಿ ಗೃಹದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಮುಖಂಡ ಎಂ.ಎಸ್.ಶಶಾಂಕ್ ನೇತೃತ್ವದಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತು. ಶಶಾಂಕ್ ಮಾತನಾಡಿ, ಮುಡಾ, ವಕ್ಫ್, ವಾಲ್ಮೀಕಿ ಹಗರಣ ಹಾಗೂ ಇತರೆ ವಿಷಯಗಳಲ್ಲಿ ಬಿಜೆಪಿ, ಜೆಡಿಎಸ್ ನಾಯಕರು ದಿನನಿತ್ಯ ಮಾಧ್ಯಮಗಳ ಮೂಲಕ ಸುಳ್ಳು ಆರೋಪಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಡುತ್ತಿದ್ದು, ಇದರಿಂದ ಸಿಎಂ ತೀವ್ರವಾಗಿ ಮನನೊಂದಿದ್ದಾರೆ ಎಂದರು.

ನಮ್ಮ ಸಾಹೇಬ(ಸಿಎಂ ಸಿದ್ದರಾಮಯ್ಯ)ರು ಇತ್ತೀಚೆಗೆ ಯಾವುದೇ ಸಾರ್ವಜನಿಕ ಸಭೆ, ಸಮಾರಂಭದಲ್ಲಿ ಭಾವುಕರಾಗಿ ಮಾತನಾಡುತ್ತಿದ್ದಾರೆ. ಹಾಗಾಗಿ 'ಸಾಹೇಬರ ಪರವಾಗಿ ನಾವಿದ್ದೇವೆ' ಎಂಬ ನಾಮಫಲಕದೊಂದಿಗೆ ನ.22ರಂದು ಬೆಳಗ್ಗೆ 11.30ಕ್ಕೆ ನಗರ ರಾಮಸ್ವಾಮಿ ವೃತ್ತದಲ್ಲಿ 500 ಮಂದಿ ಕಾಂಗ್ರೆಸ್ ಯುವ ಕಾರ್ಯಕರ್ತರು, ಸಿದ್ದರಾಮಯ್ಯನವರ ಅಭಿಮಾನಿಗಳು ಒಗ್ಗೂಡಿ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳುವಂತೆ ಸಭೆ ತೀರ್ಮಾನಿಸಿತು.

ಈ ವೇಳೆ ಕುಮಾರ್, ದಡದಹಳ್ಳಿ ಮಾದೇವ್, ಹೇಮಂತ್, ಶಿವಣ್ಣ, ಹದಿನಾರು ಅಭಿಷೇಕ, ಮಜೀದ್ ಹಿದಾಯತ್, ಶಿವಕುಮಾರ್, ಅವಿನಾಶ್, ಮಹದೇವು, ಶಿವಲಿಂಗ, ಕುಮಾರ, ರಾಚಪ್ಪ, ರವಿ, ಯುವ ವಕೀಲೆ ಹೇಮಾ, ಪುಟ್ಟು, ನಿಖಿಲ್, ಚಂದನ್, ಸಚಿನ್, ಮಹೇಶ್ ಭಾಗವಹಿಸಿದ್ದರು.

'ವಕ್ಫ್ ಜಿಹಾದ್' ಹೆಸರಲ್ಲಿ ಇಂದು ಆರ್.ಅಶೋಕ್ ಪ್ರತಿಭಟನೆ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿ ರೈತರ, ಮಠಮಾನ್ಯಗಳ, ದೇವಾಲಯಗಳ ಆಸ್ತಿ ವಕ್ಫ್‌ಗೆ ಪರಭಾರೆ ಮಾಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ವತಿಯಿಂದ ನಾಳೆ (ನ.19) ಚಿಕ್ಕಬಳ್ಳಾಪುರದಲ್ಲಿ ಬೃಹತ್ ಹೋರಾಟ ನಡೆಸಲು ತೀರ್ಮಾನಿಸಲಾಗಿದ್ದು, ವಿಪಕ್ಷನಾಯಕ ಆರ್.ಅಶೋಕ್ ಭಾಗಿಯಾಗಲಿದ್ದಾರೆ. ಮೊದಲಿಗೆ ಮುದ್ದೇನಹಳ್ಳಿಯ ಸರ್.ಎಂ ವಿಶ್ವೇಶ್ವರಯ್ಯನವರ ಸಮಾಧಿಗೆ ಭೇಟಿ ನೀಡಿ ಪುಷ್ಪನಮನ ಸಲ್ಲಿಸಲಿದ್ದಾರೆ. ನಂತರ ವಿಶ್ವೇಶ್ವರಯ್ಯನವರು ಓದಿದ್ದ ಕಂದವಾರ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಲಿದ್ದಾರೆ.

ಕಂದವಾರ ಸರ್ಕಾರಿ ಶಾಲೆ ಸಹ ವಕ್ಫ್ ಆಸ್ತಿಯಾಗಿತ್ತು. ಪ್ರಕರಣ ವರದಿ ನಂತರ ಜಿಲ್ಲಾಡಳಿತ ವಕ್ಫ್ ಆಸ್ತಿಯಿಂದ ಸರ್ಕಾರಿ ಶಾಲೆ ಆಸ್ತಿ ಎಂದು ಬದಲಾವಣೆ ಮಾಡಿದೆ. ನಂತರ ಚಿಕ್ಕಬಳ್ಳಾಪುರ ನಗರದಲ್ಲಿ ಸಂಸದ ಸುಧಾಕರ್ ನೇತೃತ್ವದಲ್ಲಿ ನಡೆಯಲಿರುವ ವಕ್ಫ್ ಜಿಹಾದ್ ಹೆಸರಿನ ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ.

ಶಾಸಕ ಹರೀಶ್‌ಗೌಡರಿಗೆ ಅಭಿನಂದನೆ



ಸಂತ ಕವಿ ಶ್ರೀ ಕನಕದಾಸರ 537ನೇ ಜಯಂತಿ ಅಂಗವಾಗಿ ಮೈಸೂರು ಯುವ ಬಳಗದ ವತಿಯಿಂದ ಕಲಾ ಮಂದಿರದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿ ನಂತರ ಶಾಸಕ ಹರೀಶ್‌ಗೌಡರಿಗೆ ಕುರಿ ಕಂಬಳಿ ಹೊದಿಸಿ, ಕನಕದಾಸರ ಭಾವಚಿತ್ರ ನೀಡಿ, ಅಭಿನಂದಿಸಲಾಯಿತು. ನವೀನ್ ರವಿಚಂದ್ರ, ಲೋಕೇಶ್, ನಿಶಾಂತ್, ಪಟೇಲ್, ಚಂದ್ರಶೇಖರ್, ಕರಿಗೌಡ, ಮಂಜುಳಾ, ಶಾಂತಿ, ಮಂಗಳ, ಗುರು, ಚೇತನ್ ಇತರರು ಈ ವೇಳೆ ಉಪಸ್ಥಿತರಿದ್ದರು.

ಶಾಸಕ ಶ್ರೀವತ್ಸರಿಗೆ ಅಭಿನಂದನೆ





ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಕಚೇರಿ ಉದ್ಘಾಟನೆ ವೇಳೆ ಶಾಸಕರನ್ನು ಮಾಜಿ ಮೇಯರ್ ಸಂದೇಶ್ ಸ್ವಾಮಿ, ಎನ್.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸ್ಮಾರ್ಟ್ ಮಂಜುನಾಥ್, ಮಾಜಿ ಅಧ್ಯಕ್ಷ ಭಾನುಪ್ರಕಾಶ್, ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಇನ್ನಿತರರು ಅಭಿನಂದಿಸಿದರು.

ಮಾದಕ ದ್ರವ್ಯಗಳ ನಾಶ

ಮೈಸೂರು, ನ.18–ಅಬಕಾರಿ ಇಲಾಖೆಯಿಂದ ವಿವಿಧ ಮೊಕದ್ದಮೆಗಳಲ್ಲಿ ವಶಪಡಿಸಿಕೊಂಡ ಮದ್ಯದ ದಾಸ್ತಾನಿನ ಪೈಕಿ ಒಟ್ಟಾರೆ 13 ಮೊಕದ್ದಮೆಗಳಿಂದ ವಶಪಡಿಸಿಕೊಂಡ 433.82 ಲೀ ಮದ್ಯ 91.140 ಲೀ ಬಿಯರ್ ಅನ್ನು ಮೈಸೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಉಪ ಆಯುಕ್ತರ ಆದೇಶದ ಮೇರೆಗೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಹುಣಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಮೋಹನ್ ಕುಮಾರ್.ಎಂ.ಡಿ ಅವರ ನೇತೃತ್ವದಲ್ಲಿ ಹಾಗೂ ಕೆ.ಆರ್.ನಗರ ತಾಲೂಕು ದಂಡಾಧಿಕಾರಿ ಸುರೇಂದ್ರಮೂರ್ತಿ ಅವರ ಸಮ್ಮುಖದಲ್ಲಿ ನವೆಂಬರ್ 15ರಂದು ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕ ಲೋಕೇಶ್.ವೈ.ಎಸ್ ಹಾಗೂ ಹುಣಸೂರಿನ ಕೆ.ಎಸ್.ಬಿ.ಸಿ.ಎಲ್ ಡಿಪೋ ಅಧಿಕಾರಿಗಳು ಹಾಗೂ ಕೆ.ಆರ್.ನಗರ ವಲಯ ಸಿಬ್ಬಂದಿ ವರ್ಗದವರ ಸಮಕ್ಷಮ ನಾಶಪಡಿಸಲಾಯಿತು ಎಂದು ಕೆ.ಆರ್. ನಗರ ವಲಯದ ಅಬಕಾರಿ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಟಿ.ಎಸ್ ಶ್ರೀವತ್ಸ ಕಚೇರಿ ಉದ್ಘಾಟನೆ



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್ ಶ್ರೀವತ್ಸ ಅವರಿಗೆ ಅಗ್ರಹಾರದ ನೂತನ ಕಚೇರಿ 'ಕರ್ತವ್ಯ ಭವನ' ಉದ್ಘಾಟನಾ ಕಾರ್ಯಕ್ರಮದಲ್ಲಿ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ಶ್ರೀನಿವಾಸನ ಭಾವಚಿತ್ರ ನೀಡಿ ಶುಭ ಕೋರಲಾಯಿತು. ಸೊಸೈಟಿ ಅಧ್ಯಕ್ಷ ಎಂ.ಡಿ. ಗೋಪಿನಾಥ್, ಉಪಾಧ್ಯಕ್ಷೆ ಎಂ.ಎನ್. ಸೌಮ್ಯ, ಖಜಾಂಚಿ ಕೆ.ನಾಗರಾಜ, ನಿರ್ದೇಶಕ ಮಂಡಳಿ ಸದಸ್ಯರಾದ ಸಿ.ವಿ. ಪಾರ್ಥಸಾರಥಿ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಎಂ.ಆರ್. ಬಾಲಕೃಷ್ಣ, ಹೆಚ್.ಪಿ. ಚೇತನ್, ಎನ್. ಫಣಿರಾಜ್, ವಿಕ್ರಂ ಅಯ್ಯಂಗಾರ್, ಪಿ. ಮಹಿಮ, ಎನ್ ನಾಗಶ್ರೀ, ಕೆ ಎನ್ ಅರುಣ್, ಶಿವರುದ್ರಪ್ಪ, ಎಸ್. ರಾಜಮ್ಮ, ಎಂ.ಪಿ. ಶಾಶ್ವತಿ ನಾಯಕ, ಪ್ರಭಾರ ಕಾರ್ಯದರ್ಶಿ ಎನ್.ವೀಣಾ, ಸಿಬ್ಬಂದಿ ವರ್ಗ ಈ ವೇಳೆ ಹಾಜರಿದ್ದರು.

ಕಾಂಗ್ರೆಸ್ ಶಾಸಕರಿಗೆ ಆಫರ್ ಬಗ್ಗೆ ಕೋರ್ಟ್ ಸ್ವಯಂ ಪ್ರಕರಣ ದಾಖಲಿಸಬೇಕು



ಬೆಂಗಳೂರು: ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ಬಂದಿದೆ ಎಂಬ ಸಿಎಂ ಹೇಳಿಕೆ ಮೇಲೆ ನ್ಯಾಯಾಲಯ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಬೇಕು. ಯಾರೆಲ್ಲಾ ಶಾಸಕರು ತಮಗೆ ಆಫರ್ ಬಂದಿದೆ ಎಂದು ಆರೋಪ ಮಾಡುತ್ತಿದ್ದಾರೋ ಅವರ ಮಂಪರು ಪರೀಕ್ಷೆ ಮಾಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಸರ್ಕಾರ ಕೆಡವಲು ಬಿಜೆಪಿಯಿಂದ 50 ಕೋಟಿ ಅಲ್ಲ 100 ಕೋಟಿ ರೂ. ಆಫರ್ ಮಾಡಿದ್ದಾರೆ ಎಂಬ ಶಾಸಕ ಗಣಿಗ ರವಿಕುಮಾರ್ ಹೇಳಿಕೆಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

ಸಿಎಂ ಅವರು ನಮ್ಮ ಮೇಲೆ ಶಾಸಕರ ಖರೀದಿ ಬಗ್ಗೆ ಗಂಭೀರ ಆರೋಪ ಮಾಡಿದ್ದಾರೆ. ಈ ವಿಚಾರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹಳ ಗಂಭೀರವಾಗಿದ್ದು, ಖುದ್ದು ನ್ಯಾಯಾಲಯ ಮಧ್ಯಪ್ರವೇಶ ಮಾಡಬೇಕಿದೆ. ಸಿಎಂ ಹೇಳಿಕೆ ಮೇಲೆ ನ್ಯಾಯಾಲಯ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಬೇಕು. ಇನ್ನೂ ಗಣಿಗ ರವಿ ಸೇರಿ ಯಾವ್ಯಾವ ಶಾಸಕರು ತಮಗೆ ಆಫರ್ ಬಂದಿದೆ ಎಂದು ಹೇಳುತ್ತಿದ್ದಾರೋ ಆ ಎಲ್ಲಾ ಶಾಸಕರ ಮಂಪರು ಪರೀಕ್ಷೆ ಮಾಡಿಸಬೇಕು. ಕಾಂಗ್ರೆಸ್ ಶಾಸಕರ ಮಂಪರು ಪರೀಕ್ಷೆ ಮಾಡಿದರೆ ಸತ್ಯ ಗೊತ್ತಾಗುತ್ತೆ.

ಬಿಜೆಪಿಯಿಂದ ಯಾರು ಇವರನ್ನು ಸಂಪರ್ಕಿಸಿದ್ದರು. ಯಾವಾಗ, ಏನು ಆಫರ್ ಕೊಟ್ಟಿದ್ದರು ಅನ್ನೋದು ಮಂಪರು ಪರೀಕ್ಷೆಯಲ್ಲಿ ಗೊತ್ತಾಗುತ್ತೆ. ಸಿಎಂ ಇಂಥ ಗಂಭೀರ ಆರೋಪ ಮಾಡಿ ಯಾಕೆ ಸುಮ್ಮನಿದ್ದಾರೆ. ಅವರ ಹೇಳಿಕೆಗೆ ಆಧಾರ ಇಲ್ಲ ಅಂತ ಸಿಎಂ ಸುಮ್ಮನಿದ್ದಾರಾ. ಸಿಎಂ ತಾವೇ ಮಾಡಿರುವ ಆರೋಪದ ಬಗ್ಗೆ ತನಿಖೆ ನಡೆಸಲಿ, ಎಸ್‌ಐಟಿ ರಚಿಸಿ ತನಿಖೆಗೆ ಕೊಡಲಿ ಎಂದು ಆಗ್ರಹಿಸಿದ್ದಾರೆ.

ಬಿಸಿಎಂ ಹಾಸ್ಟೆಲ್ ವಾರ್ಡನ್ ನಾಪತ್ತೆ

ಮೈಸೂರು, ನ. 18– ಬಿಸಿಎಂ ಹಾಸ್ಟೆಲ್ ವಾರ್ಡನ್ ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಪಿರಿಯಾಪಟ್ಟಣ ತಾಲೂಕು ಕೋಮಲಾಪುರ ಹಾಗೂ ಕಿತ್ತೂರಿನ ಬಿಸಿಎಂ ಹಾಸ್ಟೆಲ್ ವಾರ್ಡನ್ ಆಗಿದ್ದು, ಮೈಸೂರಿನ ಅಶೋಕಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಸವಿದ್ದ ಪಿ. ಜಯರಾಮ(55) ನಾಪತ್ತೆಯಾಗಿದ್ದಾರೆ.

ನವೆಂಬರ್ 13ರಂದು ತನ್ನ ಹೋಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ (ಕೆಎ 09–ಇಆರ್ 1307) ಮನೆಯಿಂದ ಹೋದವರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸ್ಕೂಟರ್ ನಿಲ್ಲಿಸಿ, ಅದರ ಡಿಕ್ಕಿಯಲ್ಲಿ ತನ್ನ ಮೊಬೈಲ್ ಅನ್ನು ಇಟ್ಟು ನಾಪತ್ತೆಯಾಗಿದ್ದಾರೆ. ಈ ಸಂಬಂಧ ಅವರ ಪತ್ನಿ ಪದ್ಮಾವತಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ನ.21ರಂದು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಮೈಸೂರು,ನ.18(ಪಿಎಂ)– ಮೈಸೂರಿನ ಯಾದವಗಿರಿಯ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ನ.21ರಂದು ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಪಿಯು ಕಾಲೇಜು ವಿದ್ಯಾರ್ಥಿನಿಯರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ ಆಯೋಜಿಸಲಾಗಿದೆ ಅಂದು ಬೆಳಗ್ಗೆ 10ಕ್ಕೆ ಸ್ವಾಮಿ ಮಹಾಮೇಧಾನಂದ ಅವರಿಂದ ಮಾರ್ಗದರ್ಶಿ ಧ್ಯಾನ ನಡೆಯಲಿದೆ. 10.30ಕ್ಕೆ 'ವೈಫಲ್ಯಗಳ ನಿರ್ವಹಣೆ' ಕುರಿತು ಸ್ವಾಮಿ ಮಹಾಮೇಧಾನಂದ ಉಪನ್ಯಾಸ ನೀಡಲಿದ್ದಾರೆ. 11.30ಕ್ಕೆ 'ಸೃಜನಶೀಲ ಕಲಿಕೆ' ಕುರಿತು ಎಂ.ಎಸ್.ರಘು ಉಪನ್ಯಾಸ ನೀಡಲಿದ್ದಾರೆ. ಮಧ್ಯಾಹ್ನ 1.45ಕ್ಕೆ ಮ್ಯೂಸಿಯಂಗೆ ಭೇಟಿ ನೀಡುವ ಕಾರ್ಯಕ್ರಮ ನಡೆಯಲಿದೆ. ಬಳಿಕ 2.30ಕ್ಕೆ 'ನಾಯಕತ್ವ ಮತ್ತು ವೃತ್ತಿ ಮಾರ್ಗದರ್ಶನ' ಕುರಿತು ಡಿ.ಟಿ.ರಾಮಾನುಜಂ ಉಪನ್ಯಾಸ ನೀಡಲಿದ್ದಾರೆ. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಕನಕ ಜಯಂತಿ ಆಚರಣೆ



ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಅಧ್ಯಾಪಕರು ಪುಷ್ಪನಮನ ಸಲ್ಲಿಸಿದರು.

ಮೈಸೂರು, ನ.18(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಸೋಮವಾರ ಸಂತ ಕನಕದಾಸರ ಜಯಂತಿ ಆಚರಿಸಲಾಯಿತು.

ಈ ವೇಳೆ ಅಧ್ಯಾಪಕ ಗೋವಿಂದ ರಾಜು ಮಾತನಾಡಿ, ಸಮಾನತೆಗಾಗಿ ಕನಕದಾಸರು ಪ್ರತಿಭಟನೆ ದಾಖಲಿಸಿದರು. ಕೃಷ್ಣನ ದರ್ಶನಕ್ಕೆ ಅವಕಾಶ ನೀಡದಿದ್ದಾಗ ಕನಕದಾಸರೊಂದಿಗೆ ಅವರ ಅನುಯಾಯಿಗಳು ಪ್ರತಿಭಟಿಸಿದ್ದರು. ಶೈಕ್ಷಣಿಕವಾಗಿ ಮಾತ್ರವಲ್ಲದೇ, ಕ್ಷತ್ರಿಯ ವಿದ್ಯೆಗಳಲ್ಲೂ ಪಾಂಡಿತ್ಯ ಹೊಂದಿದ್ದ ಕನಕರು, ಸಮ ಸಮಾಜದ ಕನಸು ಹೊಂದಿದ್ದರು. ಸ್ತ್ರೀ ಸ್ವಾತಂತ್ರ್ಯ ಅವರ ಆಶಯವಾಗಿತ್ತು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಧ್ಯೇಯ ಅವರ ರಚನೆಗಳಲ್ಲಿ ಕಾಣುತ್ತೇವೆ ಎಂದರು.

ಪ್ರಾಂಶುಪಾಲ ಡಾ.ಅಬ್ದುಲ್ ರಹಿಮಾನ್ ಮಾತನಾಡಿ, ಭಕ್ತಿ ಮಾರ್ಗದ ಮೂಲಕ ಜಾತಿರಹಿತ ಸಮಾಜ ನಿರ್ಮಾಣಕ್ಕೆ ದಾಸ ಶ್ರೇಷ್ಠ ಕನಕದಾಸರ ಕೊಡುಗೆ ಅಪಾರ ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಸಾಂಸ್ಕೃತಿಕ ಸಮಿತಿ ಖಜಾಂಚಿ ಡಾ.ಜಿ.ಎಲ್.ಬಸವರಾಜು, ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಡಾ.ಹೆಚ್.ಜೆ.ಭೀಮೇಶ್, ಅಧ್ಯಾಪಕರಾದ ಪ್ರೊ.ಶಿವಲಿಂಗಸ್ವಾಮಿ, ಕೆ.ಎಸ್.ಮಂಜುನಾಥ, ಡಾ.ಯೋಯಜಾಕ್ಷ ಮನಿತಾ, ವಿಂದು ವಾಹಿನಿ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ

ಜಾತಿ ವ್ಯವಸ್ಥೆ ಪ್ರಬಲವಾಗಿ ಖಂಡಿಸಿದ ಸಂತಶ್ರೇಷ್ಠ ಕನಕದಾಸ

ಸಂಸದ ಸುನೀಲ್ ಬೋಸ್



ತಿ.ನರಸೀಪುರದಲ್ಲಿ ನಡೆದ ಕನಕದಾಸ ಜಯಂತಿಯನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿ ಮಾತನಾಡಿದರು.

ತಿ.ನರಸೀಪುರ, ನ.18– 16ನೇ ಶತಮಾನದಲ್ಲಿದ್ದ ಸಾಮಾಜಿಕ ಅಸಮಾನತೆ ಅತಿಹೆಚ್ಚು ಕನಕದಾಸರು ಜಾತಿ ವ್ಯವಸ್ಥೆಯನ್ನು ಪ್ರಬಲವಾಗಿ ಖಂಡಿಸಿದ ಸಂತ ಶ್ರೇಷ್ಠರು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಸೋಮವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶ್ರೀಭಕ್ತ ಕನಕದಾಸರ ಜಯಂತ್ಯೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಮೊದಲು ತಿಮ್ಮಪ್ಪನಾಯಕರಾಗಿ ನಂತರ ಕನಕದಾಸರಾದ ಬಳಿಕ ವ್ಯಾಸರಾಯರ ಶಿಷ್ಯರಾಗಲು ಹೋದಾಗ ಶೂದ್ರ ಸಮುದಾಯಕ್ಕೆ ಸೇರಿದವರು ಎಂದು ದೂರ ತಳ್ಳಲ್ಪಡುತ್ತಾರೆ. ಅಲ್ಲಿಂದಲೇ ಕೀರ್ತನೆಗಳ ಮೂಲಕ ಸಾಮಾಜಿಕ ಜಾಗೃತಿ ಆರಂಭಿಸಿದರು. ಕುಲದ ನೆಲೆಯನ್ನು ಬಲ್ಲಿರಾ ಎನ್ನುವ ಅಂದಿನ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿದೆ ಎಂದರು.

ನಾಡಿನಲ್ಲಿ ಬಸವಾದಿ ಶರಣರು ಜನ್ಮತಾಳಿದ್ದರೆ, ಗೌತಮ ಬುದ್ಧ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಹಾಗೂ ಇನ್ನೂ ಹಲವು ನಾಯಕರು ಬದುಕಿನ ಆದರ್ಶ ಹಾಗೂ ಸನ್ಮಾರ್ಗವನ್ನು ನಮ್ಮೆಲ್ಲರಿಗೂ ಬಿಟ್ಟು ಹೋಗಿದ್ದಾರೆ. ಸಾಮಾಜಿಕ ವ್ಯವಸ್ಥೆ ಸರಿಪಡಿಸಲು ದೇವರು ಆಗಾಗ ಮಹಾತ್ಮರ ರೂಪದಲ್ಲಿ ಭೂಮಿಗೆ ಬರುತ್ತಾರೆ. ಚಿನ್ನದ ಬದಲು ಚಿನ್ನದಂತಹ ಮನಸ್ಸಿದ್ದರೆ ದೊಡ್ಡ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದು ಚಿನ್ನದ ಕೊಪ್ಪರಿಗೆಯಲ್ಲಿ ಜನಿಸಿದ ಕನಕದಾಸರು ಸಂದೇಶ ನೀಡಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಎಂಎಲ್‌ಸಿ ಡಾ.ಯತೀಂದ್ರ, 16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಬಹಳ ಪ್ರಬಲವಾಗಿತ್ತು ತಳ ಸಮುದಾಯಗಳು ಶೋಷಣೆಗೆ ಒಳಗಾಗಿದ್ದ ವೇಳೆ ಅವರ ಧ್ವನಿಯಾಗಿ ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿದ್ದರು. ಕನಕದಾಸರು ಬರಿ ದಾರ್ಶನಿಕರು, ಸಾಹಿತಿ ಮಾತ್ರವಲ್ಲ, ಅವರೊಬ್ಬ ಸಮಾಜ ಸುಧಾರಕರು. ದಂಡನಾಯಕರಾಗಿದ್ದ ಕನಕ ನಾಯಕರು ದಾಸತ್ವದ ಕಡೆಗೆ ತೆರಳಿ ಭಗವಂತನನ್ನು ಆರಾಧಿಸುವ ಮೂಲಕ ಕೀರ್ತನೆಗಳ ಮೂಲಕ ಆಧ್ಯಾತ್ಮಿಕ ಚಿಂತನೆಗಳನ್ನು ಮನುಕುಲಕ್ಕೆ ಬಿತ್ತಿ ಬದುಕಿನ ಸನ್ಮಾರ್ಗ ತೋರಿಸಿದ್ದಾರೆ. ಕನಕದಾಸರು ತೋರಿದ ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕು ಎಂದರು.

ಮುಖ್ಯ ಭಾಷಣಕಾರ, ಹಿರಿಯ ಶಿಕ್ಷಕ ಎಂ.ಮಹದೇವ್ ಕನಕದಾಸರ ಹಿನ್ನೆಲೆ ಹಾಗೂ ಚಿಂತನೆ ತಿಳಿಸಿಕೊಟ್ಟರು. ಶ್ರೀವೆಂಕಟೇಶ್ವರ ದೇವಾಲಯದ ದೊರೆಸ್ವಾಮಿ ಸ್ವಾಮೀಜಿ, ಜಿಪಂ ಮಾಜಿ ಸದಸ್ಯ ಕೆ. ಮಹದೇವ, ಪುರಸಭೆ ಅಧ್ಯಕ್ಷೆ ಬಿ.ವಸಂತ ಶ್ರೀಕಂಠ, ಸದಸ್ಯರಾದ ಬಾದಾಮಿ ಮಂಜು, ಟಿ.ಎಂ.ನಂಜುಂಡಸ್ವಾಮಿ, ಸಿ.ಪ್ರಕಾಶ್, ಎನ್.ಸೋಮು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಕುರುಬರ ಸಂಘದ ಅಧ್ಯಕ್ಷ ಎಂ.ಎಸ್. ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಸವರಾಜು, ಮಾಜಿ ಅಧ್ಯಕ್ಷ ಟಿ.ಎಸ್. ಪ್ರಶಾಂತ್ ಬಾಬು, ಕಾರ್ಯಾಧ್ಯಕ್ಷ ಮಾದೇಶ, ಖಜಾಂಚಿ ಮಲ್ಲೇಶ, ನಿರ್ದೇಶಕರಾದ ಹೆಚ್.ಸಿ.ಅರುಣ್ ಕುಮಾರ್, ಸತೀಶ, ಎಂ.ಬಿ.ಚಂದ್ರ ಶೇಖರ್, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಎಂ.ರಮೇಶ್, ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಸದಸ್ಯರಾದ ಗಣೇಶ್, ರಾಮಲಿಂಗಯ್ಯ, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಕೆಪಿಸಿಸಿ ಅಲ್ಪಸಂಖ್ಯಾತರ ಸಂಚಾಲಕ ಬಿ.ಮನ್ಸೂರ್ ಅಲಿ, ಪಪಂ ಮಾಜಿ ಸದಸ್ಯ ರಾಘವೇಂದ್ರ, ಮುಖ್ಯಾಧಿಕಾರಿ ವಾಣಿ ಕುಮಾರಿ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಬಿಇಓ ಎಸ್.ಸಿ. ಶಿವಮೂರ್ತಿ, ಬಿಆರ್‌ಸಿ ನಾಗೇಶ್, ಮುಖಂಡರಾದ ಹಾಳೇಗೌಡ, ಬಸವಣ್ಣ, ಗುರುಸ್ವಾಮಿ, ಮನ್ಸೂರ್ ಅಹಮದ್, ಬಸವಣ್ಣ, ಶಿವರಾಂ, ಗುರುಮೂರ್ತಿ, ಎ.ಬಿ.ಮಂಜುನಾಥ್, ನಾಗೇಶ್, ರಚ್ಚು ಕಾಂತರಾಜು, ಚಂದ್ರಮ್ಮ, ಮಹದೇವಮ್ಮ, ಸಿದ್ದಶೆಟ್ಟಿ ಹಾಗೂ ಇತರರಿದ್ದರು.

ವೈಭವದ ಮೆರವಣಿಗೆ

ಪಟ್ಟಣದ ಶ್ರೀಗುಂಜಾ ನರಸಿಂಹ ಸ್ವಾಮಿ ದೇವಾಲಯದ ಬಳಿ ಶ್ರೀಭಕ್ತ ಕನಕದಾಸರ ಪುತ್ಥಳಿ ಮೆರವಣಿಗೆಗೆ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರು ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಂದಿ ಕಂಬ, ವೀರಗಾಸೆ, ಡೊಳ್ಳು ಕುಣಿತ, ಕೀಲುಕುದುರೆ, ಗೊರವನ ಕುಣಿತ, ಕಂಸಾಳೆ, ದೊಣ್ಣೆ ವರಸೆ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ತಾಲೂಕು ಕಚೇರಿವರೆಗೂ ಸಾಗಿದವು.

ಜಯಪುರದಲ್ಲಿ ಕನಕದಾಸ ಜಯಂತಿ



ಮೈಸೂರು ತಾಲೂಕಿನ ಜಯಪುರ ಗ್ರಾಮದ ಹೊಸಕೆರೆ ಬಡಾವಣೆಯಲ್ಲಿ ಕನಕದಾಸ ಯುವ ಬಳಗದಿಂದ ಕನಕದಾಸ ಜಯಂತಿ ಆಚರಿಸಲಾಯಿತು. ಗ್ರಾಪಂ ಸದಸ್ಯರಾದ ಎಂ.ನಾಗರಾಜು, ಬಿ.ರೇಣುಕಾ, ಯುವ ಬಳಗದ ಸದಸ್ಯರು ಭಾಗವಹಿಸಿದ್ದರು.

ಪ್ರತಿಯೊಬ್ಬರೂ ಕನಕದಾಸರ ತತ್ವಾದರ್ಶ ಪಾಲಿಸೋಣ



ಸರಗೂರಲ್ಲಿ ಕನಕದಾಸರ ಜಯಂತಿ ನಡೆಯಿತು.

ಸರಗೂರು, ನ.18– ಕನಕದಾಸರು ಮನುಕುಲಕ್ಕೆ ನೀಡಿದ ಜ್ಞಾನ ಅಮೋಘವಾದದು. ಅವರ ಸಾಹಿತ್ಯ ಮನುಕುಲದ ಆಸ್ತಿ. ಕನಕದಾಸರ ಜಯಂತಿಯನ್ನು ಪ್ರತಿಯೊಬ್ಬರೂ ಆಚರಿಸುವ ಮೂಲಕ ಅವರ ತತ್ವಾದರ್ಶಗಳನ್ನು ಪಾಲಿಸೋಣ ಎಂದು ತಹಸೀಲ್ದಾರ್ ಮೋಹನ ಕುಮಾರಿ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಕನಕದಾಸ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕನಕದಾಸರು ಒಬ್ಬ ಮಹಾನ್ ವ್ಯಕ್ತಿ. ಬಹಳಷ್ಟು ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ್ದಾರೆ. ಅಂತಹ ದಾಸಶ್ರೇಷ್ಠರ ಜಯಂತಿ ಆಚರಿಸುವ ಮೂಲಕ ಅವರ ಆಲೋಚನೆ ಮತ್ತು ಆದರ್ಶಗಳನ್ನು ಸಾರ್ವಜನಿಕರು ಹಾಗೂ ಯುವಪೀಳಿಗೆಗೆ ತಲುಪುವಂತೆ ಮಾಡಬೇಕು ಎಂದರು.

ತಾಲೂಕು ಕಸಾಪ ಅಧ್ಯಕ್ಷ ಎಂ. ಕೆಂಡಗಣ್ಣಸ್ವಾಮಿ ಮಾತನಾಡಿ, ಕನಕದಾಸರ ಆಶಯದಂತೆ ನಾವೆಲ್ಲರೂ ಮನುಷ್ಯರಾಗಿ ಸನ್ಮಾರ್ಗದಲ್ಲಿ ಬಾಳ್ವೆ ನಡೆಯುವ ಜೊತೆಗೆ ನಮ್ಮಲ್ಲಿ ಹೃದಯ ಶ್ರೀಮಂತಿಕೆಯು ಇರಬೇಕು. ಆಗ ಮಾತ್ರ ಕನಕದಾಸರಂತಹ ಮಹನೀಯರು ಕಂಡ ಸಮಾಜ ನಿರ್ಮಿಸಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ ಹಾಗೂ ಇಲಾಖಾ ಅಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.

ಚಿನ್ನದ ಸರ ಕಳವು ಮಾಡಿದ್ದ ಇಬ್ಬರ ಬಂಧನ

ಹುಣಸೂರು, ನ.18– ಕುಡಿಯಲು ನೀರು ಕೇಳುವ ನೆಪದಲ್ಲಿ ಮಹಿಳೆಯ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಾಲಿಗ್ರಾಮ ತಾಲೂಕಿನ ಕೆಲ್ಲೂರು ಹೊಸಕೋಟೆ ಗ್ರಾಮದ ವಸಂತ ಹಾಗೂ ಗಿರೀಶ್ ಬಂಧಿತ ಆರೋಪಿಗಳು. ಇವರು ತಾಲೂಕಿನ ಹರವೆ ಕಲ್ಲಹಳ್ಳಿ ಗ್ರಾಮದ ನಿವಾಸಿ ಜವರಾಯಿಗೌಡರ ಮನೆಗೆ ಬಂದು ಕುಡಿಯಲು ನೀರು ಕೇಳಿದ್ದರು. ಈ ವೇಳೆ ಜವರಾಯಿಗೌಡರ ಪತ್ನಿ ಶಿವಲಿಂಗಮ್ಮ ನೀರು ತಂದು ಕೊಡುತ್ತಿದ್ದಂತೆ ಆಕೆಯ ಬಾಯಿ ಮುಚ್ಚಿ ಕೊರಳಿನಲ್ಲಿದ್ದ 40 ಗ್ರಾಂ ಚಿನ್ನದ ಮಾಂಗಲ್ಯ ಸರ ಅಪಹರಿಸಿದ್ದರು. ಈ ವೇಳೆ ಸರ ಕಿತ್ತು ಹೋಗಿ ಸ್ವಲ್ಪ ಭಾಗ ಶಿವಲಿಂಗಮ್ಮರ ಕೈಯಲ್ಲೇ ಉಳಿದಿತ್ತು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿತ್ತು. ಬಳಿಕ ಡಿವೈಎಸ್ಪಿ ಗೋಪಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಪಿಐ ಮುನಿಯಪ್ಪ ಮತ್ತು ತಂಡ ಆರೋಪಿಗಳನ್ನು ಪತ್ತೆ ಮಾಡಿ ಚಿನ್ನದ ಸರ ಸಹಿತ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳು ಕಳ್ಳತನ ಮಾಡಿದ್ದ ಸರವನ್ನು ಹುಣಸೂರಿನ ಗಿರವಿ ಅಂಗಡಿಯೊಂದಕ್ಕೆ ತೆರಳಿ ಲಕ್ಷ ರೂ. ನೀಡುವಂತೆ ತಿಳಿಸಿದ್ದಾರದರೂ ಅಂಗಡಿ ಮಾಲೀಕ 40 ಸಾವಿರ ಕೊಟ್ಟು ಕಳುಹಿಸಿದ್ದ. ಮತ್ತೆ ಬಾಕಿ ಹಣ ಕೇಳಲು ಬಂದ ವೇಳೆ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್‌ಐ ರಾಮು, ಎಎಸ್‌ಐ ಆಂಥೋಣಿ ಕ್ರೂಸ್, ಸೈಯದ್ ಹಿದಾಯತ್, ಇಬ್ರಾನ್ ಷರೀಫ್ ಇದ್ದರು.

ಕಾಂಗ್ರೆಸ್ ಕಚೇರಿಯಲ್ಲಿ ಕನಕದಾಸ ಜಯಂತಿ



ಕನಕದಾಸರ ಭಾವಚಿತ್ರಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಪುಷ್ಪನಮನ ಸಲ್ಲಿಸಿದರು.

ಹುಣಸೂರು, ನ.18– ಕನಕದಾಸರು ಎಲ್ಲಾ ಧರ್ಮಗಳಿಗಿಂತ ಮಾನವೀಯ ಧರ್ಮವೇ ಬದುಕಿಗೆ ಮುಖ್ಯ ಎಂದು ತಮ್ಮ ಕೀರ್ತನೆಗಳ ಮೂಲಕ ಲೋಕಕ್ಕೆ ಸಾರಿದ ಸಂದೇಶ ಇಂದು ಪಾಲನೆ ಆಗುತ್ತಿಲ್ಲ ಎಂದು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕನಕದಾಸ ಜಯಂತಿಯಲ್ಲಿ ಮಾತನಾಡಿದ ಅವರು, ಕುಲದ ನೆಲೆಯನ್ನು ಬಲ್ಲಿರಾ ಎಂದು ಕನಕದಾಸರು ತಮ್ಮ ದಾಸ ಸಾಹಿತ್ಯದಲ್ಲಿ ಕೇಳಿದರು. ಕುಲವನ್ನು ಬಿಟ್ಟು ಮಾನವ ಕುಲ ಪ್ರೀತಿಸಿ ಎಂದು ಅಂದೇ ಕನಕದಾಸರು ಹೇಳಿದ್ದಾರೆ. ಆದರೆ ನಾವು ಅದನ್ನು ಅರ್ಥೈಸಿಕೊಳ್ಳದೇ ಪ್ರಶ್ನೆಗೆ ಉತ್ತರ ಹುಡುಕುತ್ತಾ ಜಾತಿ ಜಾತಿಗಳ ಮೂಲವನ್ನು ಕಂಡು ಹಿಡಿಯುವ ಪ್ರಯತ್ನದೊಂದಿಗೆ ಸಾಮಾಜಿಕ ಸಾಮರಸ್ಯ ಕಾಪಾಡುವತ್ತ ಕೊಂಡೊಯ್ಯಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಹೆಚ್.ಎಸ್.ಕುಮಾರ್, ನಗರ ಸಭಾ ಸದಸ್ಯ ಸ್ವಾಮಿಗೌಡ, ಮುಖಂಡರಾದ ಬಸವರಾಜ್, ಜಯರಾಮ್, ಅಫ್ರೋಜ್, ನಾಗರಾಜ್, ವಕೀಲ ಚಂದ್ರಶೇಖರ್, ಮಂಜು, ಫೈಸಾಲ್, ಬಾಬು, ರಮೇಶ್ ಸೇರಿದಂತೆ ಇತರರಿದ್ದರು.

ಕನಕದಾಸರ ಕೀರ್ತನೆಗಳು ಇಂದಿಗೂ ಪ್ರಸ್ತುತ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ



ನಂಜನಗೂಡಲ್ಲಿ ಕನಕದಾಸ ಜಯಂತಿ ನಡೆಯಿತು.

ನಂಜನಗೂಡು, ನ.18– ಭಕ್ತ ಕನಕದಾಸರು ಸಾಹಿತ್ಯ ಮತ್ತು ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಕೀರ್ತನೆಗಳು ಶಾಸ್ತ್ರೀಯ ಸಂಗೀತದ ಬುನಾದಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ನಗರದ ಮಿನಿ ವಿಧಾನಸೌಧ ಆವರಣದಲ್ಲಿ ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಡೆದ ಭಕ್ತ ಕನಕದಾಸ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕದಾಸರ ಸಾಹಿತ್ಯ, ಕೀರ್ತನೆ, ಗೀತೆಗಳು, ಜ್ಞಾನದ ಆಗರವಿದ್ದಂತೆ. ಕೀರ್ತನೆಗಳು ಆಧ್ಯಾತ್ಮಿಕವಾಗಿ ಗೂಡಾರ್ಥವನ್ನು ಒಳಗೊಂಡಿದ್ದು ಸತ್ಯದ ಅರಿವು ಮೂಡಿಸುವ ಕೃತಿಗಳಾಗಿವೆ. ಅಲ್ಲದೇ 16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರು. ಆದರೆ ಇಂದಿಗೂ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ದೂರವಾಗದಿರುವುದು ದುರ್ದೈವ. ಜನರಲ್ಲಿ ಮೂಡಿರುವ ಮೇಲು ಕೀಳು ಎಂಬ ಮಾನಸಿಕ ಅಸ್ಪೃಶ್ಯತೆಯ ಮನೋ ಭಾವ ಅಳಿಯದೆ ಜಾತಿ ವ್ಯವಸ್ಥೆ ದೂರವಾಗದು. ಆದ್ದರಿಂದಲೇ ಭಕ್ತ ಕನಕದಾಸರ ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿದೆ. ಅವರ ವಿಚಾರಧಾರೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ದರ್ಶನ್ ಮಾತನಾಡಿ, ಕನಕದಾಸರು 16ನೇ ಶತಮಾನದಲ್ಲಿ ಮೌಢ್ಯತೆ, ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದವರು. ಅವರ ಸಮ ಸಮಾಜದ ಬೋಧನೆಗಳು ಮತ್ತು ಚಿಂತನೆಗಳು, ಸಂದೇಶಗಳನ್ನು ನಮ್ಮ ಜೀವನದಲ್ಲಿ ಪಾಲಿಸಿ ಅನುಸರಿಸುವ ಮೂಲಕ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಮುಖ್ಯ ಭಾಷಣಕಾರ ಕುಮಾರಸ್ವಾಮಿ ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ. ಶಂಕರ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ನಗರಸಭಾಧ್ಯಕ್ಷ ಶ್ರೀಕಂಠ ಸ್ವಾಮಿ, ಉಪಾಧ್ಯಕ್ಷ ರೆಹನಾಬಾನು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಮುದ್ದುಮಾದೇಗೌಡ, ಕೆಂಪಿಸಿದ್ದನಹುಂಡಿ ಗ್ರಾಪಂ ಅಧ್ಯಕ್ಷ ರವಿ, ಮುಖಂಡರಾದ ಕುಳ್ಳಯ್ಯ, ದಕ್ಷಿಣ ಮೂರ್ತಿ, ಶಿವಸ್ವಾಮಿ, ರಾಜು, ಶ್ರೀನಿವಾಸ ಮೂರ್ತಿ, ವಿದ್ಯಾಸಾಗರ್, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಕೆ.ಎಂ.ಬಸವರಾಜು, ತಹಸೀಲ್ದಾರ್ ಶಿವಕುಮಾರ ಕಾಸ್ನೂರು, ಡಿವೈಎಸ್ಪಿ ರಘು ಸೇರಿದಂತೆ ಇತರರಿದ್ದರು.

ಕೋಟೆಯಲ್ಲಿ ಸಂಭ್ರಮದ ಕನಕದಾಸ ಜಯಂತಿ

ಕೀರ್ತನೆಗಳ ಮೂಲಕ ಜಾತಿ ವ್ಯವಸ್ಥೆ ವಿರುದ್ಧ ಧ್ವನಿಯಾಗಿದ್ದ ಕನಕದಾಸರು: ಶಾಸಕ ಅನಿಲ್



ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ನ.18– ಕನಕದಾಸರು ಕೀರ್ತನೆಗಳ ಮೂಲಕ ಜಾತಿ ವ್ಯವಸ್ಥೆ ವಿರುದ್ಧ ಧ್ವನಿಯಾಗಿದ್ದರು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಸೋಮವಾರ ನಡೆದ ಭಕ್ತ ಕನಕದಾಸರ 537ನೇ ಜಯಂತಿಯಲ್ಲಿ ಮಾತನಾಡಿದ ಅವರು, ಹರಿಭಕ್ತರಾದ ಕನಕದಾಸರು 1509ರಲ್ಲಿ ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದ ಹಿಂದೂ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ದಂಪತಿ ಮಗನಾಗಿ ಜನಿಸಿದರು. ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಸಂತನಾಗುವ ಮೊದಲು ಯೋಧನಾಗಿದ್ದ ಇವರು, ಯುದ್ಧದಲ್ಲಿ ಗಂಭೀರವಾಗಿ ಗಾಯಗೊಂಡರು. ದೇವರ ಲೀಲೆಯಿಂದ ಬದುಕುಳಿದ ನಂತರ ಹರಿದಾಸರಾದರು ಮತ್ತು ತಮ್ಮನ್ನು ದೇವರ ಸೇವೆಯಲ್ಲಿ ತೊಡಗಿಸಿಕೊಂಡರು ಎಂದರು. ಕನಕದಾಸರ ಭಕ್ತಿ ಮೆಚ್ಚಿ ಶ್ರೀಕೃಷ್ಣ ದರ್ಶನ ನೀಡಿದ್ದು, ದೇಶದ ಇತಿಹಾಸದಲ್ಲಿ ಎಂದೂ ಮರೆಯಾಗದ ಘಟನೆ ಎಂದರು.

ವಿಜಯನಗರ ಸಾಮ್ರಾಜ್ಯದ 70 ಹಳ್ಳಿಗಳ ಪಾಳೇಗಾರರಾಗಿದ್ದ ಕನಕದಾಸರು ಕೀರ್ತನೆಗಳ ಮೂಲಕ ಸಮಾಜದ ಸಮಸ್ಯೆಗಳಿಗೆ ದಾರಿ ದೀಪವಾದರೂ ಅಂಬೇಡ್ಕರ್ ಸಂದೇಶದ ಮಾದರಿ ಅವರು ಸಹ ಅತ್ಯುತ್ತಮ ಸಂದೇಶಗಳನ್ನು 16ನೇ ಶತಮಾನದಲ್ಲಿ ಸಾಮಾನ್ಯ ಜನರಿಗೆ ನೀಡಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಕನಕದಾಸರ ಮಾದರಿಯಲ್ಲೇ ಸಮ ಸಮಾಜದ ನಿರ್ಮಾಣಕ್ಕೆ ಎಲ್ಲಾ ಜಾತಿ, ಧರ್ಮದವರನ್ನು ಸಮಾನ ರೀತಿಯಲ್ಲಿ ಕಂಡು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದರು. ಮುಖ್ಯ ಭಾಷಣಕಾರ, ಶಿಕ್ಷಕ ರಮೇಶ್, ತಹಸೀಲ್ದಾರ್ ಶ್ರೀನಿವಾಸ ಮಾತನಾಡಿ, ನಾನು ಎಂಬ ಅಹಂಕಾರ ಬಿಟ್ಟರೆ ಎಲ್ಲವನ್ನು ಸಾಧಿಸಲು ಸಾಧ್ಯ ಎಂಬ ಸಾಮಾನ್ಯ ಜ್ಞಾನವನ್ನು ಜನರಿಗೆ ತಿಳಿಸಿದ ಮಹಾನ್ ಶ್ರೇಷ್ಠ ಕನಕದಾಸರು ಎಂದರು.

ಕಾರ್ಯಕ್ರಮದಲ್ಲಿ ಇಓ ಧರಣೇಶ್, ಕುರುಬ ಸಮಾಜದ ಅಧ್ಯಕ್ಷ ಎಂ.ಬಿ. ಆನಂದ, ಜಯ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಚಿಕ್ಕವೀರನಾಯ್ಕ, ಏಜಾಜ್ ಪಾಷ, ವೀರೇಗೌಡ, ರಾಜು, ಸರಗೂರು ಪಪಂ ಸದಸ್ಯ ಶ್ರೀನಿವಾಸ್, ಎಂ.ಡಿ. ಮಂಚಯ್ಯ, ಶಿವಮೂರ್ತಿ, ಸೌಮ್ಯ, ಅಶೋಕ್, ಮಾಲೇಗೌಡ, ಚಂದ್ರೇಗೌಡ, ಸಫಿ, ಬಸವರಾಜು, ಉಮೇಶ್, ಜವರಯ್ಯ, ಪ್ರಕಾಶ್ ಇನ್ನಿತರರಿದ್ದರು.

ಮಹನೀಯರ ಸಂದೇಶಗಳಿಂದ ಜೀವನ ಸಾರ್ಥಕ

ಶಾಸಕ ರವಿಶಂಕರ್ ಅಭಿಪ್ರಾಯ



ಕನಕದಾಸ ಜಯಂತಿ ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಕೆ.ಆರ್.ನಗರ, ನ.18– ಮಹನೀಯರ ತತ್ವ ಮತ್ತು ಸಂದೇಶಗಳನ್ನು ಅಳವಡಿಸಿಕೊಂಡರೆ ಜೀವನ ಸಾರ್ಥಕವಾಗುತ್ತದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕು ಆಡಳಿತ ಮತ್ತು ತಾಲೂಕು ಕುರುಬರ ಸಂಘದಿಂದ ಪಟ್ಟಣದ ಕಾಗಿನೆಲೆ ಮಠದ ಆವರಣದಲ್ಲಿ ನಡೆದ ಭಕ್ತ ಕನಕದಾಸರ 537ನೇ ಜಯಂತಿಯಲ್ಲಿ ಮಾತನಾಡಿದ ಅವರು ಕನಕದಾಸರು ಕುಲ ಕುಲವೆಂದು ಹೊಡೆದಾಡಬೇಡಿ ಎಂದು ಸಂದೇಶ ನೀಡಿದ್ದು ಇದನ್ನು ಎಲ್ಲರೂ ಅರಿಯಬೇಕೆಂದರು.

ನಾವು ಒಂದೇ ಜಾತಿಗೆ ಸೀಮಿತರಾಗದೆ ಎಲ್ಲರೊಳಗೊಂದು ಎಂಬ ಸಿದ್ಧಾಂತವನ್ನು ಅನುಸರಿಸಿ ಸಂತ ಕವಿಗಳ ಆಶಯದಂತೆ ನಡೆದುಕೊಂಡು ಆ ಯುಗಪುರುಷನಿಗೆ ಗೌರವ ಸಲ್ಲಿಸಬೇಕೆಂದು ತಿಳಿಸಿದರು.

ಕಾಗಿನೆಲೆ ಮೈಸೂರು ಶಾಖಾ ಮಠದ ಶಿವಾನಂದಪುರಿಶ್ರೀಗಳು ಆಶೀರ್ವಚನ ನೀಡಿದರು. ಇದೇ ವೇಳೆ ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಮಾತನಾಡಿದರು. ಮಡಿಕೇರಿ ಬಿಇಓ ಡಾ.ಬಿ.ಸಿ.ದೊಡ್ಡೇಗೌಡ ಕನಕದಾಸರ ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಸಾಧಕರಿಗೆ ಕನಕಶ್ರೀ ಪ್ರಶಸ್ತಿ, ಪ್ರತಿಭಾವಂತ ವಿದ್ಯಾರ್ಥಿಗಳ ಪರವಾಗಿ ಅವರ ಪೋಷಕರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮ ಮುನ್ನಾ ಹಾಸನ–ಮೈಸೂರು ರಸ್ತೆಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿಯಿಂದ ಭಕ್ತ ಕನಕದಾಸರ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ಉಪಾಧ್ಯಕ್ಷ ಸಾಕರಾಜು, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ನಿರ್ದೇಶಕರಾದ ರಾಮಕೃಷ್ಣೇಗೌಡ, ಕೆ.ಎಚ್. ಬುಡೀಗೌಡ, ಜೆ.ಕೃಷ್ಣೇಗೌಡ, ಎಂ.ಎಸ್. ಅನಂತ್, ದೇವರಾಜು, ಜಿಲ್ಲಾ ನಿರ್ದೇಶಕ ಡಿ.ಜೆ.ಬಸವರಾಜು, ಜಿ.ಎಂ.ಹೇಮಂತ್, ಜಿಪಂ ಮಾಜಿ ಸದಸ್ಯರಾದ ಜಿ.ಆರ್. ರಾಮೇಗೌಡ, ಜಯರಾಮೇಗೌಡ, ಪುರಸಭೆ ಸದಸ್ಯರಾದ ಪ್ರಕಾಶ್, ನಟರಾಜು, ಶಿವು ನಾಯಕ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಪಿ. ಪ್ರಶಾಂತ್, ಗ್ಯಾರಂಟಿ ಪ್ರಾಧಿಕಾರ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯ ಶಂಕರ್, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಗರುಡಗಂಭದಸ್ವಾಮಿ, ಜಗದೀಶ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ಡಿ. ನಟರಾಜು, ತಹಸೀಲ್ದಾರ್‌ಗಳಾದ ಜೆ. ಸುರೇಂದ್ರಮೂರ್ತಿ, ಎಂ.ಎಸ್.ನರಗುಂದ್, ಆರ್. ಕೃಷ್ಣಪ್ಪ, ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್ ಸೇರಿದಂತೆ ಇತರರಿದ್ದರು.

ಹನಗೋಡಲ್ಲಿ ಕನಕದಾಸ ಜಯಂತಿ



ಹನಗೋಡಲ್ಲಿ ದಾಸ ಶ್ರೇಷ್ಠ ಕನಕದಾಸರ ಜಯಂತಿ ಆಚರಿಸಲಾಯಿತು. ಈ ವೇಳೆ ಹನಗೋಡು, ದೊಡ್ಡಕಟ್ಟೆ, ಗೌಡಿಕೆರೆಯ ಕನಕದಾಸ ಯುವಕ ಸಂಘದ ವತಿಯಿಂದ ಅನ್ನದಾಸೋಹ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯ ಸಂತೋಷ್, ಸೀನಣ್ಣ, ಪ್ರತಾಪ್, ಮಹೇಶ್, ವೆಂಕಟೇಶ್ ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು.

ದಿಲೀಪ್ ನಿಧನ



ಹೆಚ್.ಡಿ.ಕೋಟೆ, ನ.18– ತಾಲೂಕಿನ ನೇರಳೆ ಹೊಸೂರು ಗ್ರಾಮದ ನಿವಾಸಿ ನಾಗರಾಜು ಅವರ ಪುತ್ರ ದಿಲೀಪ್(25) ಸೋಮವಾರ ನಿಧನರಾದರು.

ಮೃತರು ತಾಯಿ ನಿಲಾಂಬಿಕೆ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ.21ರಿಂದ ದೆಹಲಿಯಲ್ಲೂ ನಂದಿನಿ ಉತ್ಪನ್ನ ಮಾರಾಟ

ಚಿಕ್ಕಕಲ್ಲುಣಿಯಲ್ಲಿ ಹಾಲಿನ ಡೈರಿ ಉದ್ಘಾಟಿಸಿದ ಮೈಮುಲ್ ಅಧ್ಯಕ್ಷ ಆರ್.ಚಲುವರಾಜ್



ಚಿಕ್ಕ ಕಲ್ಲುಣಿ ಡೈರಿಯನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ತಿ.ನರಸೀಪುರ, ನ.18– ರಾಜ್ಯವಲ್ಲದೇ ಹೊರ ರಾಜ್ಯಗಳಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿರುವ ನಂದಿನಿ ಉತ್ಪನ್ನಗಳನ್ನು ರಾಷ್ಟ್ರ ರಾಜಧಾನಿ ದೆಹಲಿ ಜನತೆಗೆ ಪರಿಚಯಿಸುವ ಪ್ರಕ್ರಿಯೆಗೆ ಸಿಎಂ ಸಿದ್ದರಾಮಯ್ಯ ನ.21ಕ್ಕೆ ಚಾಲನೆ ನೀಡಲಿದ್ದಾರೆ ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ತಿಳಿಸಿದರು.

ತಾಲೂಕಿನ ಚಿಕ್ಕಕಲ್ಲುಣಿ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ನಂದಿನಿ ಉತ್ಪನ್ನಗಳು ಈಗಾಗಲೇ ತನ್ನ ಪರಿಶುದ್ಧತೆಯಿಂದ ರಾಜ್ಯಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ. ಅಲ್ಲದೇ ನೆರೆಯ ತಮಿಳುನಾಡು, ಕೇರಳ ಹಾಗೂ ಆಂಧ್ರ ಪ್ರದೇಶದಲ್ಲೂ ಸಹ ತನ್ನ ಮಾರಾಟ ವ್ಯಾಪಿಸಿಕೊಂಡಿದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲೂ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಬೇಕೆಂಬ ಉದ್ದೇಶದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನ.21 ರಂದು ನಂದಿನಿ ಉತ್ಪನ್ನಗಳನ್ನು ಲಾಂಚ್ ಮಾಡಲಿದ್ದು, ಆಡಳಿತ ಮಂಡಳಿ ವಿದೇಶದಲ್ಲೂ ನಂದಿನಿಗೆ ಬೇಡಿಕೆ ಸೃಷ್ಟಿಸಲು ಕಾರ್ಯತಂತ್ರ ರೂಪಿಸಲು ಮುಂದಾಗಿದೆ. ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ನಂದಿನಿ ಹಾಲಿನ ದರ ಹೆಚ್ಚಳ ಮಾಡುವುದಾಗಿ ಸಿಎಂ ಹೇಳಿದ್ದು, ಮುಂದಿನ ದಿನಗಳಲ್ಲಿ ಹೈನುಗಾರರಿಗೆ ಒಳ್ಳೆಯ ದಿನಗಳು ಬರಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಡೈರಿಗೆ ಸ್ವಂತ ಕಟ್ಟಡದ ಅವಶ್ಯಕತೆ ಇದೆ. ಮೈಮುಲ್ ಸ್ವಂತ ಕಟ್ಟಡಕ್ಕೆ ಅನುದಾನ ನೀಡಲು ಸಿದ್ಧವಿದೆ. ಆದರೆ ನೀವು ಸರ್ಕಾರಿ ಜಾಗ ಗುರುತಿಸಿ, ಅಥವಾ ದಾನಿಗಳಿಂದ ಜಾಗ ಪಡೆಯುವ ಪ್ರಕ್ರಿಯೆ ಮುಗಿಸಬೇಕು ಎಂದರು. ಮೈಮುಲ್ ಮಾಜಿ ಅಧ್ಯಕ್ಷ ಸಿ.ಓಂ.ಪ್ರಕಾಶ್ ಮಾತನಾಡಿ, ಗುಣಮಟ್ಟದ ಹಾಲು ಸರಬರಾಜು ಮಾಡದ ಹೊರತು ಯಾವುದೇ ಸಹಕಾರ ಸಂಘದ ಬೆಳವಣಿಗೆ ಸಾಧ್ಯವಾಗದು. ಕಲಬೆರಕೆ ಹಾಲು ಸರಬರಾಜಾದರೆ ಸಂಘ ನಷ್ಟ ಅನುಭವಿಸಬೇಕಾಗುತ್ತದೆ. ಗುಣಮಟ್ಟದ ಹಾಲು ಸರಬರಾಜದಲ್ಲಿ ಉತ್ತಮ ದರ ನೀಡುವ ಜೊತೆಗೆ ಸಂಘದ ಆರ್ಥಿಕ ಪರಿಸ್ಥಿತಿ ಸಹ ಉತ್ತಮವಾಗಲು ಸಾಧ್ಯವಾಗುತ್ತದೆ. ಈ ಭಾಗದಲ್ಲಿ ನೀರಾವರಿ ಉತ್ತಮವಾಗಿದೆ. ಸರ್ವೆ, ನೀಲಗಿರಿ ಸೇರಿದಂತೆ ತರಕಾರಿ ಬೆಳೆಯುವ ಮೂಲಕ ರೈತರು ಶ್ರಮಜೀವನ ಮಾಡುತ್ತಿದ್ದಾರೆ. ಜೊತೆಗೆ ಮನೆಗೆರಡು ಹಸುಗಳನ್ನು ಸಾಕುವ ಮೂಲಕ ಹೈನುಗಾರಿಕೆಗೆ ಹೆಚ್ಚಿನ ಒತ್ತು ನೀಡಿ ನೀವು ಆರ್ಥಿಕವಾಗಿ ಸದೃಢರಾಗಿ, ಸಂಘವನ್ನೂ ಸದೃಢಗೊಳಿಸಿ ಎಂದರು.

ಡೈರಿ ಅಧ್ಯಕ್ಷ ಬಿ.ಸೋಮರಾಜು, ಉಪಾಧ್ಯಕ್ಷೆ ನಾಗಮ್ಮ, ಕಾರ್ಯಕಾರಿ ಮಂಡಳಿ ಸದಸ್ಯರಾದ ನಂಜುಂಡೇಗೌಡ, ಮಹದೇವ, ಬಸವರಾಜು, ಬಸವರಾಜು(ಪಾಪು), ಕೆಂಪೇಗೌಡ, ಪಿ.ಸುಮರಿ, ಸುಂದ್ರಮ್ಮ, ಮೈಮುಲ್ ವ್ಯವಸ್ಥಾಪಕ ಎಲ್.ಆರ್.ಕರಿ ಬಸವರಾಜು, ವಿಸ್ತರಣಾಧಿಕಾರಿ ಎನ್.ದಿವ್ಯಶ್ರೀ, ಸಿ.ಅನಿತಾ, ನಿವೃತ್ತ ವ್ಯವಸ್ಥಾಪಕ ಸಣ್ಣತಮ್ಮೇಗೌಡ, ಚಿದರವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕಮಲ್ಲಪ್ಪ, ಸದಸ್ಯ ಪುಟ್ಟಸ್ವಾಮಿ, ಹೊಸಕೊಪ್ಪಲು ಡೈರಿ ಕಾರ್ಯದರ್ಶಿ ಕೃಷ್ಣೇಗೌಡ, ಕೆಂಪನಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಮಹದೇವ, ದಿವ್ಯ ದರ್ಶನ್, ರಾಮೇಗೌಡನಪುರ ಮರಯ್ಯ, ಚಿದರವಳ್ಳಿ ಪಿಎಸಿಎಸ್ ಮಾಜಿ ಅಧ್ಯಕ್ಷ ಚೌಡಯ್ಯ, ಪಶುವೈದ್ಯ ಡಾ.ರಮೇಶ್, ಕಾರ್ಯದರ್ಶಿ ರಮೇಶ್, ಸತೀಶ್, ತ್ರಿವೇಣಿ ಸಂಘದ ಅಧ್ಯಕ್ಷ ದೇವರಾಜು, ನವೀನ್, ವಿಜಯಕುಮಾರ್, ಸಿಇಓ ಸಿದ್ದರಾಜು ಸೇರಿದಂತೆ ಗ್ರಾಮಸ್ಥರು, ಹಾಲು ಉತ್ಪಾದಕರು ಹಾಜರಿದ್ದರು.

ಸಿಎಫ್‌ಟಿಆರ್‌ಐನಲ್ಲಿ ಜನಜಾತಿಯ ಗೌರವ್ ದಿವಸ್ ಕಾರ್ಯಕ್ರಮ

ದಮನಿತರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದ ದಾರ್ಶನಿಕ ಬಿರ್ಸಾ ಮುಂಡಾ

ಆಂಥ್ರೊಪೊಲಾಜಿಕಲ್ ಸರ್ವೇ ಆಫ್ ಇಂಡಿಯಾದ ದಕ್ಷಿಣ ಪ್ರಾದೇಶಿಕ ಕೇಂದ್ರದ ಉಪನಿರ್ದೇಶಕ ಡಾ.ಹರ್ಷವರ್ಧನ ಅಭಿಮತ

ಮೈಸೂರು,ನ.18(ಪಿಎಂ)– ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಪ್ರತಿಧ್ವನಿಸುತ್ತಿರುವ ಮೇರು ವ್ಯಕ್ತಿತ್ವ ಬಿರ್ಸಾ ಮುಂಡಾ. ಜೊತೆಗೆ ಅವರು ದಮನಿತರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದ ದಾರ್ಶನಿಕರೂ ಹೌದು ಎಂದು ಆಂಥ್ರೊಪೊಲಾಜಿಕಲ್ ಸರ್ವೇ ಆಫ್ ಇಂಡಿಯಾದ ದಕ್ಷಿಣ ಪ್ರಾದೇಶಿಕ ಕೇಂದ್ರದ (ಮೈಸೂರು) ಉಪನಿರ್ದೇಶಕ ಡಾ.ಹರ್ಷವರ್ಧನ ಹೇಳಿದರು.

ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ಚೆಲುವಾಂಬ ಹಾಲ್‌ನಲ್ಲಿ ಸಂಸ್ಥೆ ವತಿಯಿಂದ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜನ್ಮ ವಾರ್ಷಿಕೋತ್ಸವದ ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ಜನಜಾತಿಯ ಗೌರವ್ ದಿವಸ್ ಕಾರ್ಯಕ್ರಮದಲ್ಲಿ 'ಬಿರ್ಸಾ ಮುಂಡಾ ಒಬ್ಬ ಮಾನವಶಾಸ್ತ್ರಜ್ಞ' ವಿಷಯ ಕುರಿತು ಅವರು ಮಾತನಾಡಿದರು.

ಮುಂಡಾ ಬುಡಕಟ್ಟಿನ ಬಿರ್ಸಾ ಮುಂಡಾ ಅವರು ಬ್ರಿಟಿಷ್ ವಸಾಹತುಶಾಹಿ ನಿಯಮಗಳಿಂದ ಅನ್ಯಾಯಕ್ಕೆ ಒಳಗಾಗಿದ್ದರು. ಬ್ರಿಟಿಷರ ವಿರುದ್ಧ ಮಾತ್ರವಲ್ಲದೇ, ಸ್ಥಳೀಯ ಭೂ ಮಾಲೀಕರು ಬುಡಕಟ್ಟು ಜನಾಂಗದವರ ಭೂಮಿ ಕಸಿದುಕೊಳ್ಳುವುದರ ವಿರುದ್ಧವೂ ಬಿರ್ಸಾ ಹೋರಾಟ ನಡೆಸಿದ್ದರು. ಅವರು ತಮ್ಮ ಸಮುದಾಯದ ಹಕ್ಕಿಗಾಗಿ ನಿರಂತರ ಹೋರಾಟ ನಡೆಸಿದರು. ಇವರ ಹೋರಾಟವು ಮಾನವಶಾಸ್ತ್ರ ಕ್ಷೇತ್ರದಲ್ಲಿ ಪ್ರಾಮುಖ್ಯತೆ ಹೊಂದಿದೆ. ಬಿರ್ಸಾ ಮುಂಡಾ ಅವರ ಹೋರಾಟದ ಸಂದೇಶವು ಅವರ ಸಮುದಾಯದಲ್ಲಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಗೊಂಡಿತ್ತು ಎಂದು ತಿಳಿಸಿದರು.

ಸ್ಥಳೀಯ ಆಧ್ಯಾತ್ಮಿಕತೆಯನ್ನು ಪುನರುಜ್ಜೀವನಗೊಳಿಸುವಲ್ಲಿ ಬಿರ್ಸಾ ಮುಂಡಾ ಅವರ ಪಾತ್ರ ಮಹತ್ವದ್ದಾಗಿದೆ. ಮುಂಡಾ ಸಮುದಾಯದ ಸಾಮಾಜಿಕ ಮತ್ತು ಧಾರ್ಮಿಕ ಸಂಘಟನೆಯ ಬಗ್ಗೆ ಮೌಲ್ಯಯುತವಾದ ಒಳನೋಟಗಳನ್ನು ಇವರ ಹೋರಾಟ ಒದಗಿಸುತ್ತದೆ. ವಸಾಹತುಶಾಹಿ ನಿಗ್ರಹ ಮತ್ತು ಸ್ಥಳೀಯ ಅಸ್ಮಿತೆಯ ಪ್ರತಿಪಾದನೆ ಮೂಲಕ ಮಾನವಶಾಸ್ತ್ರೀಯ ವ್ಯಕ್ತಿಯಾಗಿ ಬಿರ್ಸಾ ಮುಂಡಾ ಹೊರಹೊಮ್ಮಿದ್ದಾರೆ. ಅವರು ತಮ್ಮ ಬೋಧನೆಗಳ ಮೂಲಕ ತಮ್ಮ ಸಂಪ್ರದಾಯಗಳು, ಸಾಂಸ್ಕೃತಿಕ ಆಚರಣೆಗಳನ್ನು ಅಳವಡಿಸಿಕೊಳ್ಳಲು ತಮ್ಮ ಅನುಯಾಯಿಗಳನ್ನು ಪ್ರೋತ್ಸಾಹಿಸಿದ್ದರು. ತಮ್ಮ ಪೂರ್ವಜರ ಆಧ್ಯಾತ್ಮಿಕ ನಂಬಿಕೆಗಳಿಗೆ ಮರಳುವುದನ್ನು ಅವರು ತಮ್ಮ ಸಮುದಾಯಕ್ಕೆ ಒತ್ತಿಹೇಳುತ್ತಿದ್ದರು. ಮಾನವಶಾಸ್ತ್ರೀಯ ವ್ಯಕ್ತಿಯಾಗಿ ಬಿರ್ಸಾ ಮುಂಡಾ ಅವರ ಜೀವನವು ಸ್ಥಳೀಯ ಅಸ್ಮಿತೆ, ಆಧ್ಯಾತ್ಮಿಕತೆ ಮತ್ತು ಪ್ರತಿರೋಧದ ಪ್ರಾಮುಖ್ಯತೆಯನ್ನು ಅನಾವರಣಗೊಳಿಸುತ್ತದೆ ಎಂದು ವಿವರಿಸಿದರು.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜನಜಾತಿಯ ಗೌರವ್ ದಿವಸ್ ಕಾರ್ಯಕ್ರಮದಲ್ಲಿ ಬಿರ್ಸಾ ಮುಂಡಾ ಅವರ ಭಾವಚಿತ್ರಕ್ಕೆ ಆಂಥ್ರೊಪೊಲಾಜಿಕಲ್ ಸರ್ವೇ ಆಫ್ ಇಂಡಿಯಾದ ದಕ್ಷಿಣ ಪ್ರಾದೇಶಿಕ ಕೇಂದ್ರದ ಉಪನಿರ್ದೇಶಕ ಡಾ.ಹರ್ಷವರ್ಧನ ಪುಷ್ಪ ನಮನ ಸಲ್ಲಿಸಿದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಅವರ ಪರಂಪರೆಯು ಮುಂಡಾ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕತೆ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ನೀಡುತ್ತದೆ. ಸ್ಥಳೀಯ ಸಮುದಾಯಗಳು ತಮ್ಮ ಭವಿಷ್ಯವನ್ನು ರೂಪಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತವೆ ಎಂಬುದನ್ನು ಅವರ ಜೀವನ ನಮಗೆ ನೆನಪಿಸುತ್ತದೆ. ಮಾನವಶಾಸ್ತ್ರ ಕ್ಷೇತ್ರದಲ್ಲಿ ಬಿರ್ಸಾ ಮುಂಡಾ ಅವರ ಪರಂಪರೆಯು ಸ್ಥಳೀಯ ಸಂಸ್ಕೃತಿಗಳನ್ನು ಅಧ್ಯಯನ ಮಾಡಲು ಹೆಚ್ಚು ಒಳಗೊಳ್ಳುವಿಕೆ ಹಾಗೂ ಉತ್ತಮ ವಿಧಾನ ಕಲ್ಪಿಸುತ್ತದೆ ಎಂದರು.

ಬಿರ್ಸಾ ಮುಂಡಾ ದೇಶದ ಕ್ರಾಂತಿಕಾರಿ ಬುಡಕಟ್ಟು ನಾಯಕ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ವಿಶೇಷವಾಗಿ ಜಾರ್ಖಂಡ್ ಮತ್ತು ಭಾರತದ ಇತರ ಭಾಗಗಳಲ್ಲಿ ಬುಡಕಟ್ಟು ಸಮುದಾಯಗಳು ತಮ್ಮ ಭೂಮಿ, ಸಂಸ್ಕೃತಿ ಮತ್ತು ಅಸ್ಮಿತೆ ಉಳಿಸಿಕೊಳ್ಳುವಲ್ಲಿ ಅವರ ಹೋರಾಟ ಮಹತ್ವದ್ದಾಗಿದೆ. ಅವರ ಜನ್ಮದಿನವಾದ ನ.15 ಅನ್ನು ಜಾರ್ಖಂಡ್ ಸಂಸ್ಥಾಪನಾ ದಿನವಾಗಿ ಆಚರಿಸಲಾಗುತ್ತದೆ. ಜೊತೆಗೆ ಬುಡಕಟ್ಟು ಹಕ್ಕುಗಳು ಹಾಗೂ ಸಾಂಸ್ಕೃತಿಕ ಹೆಮ್ಮೆಯ ಸ್ಮರಣಾರ್ಥ ದಿನವೆಂದೂ ಗುರುತಿಸಲಾಗಿದೆ ಎಂದು ಹೇಳಿದರು.

ಬಿರ್ಸಾ ಮುಂಡಾ ಅವರ ಜೀವನ, ಆಲೋಚನೆ ಮತ್ತು ಕಾರ್ಯಗಳು ಬುಡಕಟ್ಟು ಸಮಾಜ, ಸಂಸ್ಕೃತಿ ಮತ್ತು ಪ್ರತಿರೋಧವನ್ನು ಸ್ಥಳೀಯ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಅಡಿಪಾಯ ಕಲ್ಪಿಸುತ್ತದೆ. ಹಾಗಾಗಿ ಅವರನ್ನು ಮಾನವಶಾಸ್ತ್ರಜ್ಞರು ಎಂದು ಪರಿಗಣಿಸಬಹುದು ಎಂದು ತಿಳಿಸಿದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮತ್ತಿತರರು ಹಾಜರಿದ್ದರು.

ದೆಹಲಿಯ ವಾಯುಗುಣಮಟ್ಟ ತೀವ್ರ ಕುಸಿತ: ವರ್ಕ್ ಫ್ರಮ್ ಹೋಮ್‌ಗೆ ಕೇಂದ್ರದ ಸಿಬ್ಬಂದಿ ಆಗ್ರಹ

ದೆಹಲಿ: ದೆಹಲಿಯ ವಾಯುಗುಣಮಟ್ಟ ತೀವ್ರವಾಗಿ ಕುಸಿತ ಕಾಣುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಿಬ್ಬಂದಿ ವರ್ಕ್ ಫ್ರಮ್ ಹೋಮ್‌ಗೆ ಆಗ್ರಹಿಸಿದ್ದಾರೆ.

ತೀವ್ರ ಮಾಲಿನ್ಯದಿಂದ ಮಟ್ಟಗಳಿಂದ ಆರೋಗ್ಯದ ಮೇಲೆ ಉಂಟಾಗುತ್ತಿರುವ ಪರಿಣಾಮವನ್ನು ತಗ್ಗಿಸಲು ಎಲ್ಲಾ ಕಚೇರಿ ಕಟ್ಟಡಗಳಲ್ಲಿ ಕೆಲಸದ ಸಮಯಗಳನ್ನು ಕಡಿಮೆ ಮಾಡಲು ಮತ್ತು ವಾಯು ಶುದ್ಧಿಕಾರಕಗಳನ್ನು ಅಳವಡಿಸಲು ಮತ್ತು ಮನೆಯಿಂದ ಕೆಲಸ ಮಾಡಲು ಅವಕಾಶ ನೀಡುವಂತೆ ಕೇಂದ್ರ ಸಚಿವಾಲಯ ಸೇವೆ (CSS) ಯನ್ನು ಪ್ರತಿನಿಧಿಸುವ ಸಂಸ್ಥೆ ಡಿಒಪಿಟಿ ಗೆ ಪತ್ರ ಬರೆದು ಮನವಿ ಸಲ್ಲಿಸಿದೆ.

ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ (DoPT) ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ಅಸೋಸಿಯೇಷನ್, ಕಳಪೆ ಗಾಳಿಯ ಗುಣಮಟ್ಟವು ಕೆಲಸದ ಸ್ಥಳದ ಉತ್ಪಾದಕತೆಯ ಮೇಲೆ ಗಮನಾರ್ಹ ಪರಿಣಾಮ ಬೀರಿದೆ ಮತ್ತು ನೌಕರರು ಉಸಿರಾಟದ ಸಮಸ್ಯೆಗಳು, ಕಣ್ಣಿನ ಕಿರಿಕಿರಿ, ಆಯಾಸ ಮತ್ತು ಸಾಮಾನ್ಯ ಅಸ್ವಸ್ಥತೆಯಂತಹ ರೋಗಲಕ್ಷಣಗಳನ್ನು ಅನುಭವಿಸುತ್ತಿದ್ದಾರೆ ಎಂದು ಹೇಳಿದೆ.

"ಎಲ್ಲರ, ವಿಶೇಷವಾಗಿ ಸರ್ಕಾರಿ ಸೇವೆಗಳಲ್ಲಿ ತೊಡಗಿರುವವರ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿದೆ ಎಂದು ಸಿಎಸ್‌ಎಸ್ ಫೋರಂನ ಪತ್ರದಲ್ಲಿ ತಿಳಿಸಲಾಗಿದೆ ಅಪಾಯಕಾರಿ ಗಾಳಿಯ ಗುಣಮಟ್ಟಕ್ಕೆ ನಿರಂತರವಾಗಿ ಒಡ್ಡಿಕೊಳ್ಳುವುದರಿಂದ ನೌಕರರು ಮತ್ತು ಅವರ ಕುಟುಂಬಗಳಲ್ಲಿ ಉಸಿರಾಟದ ಕಾಯಿಲೆಗಳು ಮತ್ತು ಇತರ ಆರೋಗ್ಯ ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗುತ್ತದೆ ಎಂದು ಸಿಎಸ್‌ಎಸ್ ಫೋರಂನ ಪ್ರಧಾನ ಕಾರ್ಯದರ್ಶಿ ಅಶುತೋಷ್ ಮಿಶ್ರಾ ಹೇಳಿದ್ದಾರೆ.

ನೌಕರರಿಗೆ ಓ95 ಮಾಸ್ಕ್ ಮತ್ತು ಇತರ ಅಗತ್ಯ ರಕ್ಷಣಾ ಸಾಧನಗಳನ್ನು ಒದಗಿಸಲಾಗಿರುವುದನ್ನು ಖಚಿತಪಡಿಸಿಕೊಳ್ಳಿ' ಎಂದು ಮಿಶ್ರಾ ಹೇಳಿದ್ದಾರೆ. ಸಿಎಸ್‌ಎಸ್ ಫೋರಮ್ ಸಿಎಸ್‌ಎಸ್ ಅಧಿಕಾರಿಗಳ ಸಂಘವಾಗಿದ್ದು, ಕೇಂದ್ರೀಯ ಕಾರ್ಯದರ್ಶಿಯ ಬೆನ್ನೆಲುಬಾಗಿದೆ

ದೇವಸ್ಥಾನ ಉದ್ಘಾಟನೆ



ಮೈಸೂರು ತಾಲೂಕು ಕೋಟೆಹುಂಡಿ ಗ್ರಾಮದಲ್ಲಿ ನೂತನವಾಗಿ ಜೀರ್ಣೋದ್ಧಾರಗೊಂಡಿರುವ ಚೌಡಳ್ಳಿ ಮಾರಮ್ಮ ಮತ್ತು ಮಲ್ಲೇಶ್ವರ ಸ್ವಾಮಿ ದೇವಾಲಯವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸೋಮವಾರ ಉದ್ಘಾಟಿಸಿದರು. ಈ ವೇಳೆ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವ್ರು, ಯಜಮಾನರಾದ ಗೋಪಾಲೇಗೌಡ, ಧನಗಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಕೋಟೆಹುಂಡಿ ಸುರೇಶ್, ಪಾಪಣ್ಣ, ದೀಪು, ಶಿವಕುಮಾರ್, ಮುಖಂಡರಾದ ಸಿದ್ದರಾಜು, ರಾಮಣ್ಣ ಹಾಗೂ ಗ್ರಾಮಸ್ಥರು ಈ ಸಂದರ್ಭ ಉಪಸ್ಥಿತರಿದ್ದರು.

ಪ್ರೇಕ್ಷಕರ ಮನಗೆದ್ದ ವಿಕಲಚೇತನ ಗಾಯಕರು

ಮೈಸೂರು, ನ.18(ಎಸ್‌ಪಿಎನ್)– ಇಲ್ಲಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಡಾ.ರಾಜಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ವಿಶೇಷಚೇತನರ ಗಾಯನ ಕಾರ್ಯಕ್ರಮವನ್ನು ಕವಿ ಜಯಪ್ಪ ಹೊನ್ನಾಳಿ(ಜಯಕವಿ) ಉದ್ಘಾಟಿಸಿದರು.

ಈ ವೇಳೆ 'ನಾವಾಡುವ ನುಡಿಯೇ ಕನ್ನಡ ನುಡಿ', 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು', ಕೇಳಿಸದೇ ಕಲ್ಲು ಕಲ್ಲಿನಲಿ', 'ಕನಸಲ್ಲಿ ಬಂದವನಾರೆ', 'ನನ್ನೆದೆ ಬಾನಲಿ ರೆಕ್ಕೆಯ', 'ಈ ಭೂಮಿ ಬಣ್ಣದ ಬುಗುರಿ' ಹಾಡು ಸೇರಿದಂತೆ ಇತರೆ ಕನ್ನಡ ಸಿನಿಮಾ ಹಾಡುಗಳನ್ನು ವಿಶೇಷಚೇತನರಾದ ವೀರೇಶ್, ಗೌತಮ್, ಶೈಲಾ, ದಾಲ್ ದೂರಪ್ಪ, ಲಿಂಗರಾಜು ಸೇರಿದಂತೆ ಇತರೆ ಗಾಯಕರು ಅಮೋಘವಾಗಿ ಹಾಡಿ ಪ್ರೇಕ್ಷಕರ ಮನಗೆದ್ದರು.

ನಂತರ ಮಾತನಾಡಿದ ಹಿರಿಯ ಕವಿ ಜಯಪ್ಪ ಹೊನ್ನಾಳಿ, ಡಾ.ರಾಜಕುಮಾರ್ ಅವರು ಸಿನಿಮಾ ರಂಗದ ಪ್ರತಿಯೊಬ್ಬ ಸಹಕಲಾವಿದರೊಂದಿಗೆ ಬೆರೆತು ಆತ್ಮೀಯವಾಗಿ ರುತ್ತಿದ್ದರು. ಅಲ್ಲದೆ, ತಾವು ವಹಿಸುತ್ತಿದ್ದ ಪಾತ್ರಗಳಿಗೆ ಅಭಿನಯದಲ್ಲಿ ತಲ್ಲೀನರಾಗಿ ಭಾವಪರವಶರಾಗಿ ಜೀವ ತುಂಬುತ್ತಿದ್ದರು. ಹಾಗಾಗಿ ಡಾ.ರಾಜ್‌ಕುಮಾರ್ ಅವರನ್ನು ಜನರು ವರನಟ ಎಂದು ಸಂಬೋಧಿಸುತ್ತಿದ್ದರು ಎಂದರು.



ವಿಶೇಷಚೇತನರ ಗಾಯನ ಕಾರ್ಯಕ್ರಮವನ್ನು ಕವಿ ಜಯಪ್ಪ ಹೊನ್ನಾಳಿ(ಜಯಕವಿ) ಉದ್ಘಾಟಿಸಿದರು.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಸಂಗೀತ–ಗಾಯನ ಕ್ಷೇತ್ರಕ್ಕೆ ಯಾವುದೇ ವರ್ಗ ವಯಸ್ಸಿನ ತಾರತಮ್ಯವಿಲ್ಲ. ಸತತ ಅಭ್ಯಾಸದಿಂದ ಸಂಗೀತವನ್ನು ಒಲಿಸಿಕೊಳ್ಳಬಹುದು. ವಿಶೇಷಚೇತನರೂ ಕೂಡ ಅದ್ಭುತ ಗಾಯನ ಮಾಡಬಲ್ಲರು ಎನ್ನುವುದಕ್ಕೆ ಇಂದಿನ ಕಾರ್ಯಕ್ರಮ ಸಾಕ್ಷಿಯಾಗಿದೆ. ಇಂತಹ ಪ್ರತಿಭಾನ್ವಿತರನ್ನು ಗುರುತಿಸುತ್ತಿರುವ ಮೈಸೂರು ಜಯರಾಂ ಅವರ ಕಾರ್ಯ ಉತ್ತಮ ಎಂದರು.

ಈ ವೇಳೆ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಡಾ ರಾಜಕುಮಾರ್ ಕಲಾ ಸೇವಾ ಟ್ರಸ್ಟ್ ಅಧ್ಯಕ್ಷ ಮೈಸೂರು ಜಯರಾಂ, ರಾ.ಬಿ.ನಾಗರಾಜ್, ಶೇಖರ್ ಸೇರಿದಂತೆ ಪದಾಧಿಕಾರಿಗಳು ಇತರರಿದ್ದರು. ಗಾಯಕ ಸುಧೀಂದ್ರ ನಿರೂಪಿಸಿದರು. ವಿಶೇಷಚೇತನರಿಗೆ ದಾನಿಗಳು ನೀಡಿದ್ದ 50 ತರಹದ ದವಸ ಧಾನ್ಯಗಳನ್ನು ವಿತರಿಸಲಾಯಿತು.

ಪರಿಸರ–ನಿಸರ್ಗ ಚಿತ್ರಕಲೆ ಸ್ಪರ್ಧೆ; ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ



ಮೈಸೂರು, ನ18– ಮಕ್ಕಳಲ್ಲಿ ಸೃಜನಶೀಲತೆಗೆ ಉತ್ತೇಜನ ನೀಡುವ ಉದ್ದೇಶದಿಂದ 'ಪರಿಸರ–ನಿಸರ್ಗ' ವಿಷಯದ ಮೇಲೆ ಚಿತ್ರಕಲೆ ಸ್ಪರ್ಧೆಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್, ಮೈಸೂರು ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಫಣೀಶ್ ಮತ್ತು ಕೆ.ವಿ. ಮಲ್ಲೇಶ್ ಹಾಜರಿದ್ದರು. ಕಾರ್ಯಕ್ರಮವನ್ನು ಆರ್. ಕುಮಾರ್ ನೇತೃತ್ವದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಸ್ಪರ್ಧೆಯಲ್ಲಿ 61 ಮಕ್ಕಳು ಭಾಗವಹಿಸಿದ್ದರು. ಬಣ್ಣಗಳಿಂದ ತುಂಬಿದ ಅವರ ಕಲಾಕೃತಿಗಳು ಪರಿಸರದ ಮೇಲಿನ ಅವರ ಭಾವನೆಗಳನ್ನು ಮತ್ತು ಸೃಜನಾತ್ಮಕತೆಯನ್ನು ಪ್ರದರ್ಶಿಸಿದವು. ವಿಜೇತರಾದ ಕ್ಷಿತಿ – 5000 ರೂ, ಧೃತಿ ವಿ. ಶಾ – 3000 ರೂ, ತೀರ್ಥ ಬಿ. ಸೋನಿ – 2000 ರೂ. ನಗದು ಬಹುಮಾನ ನೀಡಲಾಯಿತು.

ಉದ್ಘಾಟನಾ ಭಾಷಣದಲ್ಲಿ ಹೆಚ್.ವಿ. ರಾಜೀವ್, ಮಕ್ಕಳು ನಮ್ಮ ಭವಿಷ್ಯದ ಶಕ್ತಿಯಾಗಿದ್ದಾರೆ. ಅವರ ಕಲ್ಪನೆ ಮತ್ತು ಸೃಜನಶೀಲತೆಗೆ ಪ್ರೋತ್ಸಾಹ ನೀಡುವ ಈ ರೀತಿಯ ಕಾರ್ಯಕ್ರಮಗಳು ಅವುಗಳನ್ನು ಬೆಳೆಸಲು ನೆರವಾಗುತ್ತವೆ. ಪರಿಸರ ರಕ್ಷಣೆ ನಮಗೆ ಸರ್ವಸ್ವವಾಗಿದೆ. ಈ ಸ್ಪರ್ಧೆ ಮೂಲಕ ನಾವು ಮಕ್ಕಳಿಗೆ ಪರಿಸರದ ಮಹತ್ವವನ್ನು ಅರಿತುಕೊಳ್ಳಲು ಪ್ರೇರೇಪಿಸಬಹುದು ಎಂದರು.

ಮುಖ್ಯ ಅತಿಥಿಗಳಾಗಿದ್ದ ಎಂ. ಲಕ್ಷ್ಮಣ್ ಮಾತನಾಡಿ, ಪ್ರಕೃತಿ ಮತ್ತು ಪರಿಸರ ನಮ್ಮ ಜೀವನದ ಅವಿಭಾಜ್ಯ ಅಂಗ ಮಕ್ಕಳಲ್ಲಿ ಈ ಕುರಿತು ಜಾಗೃತಿಯ ಅಗತ್ಯವಿದೆ ಈ ರೀತಿಯ ಸ್ಪರ್ಧೆಗಳು ಬಣ್ಣಗಳಿಂದ ಮಾತ್ರವಲ್ಲ, ಬುದ್ಧಿಯಿಂದ ಕೂಡ ಪರಿಸರದ ಮಹತ್ವವನ್ನು ಅವರ ಹೃದಯದಲ್ಲಿ ಮೂಡಿರುತ್ತವೆ ಎಂದು ಹೇಳಿದರು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗೆ ತರಬೇತಿ

ಮೈಸೂರು,ನ.18–ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಅವರ ಅವಲಂಬಿತ ಯುವಕ ಮತ್ತು ಯುವತಿಯರಿಗೆ ಗ್ರಾಫಿಕ್ ಡಿಸೈನಿಂಗ್, ವಿಡಿಯೋ ಎಡಿಟಿಂಗ್, ಸಾಫ್ಟ್‌ವೇರ್ ಹಾಗೂ ಮಲ್ಟಿಮೀಡಿಯಾ, ಇಲ್ಲಸ್ಟ್ರೇಶನ್ ಕೋರ್ಸ್‌ಗಾಗಿ ಪಠ್ಯೇತರ ಚಟುವಟಿಕೆಗಳ ಕುರಿತು ತರಬೇತಿ ನೀಡಲಾಗುತ್ತಿದ್ದು, ರಾಮಕೃಷ್ಣನಗರದಲ್ಲಿರುವ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಜಿಲ್ಲಾ ಅಧಿಕಾರಿಗಳ ಕಚೇರಿಗೆ ನ.25ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ:0821–2332480.

ಸರಗಳ್ಳನ ಬಂಧನ: ಮಾಂಗಲ್ಯ ಸರ ವಶ

ಮೈಸೂರು, ನ. 18– ಮೈಸೂರಿನ ಕುವೆಂಪುನಗರ ಠಾಣಾ ಪೊಲೀಸರು ಸರಗಳ್ಳನನ್ನು ಬಂಧಿಸಿ 30 ಗ್ರಾಂ ಮಾಂಗಲ್ಯ ಸರವನ್ನು ವಶಪಡಿಸಿಕೊಂಡಿದ್ದಾರೆ. ಶ್ರೀರಾಂಪುರ 2ನೇ ಹಂತದ ಎಲ್‌ಐಜಿ ಕಾಲೋನಿಯ ಸಂಕಲ್ಪ ಸಿದ್ಧಾರ್ಥ ಅಪಾರ್ಟ್‌ಮೆಂಟ್ ಬಳಿ ಅ.10ರಂದು ನಡೆದುಕೊಂಡು ಹೋಗುತ್ತಿದ್ದ ಗೃಹಿಣಿಯ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರವನ್ನು ಸರಗಳ್ಳ ಕಿತ್ತುಕೊಂಡು ಹೋಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಕುವೆಂಪುನಗರ ಠಾಣೆ ಪೊಲೀಸರು ಸರಗಳ್ಳನನ್ನು ಬಂಧಿಸಿ, ಮಾಂಗಲ್ಯ ಸರ ವಶಪಡಿಸಿಕೊಂಡಿದ್ದಾರೆ.

ಉಕ್ರೇನ್ ವಿದ್ಯುತ್ ಸ್ಥಾವರಗಳ ಮೇಲೆ ರಷ್ಯಾ ಬೃಹತ್ ದಾಳಿ

ಮಾಸ್ಕೊ: ರಷ್ಯಾ ಮತ್ತು ಉಕ್ರೇನ್ ಮಧ್ಯದ ಯುದ್ಧವು 1,000 ದಿನಗಳ ಗಡಿಯನ್ನು ಸಮೀಪಿಸುತ್ತಿರುವ ಮಧ್ಯೆ ರಷ್ಯಾ ಭಾನುವಾರ ಉಕ್ರೇನ್‌ನ ಇಂಧನ ಮೂಲಸೌಕರ್ಯ ಮತ್ತು ಇತರ ಗುರಿಗಳ ಮೇಲೆ ತನ್ನ ಅತಿದೊಡ್ಡ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಪ್ರಾರಂಭಿಸಿದೆ. ಕ್ರೆಮ್ಲಿನ್ ಪಡೆಗಳು ಹೈಪರ್ ಸಾನಿಕ್ ಸಿರ್ಕಾನ್ಸ್ ಮತ್ತು ಕಿಂಜಾಲ್‌ಗಳು ಸೇರಿದಂತೆ ಸುಮಾರು 120 ಕ್ರೂಸ್, ಬ್ಯಾಲಿಸ್ಟಿಕ್ ಮತ್ತು ಏರೋಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಮತ್ತು 90 ಡ್ರೋನ್‌ಗಳನ್ನು ಹಾರಿಸಿವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ ಸ್ಕಿ ಹೇಳಿದ್ದಾರೆ. ಉಕ್ರೇನ್‌ನ ವಾಯು ರಕ್ಷಣಾ ಪಡೆಗಳು 140 ಕ್ಕೂ ಹೆಚ್ಚು ಕ್ಷಿಪಣಿ, ಡ್ರೋನ್‌ಗಳನ್ನು ಹೊಡೆದುರುಳಿಸಿವೆ ಎಂದು ಅವರು ಟೆಲಿಗ್ರಾಮ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಉಕ್ರೇನ್‌ನ ಮಿಲಿಟರಿ–ಕೈಗಾರಿಕಾ ಕಾರ್ಯಾಚರಣೆಗಳನ್ನು ಬೆಂಬಲಿಸುವ ಮಿಲಿಟರಿ ವಾಯುನೆಲೆಗಳು, ಅನಿಲ ಉತ್ಪಾದನಾ ಸೌಲಭ್ಯಗಳು ಮತ್ತು ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿರುವುದಾಗಿ ರಷ್ಯಾದ ರಕ್ಷಣಾ ಸಚಿವಾಲಯ ಹೇಳಿಕೊಂಡಿದೆ.

ಡಿಟಿಇಕೆ ನಿರ್ವಹಿಸುವ ಹಲವಾರು ಥರ್ಮೋ ಎಲೆಕ್ಟ್ರಿಕ್ ವಿದ್ಯುತ್ ಸ್ಥಾವರಗಳು ತೀವ್ರವಾಗಿ ಹಾನಿಗೊಳಗಾಗಿವೆ ಎಂದು ಇಂಧನ ಕಂಪನಿ ಟೆಲಿಗ್ರಾಮ್‌ನಲ್ಲಿ ತಿಳಿಸಿದೆ. ಇದು ಈ ವರ್ಷ ತನ್ನ ಸೌಲಭ್ಯಗಳ ಮೇಲೆ ನಡೆದ ಎಂಟನೇ ದೊಡ್ಡ ಪ್ರಮಾಣದ ದಾಳಿಯಾಗಿದೆ ಎಂದು ಅದು ಹೇಳಿದೆ. ಎಷ್ಟು ಸ್ಥಾವರಗಳಿಗೆ ಹಾನಿಯಾಗಿದೆ ಎಂಬುದನ್ನು ಅದು ನಿರ್ದಿಷ್ಟವಾಗಿ ತಿಳಿಸಿಲ್ಲ. ರಾಷ್ಟ್ರವ್ಯಾಪಿ ತುರ್ತು ವಿದ್ಯುತ್ ಕಡಿತ ಘೋಷಿಸಲಾಗಿದೆ ಎಂದು ಉಕ್ರೇನ್ ಇಂಧನ ಸಚಿವ ಜರ್ಮನ್ ಗಲುಶ್ಚೆಂಕೊ ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

ವೈದ್ಯಕೀಯ ಕಾಲೇಜು ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಶೇ.10 ರಷ್ಟು ಹೆಚ್ಚಳ

ಮೈಸೂರು, ನ18(ಎಸ್‌ಪಿಎನ್)– 2024–25ನೇ ಸಾಲಿಗೆ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿನ (ಸ್ವಾಯತ್ತ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜು) ಸ್ನಾತಕೋತ್ತರ (ಎಂಡಿ/ಎಂಎಸ್) ಕೋರ್ಸ್‌ಗಳ ಸೀಟುಗಳಿಗೆ ಈಗಿನ ಶುಲ್ಕಕ್ಕೆ ಶೇ.10ರಷ್ಟು ಹೆಚ್ಚಿಸಿ ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ–3 ಆರ್.ಮಂಜುನಾಥ್ ಆದೇಶಿಸಿದ್ದಾರೆ.

ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳು, ಕರ್ನಾಟಕ ವೃತ್ತಿಪರ ಕಾಲೇಜುಗಳ ಪ್ರತಿಷ್ಠಾನ (ಕೆಪಿಸಿಎಫ್‌ಓ), ಕರ್ನಾಟಕ ಅಲ್ಪಸಂಖ್ಯಾತರ ವೃತ್ತಿಪರ ಕಾಲೇಜು ಸಂಘ (ಎಎಫ್‌ಪಿಸಿಕೆ) ಹಾಗೂ ಕರ್ನಾಟಕ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಕಾಲೇಜುಗಳ ಸಂಘದ (ಕೆಆರ್‌ಎಲ್‌ಎಂಪಿಸಿಎ) ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು ಹಾಗೂ ರಾಜ್ಯದ ಡೀಮ್ಡ್ ವಿವಿ ಮತ್ತು ಖಾಸಗಿ ವಿವಿಯಡಿ ಬರುವ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲಿ 2024–25ನೇ ಸಾಲಿನ ಪ್ರವೇಶ ಶುಲ್ಕವನ್ನು ಶೇ.10 ಹೆಚ್ಚಿಸಲಾಗಿದೆ.

ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜಿನ ಎಂಡಿ/ಎಂಎಸ್ ಕೋರ್ಸ್‌ಗಳಿಗೆ 2023–24ನೇ ಸಾಲಿನಲ್ಲಿ ಕ್ಲಿನಿಕಲ್ ಕೋರ್ಸ್‌ಗೆ ಲಕ್ಷ ರೂ, ಪ್ಯಾರಾ ಕ್ಲಿನಿಕಲ್‌ಗೆ 50 ಸಾವಿರ, ಪ್ರೀ ಕ್ಲಿನಿಕಲ್‌ಗೆ 25 ಸಾವಿರ ಶುಲ್ಕ ನಿಗದಿಯಾಗಿತ್ತು ಇದೀಗ 2024–25ನೇ ಸಾಲಿನಲ್ಲಿ ಕ್ಲಿನಿಕಲ್ ಕೋರ್ಸ್‌ಗೆ 1,10,000, ಪ್ಯಾರಾ ಕ್ಲಿನಿಕಲ್‌ಗೆ 55 ಸಾವಿರ, ಪ್ರೀ ಕ್ಲಿನಿಕಲ್‌ಗೆ 27,500 ರೂಗಳನ್ನು ಕ್ರಮವಾಗಿ ಹೆಚ್ಚಿಸಲಾಗಿದೆ

ಈ ಹಿಂದೆ 2023–24ನೇ ಸಾಲಿನಲ್ಲಿ ಖಾಸಗಿ ಕೋಟಾದಡಿ ಆಯ್ಕೆಯಾಗಿದ್ದ ಕ್ಲಿನಿಕಲ್ ಕೋರ್ಸ್‌ಗೆ 12,48,176 ರೂ., ಪ್ಯಾರಾ ಕ್ಲಿನಿಕಲ್‌ಗೆ 3,12,048, ಪ್ರೀ ಕ್ಲಿನಿಕಲ್‌ಗೆ 1,56,971 ನಿಗಧಿಪಡಿಸಲಾಗಿತ್ತು. ಇದೀಗ 2024–25ನೇ ಸಾಲಿಗೆ ಕ್ಲಿನಿಕಲ್ ಕೋರ್ಸ್‌ಗೆ 13,72,994 ರೂ, ಪ್ಯಾರಾ ಕ್ಲಿನಿಕಲ್‌ಗೆ ರೂ.3,43,253, ಪ್ರೀ ಕ್ಲಿನಿಕಲ್‌ಗೆ ರೂ.1,72,668 ನಿಗದಿಪಡಿಸಲಾಗಿದೆ.

ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ 2023–24ನೇ ಸಾಲಿನ ಕ್ಲಿನಿಕಲ್ ಕೋರ್ಸ್‌ಗೆ 6,98,280 ರೂ, ಪ್ಯಾರಾ ಕ್ಲಿನಿಕಲ್‌ಗೆ 1,74,570 ರೂ., ಪ್ರೀ ಕ್ಲಿನಿಕಲ್‌ಗೆ 87,286 ರೂ. ನಿಗಧಿಪಡಿಸಲಾಗಿತ್ತು ಇದೀಗ 2024–25ನೇ ಸಾಲಿನ ಕ್ಲಿನಿಕಲ್ ಕೋರ್ಸ್‌ಗೆ 7,68,108 ರೂ, ಪ್ಯಾರಾ ಕ್ಲಿನಿಕಲ್‌ಗೆ 1,92,027 ರೂ., ಪ್ರೀ ಕ್ಲಿನಿಕಲ್‌ಗೆ 96,015 ರೂ. ಶುಲ್ಕ ಹೆಚ್ಚಿಸಿ ಆದೇಶಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಂಗುವಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಂಗುವಾ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಮರನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ತಾರಕೇಶ್ವರ(ಕ)+ ಯಲಾಕುನ್ನಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜಯನಗರ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ನಾಪತ್ತೆ

ಮೈಸೂರು, ನ 18– ಮೈಸೂರಿನ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ನಾಪತ್ತೆಯಾಗಿರುವ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಮೂಲತಃ ಚಾಮರಾಜನಗರ ತಾಲೂಕು ಯಾನಗಹಳ್ಳಿ ಗ್ರಾಮದವನಾಗಿದ್ದು, ಮೈಸೂರಿನ ಹೂಟಗಳ್ಳಿಯ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಬೆಳ್ಳಿ ನಾಯಕ(48) ಅವರು ನ. 12ರಂದು ಬೆಳಗ್ಗೆ 9 ಗಂಟೆಗೆ ಗಾರೆ ಕೆಲಸಕ್ಕೆ ಹೋಗುವುದಾಗಿ ತಿಳಿಸಿ ಮನೆಯಿಂದ ಹೊರ ಹೋದವರು ಮತ್ತೆ ವಾಪಸ್ ಆಗಿಲ್ಲ ಎಂದು ಅವರ ಪತ್ನಿ ಭಾಗ್ಯ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಮೈಸೂರಿನ ಮಾದೇಶ್ವರ ಬಡಾವಣೆಯಲ್ಲಿ ರೂಂ ಮಾಡಿಕೊಂಡು ವಿದ್ಯಾವರ್ಧಕ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡುತ್ತಿದ್ದ ಎಂ.ಇ. ರಕ್ಷಿತ್(24) ಎಂಬ ವಿದ್ಯಾರ್ಥಿ ಸೆಪ್ಟೆಂಬರ್ 29ರಂದು ಊರಿಗೆ ಹೋಗುವುದಾಗಿ ತಿಳಿಸಿ ಹೋದವನು ನಾಪತ್ತೆಯಾಗಿದ್ದಾನೆ. ಈ ಸಂಬಂಧ ಈತನ ಸಂಬಂಧಿ ಎಂ.ಕೆ. ವಿನಯ್‌ಕುಮಾರ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಗ್ರಾಮಲೆಕ್ಕಿಗ ಹುದ್ದೆ ನೇಮಕಾತಿ ಪರೀಕ್ಷೆ ಬರೆಯಲು ತೆರಳಿದ್ದ ಎಂ.ಎಸ್. ಅಮೃತ(20) ಎಂಬ ಬಿಬಿಎ ಪದವೀಧರೆ ನಾಪತ್ತೆಯಾಗಿದ್ದಾಳೆ. ಖಾಸಗಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಈಕೆ, ಗ್ರಾಮ ಲೆಕ್ಕಿಗ ಹುದ್ದೆ ನೇಮಕಾತಿ ಪರೀಕ್ಷೆ ಬರೆಯಲೆಂದು ಅಕ್ಟೋಬರ್ 27ರಂದು ಬೆಳಗ್ಗೆ ಮನೆಯಿಂದ ಹೋದವಳು ಮತ್ತೆ ವಾಪಸ್ ಆಗಿಲ್ಲ ಈ ಸಂಬಂಧ ಈಕೆಯ ತಾಯಿ ಎಂ.ವಿ. ಸುಮಾ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಕುಂಬಾರಕೊಪ್ಪಲಿನ ಮಹದೇಶ್ವರ ಬಡಾವಣೆಯಲ್ಲಿ ವಾಸವಿದ್ದ ಕಮಲಮ್ಮ (80) ಎಂಬುವರು ಅಕ್ಟೋಬರ್ 31ರಂದು ಮನೆಗೆ ಬೀಗ ಹಾಕಿಕೊಂಡು ಹೋದವರು ನಾಪತ್ತೆಯಾಗಿದ್ದಾರೆ. ಈ ಸಂಬಂಧ ಅವರ ಪುತ್ರ ರವಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಇವರುಗಳ ಬಗ್ಗೆ ಮಾಹಿತಿ ಇರುವವರು ವಿಜಯನಗರ ಠಾಣೆ ದೂರವಾಣಿ ಸಂಖ್ಯೆ 0821–2418317 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಚೀಟಿ ಎಪಿಎಲ್‌ಗೆ ಪರಿವರ್ತನೆ

ಮಾತ್ರ ಬಿಪಿಎಲ್ ಕಾರ್ಡ್ ವಿತರಿಸಲಾಗಿದೆ, ಆದರೆ ನಮ್ಮಲ್ಲಿ ಶೇಕಡ 80ರಷ್ಟು ಮಂದಿ ಇಂತಹ ಚೀಟಿ ಹೊಂದಿದ್ದಾರೆ.

ಅನರ್ಹರಿಗೆ ಇಂತಹ ಸವಲತ್ತನ್ನು ಮುಂದುವರೆಸಲು ಸಾಧ್ಯವಿಲ್ಲ. ಆದರೆ, ಅವರು ಎಪಿಎಲ್ ಕಾರ್ಡ್ ಪಡೆದು ಅದರಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪಡೆದುಕೊಳ್ಳಬಹುದು. ಆದಾಯ ತೆರಿಗೆ ಪಾವತಿಸುವವರು, ಸುಸ್ಥಿತಿಯಲ್ಲಿರುವವರು ಈ ಸವಲತ್ತು ಪಡೆದು ಸರ್ಕಾರದ ಯೋಜನೆಗಳ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಉಳ್ಳವರಿಗೆ ಇನ್ನು ಮುಂದೆ ಬಿಪಿಎಲ್ ಸವಲತ್ತು ನೀಡುವುದಿಲ್ಲ. ಪ್ರತಿಪಕ್ಷಗಳು ನಮ್ಮ ಈ ನಿರ್ಧಾರವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತವೆ. ನಾವು ಇದಕ್ಕೆ ಜಗ್ಗುವುದಿಲ್ಲ, ಅನರ್ಹಪಡಿತರ ಚೀಟಿಗಳ ನಿರ್ಮೂಲನೆ ಕಾರ್ಯ ಮುಂದುವರೆಸುತ್ತೇವೆ ಎಂದರು.

ಶಾಸಕರನ್ನು ಆಗ ಕಳುಹಿಸಿದ್ದೇ ಸಿದ್ದರಾಮಯ್ಯ!

ಆಫರ್ ಬಗ್ಗೆ ದಾಖಲೆ ಇದ್ದರೆ ರವಿ ಗಣಿಗ ಅದನ್ನು ಬಿಡುಗಡೆ ಮಾಡಲಿ. ವಿಷಯವನ್ನು ಬೇರೆ ಕಡೆಗೆ ತಿರುಗಿಸಲು ಸುಮ್ಮನೆ ಮಾತನಾಡುತ್ತಿದ್ದಾರೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಸಿಕ್ಕಿ ಹಾಕಿಕೊಂಡಿದ್ದಾರೆ. ಹೀಗಾಗಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. 100 ಕೋಟಿ ಅಲ್ಲ, 500 ಕೋಟಿ ಬಗ್ಗೆ ಮಾತಾಡಲಿ. ದಾಖಲೆ ಇದ್ದರೆ ಕೊಡಿ ನಮ್ಮ ಸರ್ಕಾರ ಕ್ರಮ ಕೈಗೊಳ್ಳುತ್ತೆ. ಬರೀ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರು ಮತ್ತು ಲೇಟ್. ಆರ್. ಕದಿರೇಷನ್ ರವರ ಕಾನೂನುಬದ್ಧ ವಾರಸುದಾರರಾದ 1] ಶ್ರೀಮತಿ. ಜಯಲಕ್ಷ್ಮೀ, 2] ಶ್ರೀಮತಿ. ಕಾಂಚನ ಕೆ., 3] ಶ್ರೀಮತಿ. ವಿಶ್ವಪ್ರಿಯ ಕೆ. ಮತ್ತು 4] ಶ್ರೀಮತಿ. ಕೃತಿಕಾ ನಂದಿನಿ ಕೆ., ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಯರಗನಹಳ್ಳಿ ಗ್ರಾಮಕ್ಕೆ ಸೇರಿದ [ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಒಟ್ಟು ವಿಸ್ತೀರ್ಣ 38¼ ಗುಂಟೆ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಹಾಗೂ ಚಕ್ಕುಬಂದಿ, ವಿವರ ಈ ಕೆಳಕಂಡಂತಿದೆ:

ಸರ್ವೆ ನಂ.	ವಿಸ್ತೀರ್ಣ [ಗು]	ಅನ್ಯಕ್ರಾಂತ ಆದೇಶ ಸಂಖ್ಯೆ & ದಿನಾಂಕ	Boundary			
			East	West	North	South
47/1 B	32	ALN (1) CR84/2011-12 dt. 12-12-2011	ಸ. ನಂ. 47/1	ಸ. ನಂ. 47/2 (6¼ ಗು)	ಸ. ನಂ. 48	ರಸ್ತೆ
47/2	6 ¼	MYSDC-ALN1/ALN39/ 2023 E247207 dt. 11-12-2023	ಸ. ನಂ. 47/1B (32ಗು)	30 ಮೀಟರ್ ರಸ್ತೆ, [ಡಾ. ರಾಜ್ ಕುಮಾರ್ ರಸ್ತೆ] ಮತ್ತು ಸ. ನಂ. 47/2	ಸ. ನಂ. 48	ರಸ್ತೆ

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್, ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641, email: sldlawfirm2021@gmail.com

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು